
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಫೆಬ್ರವರಿ 23, 2011 ರೂ. 12/-

ಅಕ್ಷರ ನೋವು ಮತ್ತು ನಿರಂಬಳತೆ



ಭ್ರಷ್ಟರ ಸಂತೆಯಿಂದ ಎದ್ದುಹೋದ ಸಂತ



ಮೀಡಿಯಾ ವಲಸೆ

ಬೆಳಗಾವಿ

ಸಿಕ್ಕಿಬಿದ್ದ ಹಿಂದೂ ಭಯೋತ್ಪಾದಕ

ಬಳ್ಳಾರಿ

ಬೆಟ್ಟಿಂಗ್ ದಂಧೆಗೆ ಜೈನ್ ಬಲಿ

ದಕ್ಷಿಣ ಕನ್ನಡ

ನಳಿನ್–ಮಲ್ಲಿಕಾ ಮಧ್ಯರಾತ್ರಿ ಮಸಲತ್ತು!



ಗುಡಗೇರಿ ಬಸವರಾಜ

ಮೌನವಾಯಿತು ಗಂಡು ಮೆಟ್ಟಿದ ನೆಲದ ಗಂಡು ಧ್ವನಿ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಡಾಕ್ಟರೇಟ್ ಮತ್ತು ಗೌರವ ಡಾಕ್ಟರೇಟ್ ವ್ಯತ್ಯಾಸ ಗೌರವದ್ದು!



ಶಿವಸುಂದರ್ ಚಾರ್ವಾಕ

ಅಂತೂ‌ಇಂತೂ ರಾಜ್ಯಪಾಲರು ಚಿದಾನಂದ ಮೂರ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಒಪ್ಪುವ ಮೂಲಕ ಕರ್ನಾಟಕ ಸಾರಸ್ವತ ಲೋಕದಲ್ಲಿ ಉಂಟಾಗಿದ್ದ ವಿಚಿತ್ರ ವಿವಾದವೊಂದು ಬಗೆಹರಿದಿದೆ. ಆದರೆ ಈ ಪ್ರಕರಣದಲ್ಲಿ ಗೌರವ ಪಡೆದುಕೊಂಡವರಾರು ಮತ್ತು ಕಳೆದುಕೊಂಡವರಾರು ಎಂಬ ಪ್ರಶ್ನೆ ಮಾತ್ರ ಇನ್ನೂ ಉಳಿದಿದೆ.

ವಿಚಿತ್ರವೆಂದರೆ ರಾಜ್ಯಪಾಲರು ಡಾಕ್ಟರ್ ಚಿದಾನಂದ ಮೂರ್ತಿಗಳವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು 'ತಡೆಹಿಡಿದಿದ್ದರಿಂದ' ಉಂಟಾದ ವಿವಾದವು ಕನ್ನಡದ ಸಾರಸ್ವತ ಲೋಕದಲ್ಲಿ ಅಭೂತಪೂರ್ವ ಮತ್ತು ಕುತೂಹಲಕಾರಿಯಾದ ಒಗ್ಗಟ್ಟನ್ನು ಉಂಟುಮಾಡಿದೆ. ಆದರೆ ಇದು ಕನ್ನಡ ಸಾರಸ್ವತ ಲೋಕದ ಸಾಮರ್ಥ್ಯವೋ? ಬಲಹೀನತೆಯೋ? ಎಂಬುದು ಚರ್ಚಾಸ್ಪದವಾದ ವಿಷಯವಾಗಿದೆ.

"ಚಿದಾನಂದ ಮೂರ್ತಿಗಳು ಗೌರವ ಡಾಕ್ಟರೇಟ್ ಪಡೆಯುವ ಎಲ್ಲಾ ಅರ್ಹತೆಗಳನ್ನು ಪಡೆದುಕೊಂಡಿದ್ದರು. ಆದರೆ ಅವರಿಗೆ ರಾಜ್ಯಪಾಲರು 'ರಾಜಕೀಯ' ಮಾಡಿ ಆ ಗೌರವ ತಪ್ಪಿಸಿದರು. ಚಿದಾನಂದ ಮೂರ್ತಿಗಳ ಒಟ್ಟು ವ್ಯಕ್ತಿತ್ವದಲ್ಲಿ ಕೋಮುವಾದಿ ಚಿಂತನೆಗಳು ಕೇವಲ ಒಂದು ಅಂಶವಷ್ಟೆ. ಒಟ್ಟಾರೆ ಅವರ ವ್ಯಕ್ತಿತ್ವ 'ಕನ್ನಡ-ಕರ್ನಾಟಕ-ಕನ್ನಡಿಗ'ರ ಪರ. ಹೀಗಾಗಿ ಬೇರೆ ರಾಜ್ಯದಿಂದ ಬಂದ ಬೇರೇ ಯಾರೋ ಒಬ್ಬರು ಹಿರಿಯ ಕನ್ನಡಿಗರಿಗೆ ಅವಮಾನ ಮಾಡುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ" ಎಂಬುದು ಚಿದಾನಂದ ಮೂರ್ತಿಗಳನ್ನು ಬೆಂಬಲಿಸಿದ ಕನ್ನಡದ ಸಾರಸ್ವತ ಲೋಕದ ಗಣ್ಯ ಬುದ್ಧಿಜೀವಿಗಳು ಮಾಡುತ್ತಿರುವ ವಾದ. ಆದರೆ ಇದು ಇಡೀ ಕನ್ನಡ ಸಾರಸ್ವತ ಲೋಕಕ್ಕೆ 'ಮಾಡಿದ ಅನ್ಯಾಯ ಎಂಬಂತೆ 77ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇಡೀ ಕರ್ನಾಟಕದ ಬಗ್ಗೆ ಮಾಡಿರುವ ಕೇವಲ ಒಂಭತ್ತು ನಿರ್ಣಯಗಳಲ್ಲಿ ಇದನ್ನೂ ಒಂದು ಪ್ರಮುಖ ನಿರ್ಣಯವಾಗಿ ಸೇರಿಸಿದ್ದು ಕನ್ನಡಿಗ ದಲಿತ-ರೈತಾಪಿ-ಮಹಿಳೆಯರ ಬದುಕು ಮತ್ತು ಕನ್ನಡ ಭಾಷೆಯ ಮಾನ ಮರ್ಯಾದೆ ಬೀದಿಪಾಲಾದಾಗ ಅದನ್ನು ವಿರೋಧಿಸಿ ಎಂದೂ ಬೀದಿಗೆ ಬರದ ಕನ್ನಡ ಸಾಹಿತ್ಯ ಪರಿಷತ್ತು ಚಿದಾನಂದ ಮೂರ್ತಿಗಳಿಗೆ ಗೌರವ ಡಾಕ್ಟರೇಟ್ ಕೊಡಿಸಲು ಬೀದಿ ಹೋರಾಟ ನಡೆಸುವುದಾಗಿ ಹೇಳಿದ್ದು ಎಲ್ಲವೂ ವರ್ತಮಾನದ ಸೋಜಿಗದ ಹಾಗೂ ವಿಷಾದದ ಸಂಗತಿಯಾಗಿ ಕಾಣುತ್ತಿವೆ. ವೆಂಕಟಸುಬ್ಬಯ್ಯನವರ ಉದ್ಘಾಟನಾ ಭಾಷಣದ ಆಶಯಕ್ಕೂ, ಸಮ್ಮೇಳನದಲ್ಲಿ ತೆಗೆದುಕೊಂಡ ಈ ನಿರ್ಣಯದ ಆಶಯಕ್ಕೂ ತಾಳಮೇಳವೇ ಇಲ್ಲದಂತಾಗಿದೆ.

ಈ ಪ್ರಕರಣ ಮುಖ್ಯವಾಗಿ ಐದು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

1. ಗೌರವ ಡಾಕ್ಟರೇಟ್ ಪದವಿ ನೀಡಲು ಕೇವಲ ವಿದ್ವತ್ತು ಮಾತ್ರ ಮಾನದಂಡವೇ?
2. ವಿದ್ವತ್ತು ಮಾತ್ರ ಇದ್ದು ಸಾಂವಿಧಾನಾತ್ಮಕ ಆಶಯಗಳಿಗೆ ವಿರುದ್ಧವಾದ ಚಿಂತನೆ ಮತ್ತು ಕ್ರಿಯೆ ಇದ್ದವರಿಗೆ ಸಾಂವಿಧಾನಾತ್ಮಕ ಸಂಸ್ಥೆಗಳು ಮನ್ನಣೆ ನೀಡಿ ಗೌರವಿಸುವುದು ಸರಿಯೇ?
3. ಈ ಹಿನ್ನೆಲೆಯಲ್ಲಿ ಚಿದಾನಂದ ಮೂರ್ತಿಗಳ ವಿದ್ವತ್ತು ಮತ್ತು ವ್ಯಕ್ತಿತ್ವ ಗೌರವ ಡಾಕ್ಟರೇಟ್ ಮನ್ನಣೆಗೆ ಅರ್ಹವಾಗಿತ್ತೇ?
4. ರಾಜ್ಯಪಾಲರ ನಿರ್ಣಯ ಅಕ್ರಮವೇ? ಅಧಿಕಾರ ದುರುಪಯೋಗವೇ?
5. ಕನ್ನಡದ ಸಾರಸ್ವತ ಲೋಕದಲ್ಲಿನ ಎಡ-ಬಲಗಳಲ್ಲಿನ ಈ ಅಭೂತಪೂರ್ವ ಒಗ್ಗಟ್ಟು ಕೇವಲ ಸಾಂದರ್ಭಿಕವೇ?


ಚಿದಾನಂದ ಮೂರ್ತಿಗಳು ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆ ಹಾಗೂ ಕನ್ನಡ ಉಳಿಸಲು ನೀಡಿರುವ ಕಾಣಿಕೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ಉದಾರವಾದಿ ಸಾಹಿತಿಗಳು ಮಾಡುತ್ತಿರುವ ವಾದ ಈವರೆಗೆ ಚಿದಾನಂದ ಮೂರ್ತಿಗಳು ಕನ್ನಡ ಸಂಸ್ಕೃತಿಯ ಮೂಲಧಾತುವಾದ ಸೌಹಾರ್ದ ಸಂಸ್ಕೃತಿಯ ಮೇಲೆ ನಡೆಸಿರುವ ಬೌದ್ಧಿಕ ದಾಳಿಗಳನ್ನೆಲ್ಲಾ ತೆರೆಮರೆಗೆ ಸರಿಸುತ್ತಿದೆ. ಚರ್ಚ್ ಮೇಲೆ ದಾಳಿಯಾದಾಗ, ಬಾಬ್ರಿ ಮಸೀದಿ ಕೆಡವಿದಾಗ, ಬಾಬಾ ಬುಡನ್‌ಗಿರಿಯನ್ನು ಸಂಘಪರಿವಾರ ದಕ್ಷಿಣದ ಅಯೋಧ್ಯಾ ಮಾಡಲು ಹೊರಟಾಗ ಪ್ರತಿಯೊಂದು ಸಂದರ್ಭದಲ್ಲೂ ಅವರ ಸಂವಿಧಾನಬಾಹಿರ ದಾಳಿಗಳಿಗೆ 'ಇತಿಹಾಸ ಸಂಶೋಧನೆ'ಯ ಬೆಂಬಲವನ್ನು ಒದಗಿಸಿಕೊಟ್ಟವರು ಚಿದಾನಂದ ಮೂರ್ತಿಗಳು. ಈಗ ಸಾರಸ್ವತ ಲೋಕದ ಈ ಅನಿರೀಕ್ಷಿತ ಬೆಂಬಲದಿಂದಾಗಿ ತಾನು ಈವರೆಗೆ ಪ್ರತಿಪಾದಿಸುತ್ತಾ ಬಂದಿದ್ದೆಲ್ಲಾ ಸತ್ಯವೆಂದೂ, ಆದ್ದರಿಂದ ಈಗ ಆಗಿರುವ ಅನ್ಯಾಯ ಒಬ್ಬ ಸತ್ಯವಾದಿಗೆ ಆಗಿರುವ ಅನ್ಯಾಯವೆಂದೂ ಚಿಮೂ ಹೇಳುತ್ತಿದ್ದಾರೆ. ತಮ್ಮ ಪ್ರಚ್ಛನ್ನ ಕೋಮುವಾದಕ್ಕೆ ಅವರು ಈವರೆಗೆ ತೊಡಿಸುತ್ತಾ ಬಂದಿದ್ದ ಸತ್ಯದ ಮುಖವಾಡಕ್ಕೆ ಸಾರಸ್ವತ ಲೋಕದ ಈ ಬೆಂಬಲ ಮಾನ್ಯತೆ ನೀಡಿದಂತಾಗಿದೆ.


"ಇಡೀ ಕನ್ನಡದ ಜನಮಾನಸವೇ ಭಾವನಾತ್ಮಕವಾಗಿ ಸಾಹಿತ್ಯ ಸಮ್ಮೇಳನದಲ್ಲಿ ಒಂದಾಗಿ ಸಂಭ್ರಮಿಸುತ್ತಿದ್ದ ಸಂದರ್ಭದಲ್ಲಿ ಒಬ್ಬ ಕನ್ನಡಿಗೇತರ ರಾಜ್ಯಪಾಲ ಮಾಡಿದ ಅಪಮಾನವನ್ನು ಜನ ಸಹಿಸಲಿಲ್ಲ. ಆದ್ದರಿಂದ ಚಿದಾನಂದ ಮೂರ್ತಿಗಳಿಗೆ ಅಭೂತಪೂರ್ವ ಬೆಂಬಲ ಸಿಕ್ಕಿತೇ ಹೊರತು ಅದು ಅವರ ಕೋಮುವಾದೀ ಚಿಂತನೆಗೆ ನೀಡಿದ ಬೆಂಬಲವಲ್ಲ" ಎಂದು ಚಂಪಾರಂಥವರು ಹೇಳುತ್ತಾರೆ. ಇದರಲ್ಲಿ ಗಮನಿಸತಕ್ಕ ಒಂದು ಅಂಶವಿರುವುದು ನಿಜವಾದರೂ ಚಂಪಾರಂತವರೂ ಸಹ ಸಮ್ಮೇಳನ ಕಾಲಘಟ್ಟದಲ್ಲಿ ಚಿದಾನಂದ ಮೂರ್ತಿಗಳ ಕನ್ನಡತ್ವ ವಿರೋಧೀ ಕೋಮುವಾದವನ್ನು ಅಪ್ರಧಾನಗೊಳಿಸಿ ಅವರ ತಥಾಕಥಿತ ಕನ್ನಡ ಸೇವೆಯೇ ಪ್ರಧಾನ ಎಂದು ಹೇಳಿದ್ದೂ ಸಹ ಚಿದಾನಂದ ಮೂರ್ತಿಗಳ ಪರವಾಗಿ ಭಾವನಾತ್ಮಕ ಬೆಂಬಲ ರೂಪುಗೊಳ್ಳಲು ಕಾರಣವಾಗಲಿಲ್ಲವೇ ಎಂಬುದು ಗಮನಿಸತಕ್ಕ ವಿಷಯ.

"ಸಮ್ಮೇಳನದ ಸಂದರ್ಭದಲ್ಲಿ ಅಲ್ಲದೇ ಇತರ ಸಂದರ್ಭಗಳಲ್ಲಿ ಚಿದಾನಂದ ಮೂರ್ತಿಗಳಿಗೆ ಈ ಬಗೆಯ ಸಾಮಾಜಿಕ ಮನ್ನಣೆ ನೀಡುವಂಥಾ ಗೌರವ ಪ್ರದಾನಗಳು ನಡೆದಿದ್ದರೆ ಪ್ರಾಯಶಃ ನಾವೆಲ್ಲರೂ ವಿರೋಧಿಸುತ್ತಿದ್ದೆವು" ಎಂದು ಹೇಳುವಲ್ಲಿ ಚಂಪಾರವರು ಅವರ ಬಗೆಗೆ ರಾಜಿ ಇಲ್ಲದ ವಿಮರ್ಶೆಗೆ ಮರಳುತ್ತಿದ್ದಾರೆ.

"ಆದರೆ ಅನಂತಮೂರ್ತಿಗಳಂತೂ ಚಿಮೂ ಹಿಂದೂತ್ವವಾದಿಗಳೇ ಆಗಿದ್ದರೂ ಅವರ ಕನ್ನಡ ಸೇವೆ, ಸಂಶೋಧನೆ ಇತ್ಯಾದಿ ಸೇರಿಕೊಂಡಂತೆ ಅವರ ಇಡೀ ವ್ಯಕ್ತಿತ್ವಕ್ಕೆ ಗೌರವ ಡಾಕ್ಟರೇಟ್ ಕೊಡುವುದರಲ್ಲಿ ಯಾವುದೇ ತಪ್ಪಿಲ್ಲ" ಎಂದು ವಾದಿಸುತ್ತಾರೆ. ಅನಂತಮೂರ್ತಿಗಳಂತವರ ನಿಲುವುಗಳು ಮೇಲ್ನೋಟಕ್ಕೆ ಪ್ರಬುದ್ಧ ಮತ್ತು ಮಾನವತಾವಾದಿ ನಿಲುವು ಎಂದೆನಿಸಬಹುದಾದರೂ ಅದರ ಹಿಂದೆ ಚಿಮೂಗಳಂತವರ ಅನ್ಯಾಕ್ರಮಣಕಾರಿ ಚಿಂತನೆ ಮತ್ತು ಕ್ರಿಯೆಗಳಿಂದ ನೊಂದು ಬೇಯುತ್ತಿರುವ ಬಹುಸಂಖ್ಯಾತ ದಲಿತ-ಶೂದ್ರ-ಅಲ್ಪಸಂಖ್ಯಾತರ ನೋವು, ಶೋಷಣೆಗಳಿಗಿಂತ ಚಿಮೂರವರ ವಿದ್ವತ್ತಿಗೆ ಹೆಚ್ಚಿನ ಕಿಮ್ಮತ್ತನ್ನು ನೀಡುವ ಅಮಾನವೀಯತೆ ಅಡಕವಾಗಿದೆ. ಅದೇ ಸಮಯದಲ್ಲಿ ಹಿಂದೂತ್ವದ ಕ್ಯಾಂಪಿನಲ್ಲಿರುವ ಚಿಮೂಗೂ, ಮೂರ್ಖ ತೊಗಾಡಿಯಾಗೂ ಇರುವ ವ್ಯತ್ಯಾಸವನ್ನು ನಾವು ಮರೆಯಬಾರದು ಎಂಬಂತಹ ಜಾಣ ಕುರುಡಿನ ವಾದಗಳನ್ನು ಹಲವರು ಉಣಬಡಿಸುತ್ತಾರೆ. ವಾಸ್ತವವಾಗಿ ಬಿಜೆಪಿ ಕ್ಯಾಂಪಿನಲ್ಲಿ ಅಡ್ವಾಣಿ ಬೇರೆ, ವಾಜಪೇಯಿಯಂಥ ಗೌರವಾನ್ವಿತ ಮನುಷ್ಯ ಬೇರೆ ಎಂಬ ವಾದಗಳನ್ನು ಈ ಬಗೆಯ "ಪಕ್ಷಪಾತಿ ಮಾನವತಾವಾದಿಗಳು" ಮಾಡಿಕೊಂಡು ಬಂದಿದ್ದಾರೆ.

ಗುಜರಾತ್ ಹತ್ಯಾಕಾಂಡ ಸಂಭವಿಸಿದಾಗ ವಾಜಪೇಯಿಯವರು ಪಕ್ಷದ ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿ ಸ್ಥಾನದಲ್ಲಿದ್ದರೂ ಮೋದಿಗೆ ಶಿಕ್ಷೆ ಕೊಡುವುದರ ಬದಲು ಅವರನ್ನು ರಕ್ಷಿಸಿದರು. ಗುಜರಾತ್ ಹತ್ಯಾಕಾಂಡ ನಡೆದಾಗ ವಾಜಪೇಯಿಯವರ ಮನಸ್ಸಿನಲ್ಲಿ ನಿಜಕ್ಕೂ ಪಶ್ಚಾತ್ತಾಪದ ಭಾವನೆ ಉಂಟಾಗಿತ್ತೇ ಇಲ್ಲವೇ, ಅದನ್ನು ನೀಗಿಕೊಳ್ಳಲು ಅವರು ಏನು ಮಾಡಿದರು ಎಂಬುದು ಅವರ ಸಾಮಾಜಿಕ ಕ್ರಿಯೆಯಿಂದ ಸಾಬೀತಾಗಬೇಕೇ ವಿನಃ ಅವರ ವ್ಯಕ್ತಿಗತವಾಗಿ ಎಂತಹ ತಳಮಳಕ್ಕೆ ಗುರಿಯಾದರು ಎಂಬುದರಲ್ಲಲ್ಲ. ಅನಂತಮೂರ್ತಿಗಳೇ ಹೇಳುವಂತೆ ಅಂಥ ವೈಯಕ್ತಿಕ ತಳಮಳಗಳು ಸಾಹಿತ್ಯಕ್ಕೆ ವಸ್ತುವಾಗಬಲ್ಲವೇ ವಿನಃ ರಾಜಕೀಯದಲ್ಲಿ ತೆಗೆದುಕೊಳ್ಳುವ ನಿಲುವುಗಳಿಗಲ್ಲ.






ನಮ್ಮ ಸಾಹಿತಿಗಳು ಡಾಕ್ಟರೇಟ್ ಮತ್ತು ಗೌರವ ಡಾಕ್ಟರೇಟ್‌ಗಳಿಗಿರುವ ವ್ಯತ್ಯಾಸವನ್ನು ಪರಿಗಣಿಸದೆ, ಗೌರವ ಡಾಕ್ಟರೇಟ್ ಪಡೆಯಲು ಒಬ್ಬ ವ್ಯಕ್ತಿ ಕನಿಷ್ಠ ಪಕ್ಷ ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧವಾಗಿರಬೇಕಾಗಿರುತ್ತದೆ ಎಂಬುದನ್ನೂ ಪರಿಗಣಿಸದೆ ಇಡೀ ಕನ್ನಡ ಜನತೆಯನ್ನು ದಾರಿ ತಪ್ಪಿಸಿದ್ದಾರೆ. ಇದು ಸರಿಯಲ್ಲ.

ಹಾಗೆ ನೋಡಿದರೆ ತೊಗಾಡಿಯಾ ಮತ್ತು ಚಿಮೂಗಳ ನಡುವೆ ವ್ಯತ್ಯಾಸವಿದೆ ಎಂಬುದೂ ಸಹ ಇಂತಹದ್ದೇ ಟೊಳ್ಳು ಮಾತುಗಳು. ತೊಗಾಡಿಯಾನಂಥವರು ತ್ರಿಶೂಲದಿಂದ ಅಲ್ಪಸಂಖ್ಯಾತ ಗರ್ಭಿಣಿ ಮಹಿಳೆಯ ಭ್ರೂಣವನ್ನು ಬಗೆದರೆ ಚಿದಾನಂದ ಮೂರ್ತಿಗಳಂಥವರು ತಮ್ಮೆಲ್ಲಾ ವಿದ್ವತ್ತನ್ನು ಬಳಸಿ ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಹೀಗಿದ್ದಲ್ಲಿ ಅವರಿಬ್ಬರ ನಡುವೆ ಯಾವ ಮಹಾ ವ್ಯತ್ಯಾಸ ಕಾಣಬಹುದು?

ಚಿದಾನಂದ ಮೂರ್ತಿಗಳು ಚರ್ಚ್ ದಾಳಿಯ ಬಗ್ಗೆ ಕೊಟ್ಟ ಹೇಳಿಕೆಗಳಿಗೂ, ದಾಳಿ ಮಾಡಿದ ಭಜರಂಗದಳದ ಆಗಿನ ಸಂಚಾಲಕ ಮಹೇಂದ್ರ ಕುಮಾರ್ ಕೊಟ್ಟ ಹೇಳಿಕೆಗಳಿಗೂ ಏನೂ ವ್ಯತ್ಯಾಸವಿಲ್ಲ. ಮಹೇಂದ್ರಕುಮಾರ್ ಕೋಮುವಾದಿ ಎಂದು ಸೋಮಶೇಖರ್ ಆಯೋಗ ಗುರುತಿಸುವುದಾದರೆ ಖಂಡಿತವಾಗಿ ಚಿದಾನಂದ ಮೂರ್ತಿಗಳೂ ಕೋಮುವಾದಿಗಳೇ!

ಇನ್ನು ಇತ್ತೀಚಿನ ಅವರ ಸಂಶೋಧನೆಗಳು! ಬಾಬಾಬುಡನ್‌ಗಿರಿಯೆಂಬುದು ದತ್ತಪೀಠವೇ ಹೊರತು ದರ್ಗಾವಲ್ಲ ಎಂಬುದಕ್ಕೆ ಅವರು ಮಾಡಿರುವ ಸತ್ಯನಿಷ್ಠ ಸಂಶೋಧನೆಗೆ ಆಕರ ಅಲ್ಲಿರುವ ಮೈಲಿಗಲ್ಲುಗಳು. ಲೋಕೋಪಯೋಗಿ ಇಲಾಖೆ ಸರ್ಕಾರದ ಒತ್ತಡಕ್ಕೆ ಬಲಿಯಾಗಿ ಬದಲಿಸಿದ ಮೈಲಿಗಲ್ಲುಗಳ ಮೇಲಿನ ಹೆಸರೇ ಅವರ ಪ್ರಾಗೈತಿಹಾಸಿಕ ಶಾಸನಗಳು. ಮಸೀದಿಗಳಲ್ಲಿ ಮುಸ್ಲಿಮರು ಪಾಕಿಸ್ತಾನದ ಪರವಾಗಿ ಮಾತನಾಡಿಕೊಳ್ಳುತ್ತಾರೆ ಮತ್ತು ಪ್ರತಿಯೊಬ್ಬ ಮುಸ್ಲಿಮನ ಮನಸ್ಸಿನಲ್ಲಿ ಒಂದು ಪಾಕಿಸ್ತಾನವಿರುತ್ತದೆ ಎಂದು "ಸಂಶೋಧನೆ" ಮಾಡಿರುವ ಚಿದಾನಂದ ಮೂರ್ತಿಗಳ ಈ ಸಂಶೋಧನೆಗೆ ಆಕರ "ಅವರ ಸ್ನೇಹಿತರ ಹೇಳಿಕೆಗಳು". ಮುಸ್ಲಿಮರ ಜನಸಂಖ್ಯೆ ವೇಗವಾಗಿ ಹೆಚ್ಚಿ ಹಿಂದೂಗಳನ್ನು ಅಲ್ಪಸಂಖ್ಯಾತರನ್ನಾಗಿ ಮಾಡಿಬಿಡುತ್ತದೆ ಎಂಬ ಅವರ ಸಂಶೋಧನೆಗೆ ಆಕರ ಸಂಘಪರಿವಾರದ ಕರಪತ್ರಗಳು. ಬೌದ್ಧಿಕ ಹಿನ್ನೆಲೆಯಲ್ಲಿ ಈ ಹಿಂದೆ ಅವರು ನಡೆಸಿದ ಶಾಸನಗಳ ಸಂಶೋಧನೆಗಳ ಬಗ್ಗೆ ಬೌದ್ಧಿಕ ಭಿನ್ನಾಭಿಪ್ರಾಯಗಳಿರಲು ಸಾಧ್ಯ. ಆದರೆ ಈಗ ರಾಜಕೀಯ ಹಿನ್ನೆಲೆಯಲ್ಲಿ ಅವರು ನಡೆಸುತ್ತಿರುವ ಸಂಶೋಧನೆಗಳಲ್ಲಿ ಪಾಂಡಿತ್ಯವಿಲ್ಲ. ಬದಲಿಗೆ ಸಂಶೋಧನೆಯ ಗುಣಮಟ್ಟವನ್ನೇ ಕೆಳಗಿಳಿಸುತ್ತಿರುವುದಲ್ಲದೆ ಸಾಮಾಜಿಕವಾಗಿಯೂ ದ್ವೇಷೋತ್ಪಾದನೆಗೆ ಸಹಕಾರಿಯಾಗುತ್ತಿದೆ.



ಅದೇ ರೀತಿ ಕನ್ನಡ ಚಳವಳಿಯಲ್ಲಿ ಪರಭಾಷಾ ದ್ವೇಷದ ಪರಂಪರೆಯ ಬೌದ್ಧಿಕ ಜನಕರು ಚಿದಾನಂದ ಮೂರ್ತಿಗಳೇ. ಆದರೆ ಅದರಲ್ಲೂ ಅವರು ಮೇಲ್ಜಾತಿ ಪಕ್ಷಪಾತಿಗಳು. ತಿರುವಳ್ಳುವರ್‌ನಂಥಾ ದಲಿತತ್ವದ ಪ್ರತಿಪಾದಕ ತಮಿಳು ಗುರುವಿನ ಪ್ರತಿಮೆ ಸ್ಥಾಪನೆಯನ್ನು ಕಂಡಾಪಟ್ಟೆ ವಿರೋಧಿಸಿದ ಚಿದಾನಂದ ಮೂರ್ತಿಗಳು ಬೆಂಗಳೂರಿನ ಕೇಂದ್ರಭಾಗಕ್ಕೆ ರಾಜಾಜಿಯ ಹೆಸರಿಟ್ಟಿದನ್ನು ವಿರೋಧಿಸಿದ್ದನ್ನು ಇದುವರೆಗೆ ಯಾರೂ ಕಂಡಿಲ್ಲ. ಚರ್ಚ್‌ಗಳಲ್ಲಿ ಕನ್ನಡದಲ್ಲಿ ಪ್ರಾರ್ಥನೆಯಾಗಬೇಕು ಎಂದು ಆಗ್ರಹಿಸಿದ ಚಿದಾನಂದ ಮೂರ್ತಿಗಳು ಹಿಂದೂ ದೇವಾಲಯಗಳಲ್ಲಿ ಸಂಸ್ಕೃತದ ಬದಲಿಗೆ ಕನ್ನಡದಲ್ಲಿ ಪ್ರಾರ್ಥನೆಯಾಗಬೇಕೆಂದಾಗಲೀ, ದೇವಾಲಯದಲ್ಲಿ ದಲಿತರನ್ನೂ ಒಳಗೊಂಡಂತೆ ಎಲ್ಲಾ ಕನ್ನಡಿಗರಿಗೂ ಪ್ರವೇಶಕ್ಕೆ ಅವಕಾಶ ಕೊಡಬೇಕೆಂದಾಗಲೀ ಎಲ್ಲಿಯೂ ಆಗ್ರಹಿಸಿಲ್ಲ. ಒಂದರ್ಥದಲ್ಲಿ ಸಾಂಸ್ಕೃತಿಕ ಲೋಕದಲ್ಲಿ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿ ಪುರೋಹಿತಶಾಹಿಯನ್ನು ಎತ್ತಿಹಿಡಿದವರು ಮತ್ತವರ ಪರವಾದ ಮೌಲ್ಯಗಳಿಗಾಗಿ ಶ್ರಮಿಸಿದವರು ಚಿದಾನಂದ ಮೂರ್ತಿಗಳು.

ಹೀಗಾಗಿ ಅವರ ಕನ್ನಡ-ಕನ್ನಡಿಗ-ಕರ್ನಾಟಕದಲ್ಲಿ ಈ ನಾಡಿನ ದಮನಿತ ಕನ್ನಡಿಗರು ಇಲ್ಲವೇ ಇಲ್ಲ. ಅದು ದಮನಿತ ಕನ್ನಡಿಗರ ಕನ್ನಡತ್ವವೂ ಅಲ್ಲ. ಆದ್ದರಿಂದಲೇ ಚಿದಾನಂದ ಮೂರ್ತಿಗಳು ಈ ನಾಡಿನ ಕನ್ನಡಿಗರ ಪ್ರತಿನಿಧಿಯೂ ಅಲ್ಲ. ಹೀಗಾಗಿ ಅವರ ಕೋಮುವಾದಿ ಧೋರಣೆಯಿಂದ ಅವರಿಗೆ ಸಾಮಾಜಿಕ ಮನ್ನಣೆಯೊಂದು ನಿರಾಕರಿಸಲ್ಪಟ್ಟರೆ ಅದು ಕನ್ನಡಿಗರಿಗಾದ ಅವಮಾನವೆಂದು ಖಂಡಿತಾ ಭಾವಿಸುವ ಅಗತ್ಯವಿಲ್ಲ. ಕುವೆಂಪು ಹೇಳಿದಂತೆ:

ಕತ್ತಿ ಪರರದಾದರೆ ಮಾತ್ರ ನೋವೇ?
ನಮ್ಮವರೇ ಹದವಾಗಿ ತಿವಿದರದು ಹೂವೆ?

ವಾಸ್ತವವಾಗಿ ಗೌರವ ಡಾಕ್ಟರೇಟ್ ನಿರಾಕರಣೆ ಒಬ್ಬರ ವಿದ್ವತ್ತಿನ ನಿರಾಕರಣೆಯೇನೂ ಅಲ್ಲ. ಒಂದು ವಿಶ್ವವಿದ್ಯಾಲಯ ಕೊಡುವ ಡಾಕ್ಟರೇಟ್ ಪದವಿಗೆ ಅರ್ಹರಾಗಲು ಶೈಕ್ಷಣಿಕ ಅರ್ಹತೆ ಇದ್ದರೆ ಸಾಕು. ಅದರ ಬಗ್ಗೆ ರಾಜ್ಯಪಾಲರು ಅಂತಿಮ ತೀರ್ಮಾನ ಕೊಡಬೇಕಾಗಿಲ್ಲ. ಏಕೆಂದರೆ ರಾಜ್ಯಪಾಲರಿಗೆ ಆ ಬಗೆಯ ಶೈಕ್ಷಣಿಕ ಅರ್ಹತೆ ಇರುವುದಿಲ್ಲ. ಆದರೆ ಗೌರವ ಡಾಕ್ಟರೇಟ್ ನೀಡುವುದು ಆಯಾ ಕ್ಷೇತ್ರಗಳಲ್ಲಿ ಒಬ್ಬರು ಒಟ್ಟಾರೆ ಸಮಾಜಕ್ಕೆ ನೀಡಿದ ಸೇವೆಗಾಗಿ, ಅಥವಾ ತಮ್ಮ ಕ್ಷೇತ್ರದಲ್ಲಿ ಅವರು ಗಳಿಸಿದ ಅಸಾಧಾರಣ ಸಾಧನೆಗಾಗಿ. ಆದ್ದರಿಂದಲೇ ಅಕ್ಷರ ಜ್ಞಾನದ ಹಂಗೇ ಇಲ್ಲದ ಸಾಲುಮರದ ತಿಮ್ಮಕ್ಕ, ಗುಬ್ಬಿ ವೀರಣ್ಣನಂಥ ನಟರು ಮತ್ತು ಇತರರು ಗೌರವ ಡಾಕ್ಟರೇಟ್ ಮನ್ನಣೆಗೆ ಪಾತ್ರರಾಗುತ್ತಾ ಬಂದಿದ್ದಾರೆ. ಅಂತಹ ವ್ಯಕ್ತಿಗಳು ಸಮಾಜಕ್ಕೆ ನೀಡಿದ ಕೊಡುಗೆಯನ್ನು ಗಮನಿಸಿದಾಗ ಅದಕ್ಕೆ ಮಾನದಂಡವಾಗುವುದು ವಿದ್ವತ್ತಲ್ಲ. ಬದಲಾಗಿ ಸಂವಿಧಾನಾತ್ಮಕ ಮೌಲ್ಯಗಳಾದ ಜಾತ್ಯತೀತತೆ, ಪ್ರಜಾತಂತ್ರ, ಸಮಾಜವಾದದ ಆಶಯಗಳು ಮಾನದಂಡಗಳಾಗುತ್ತವೆ.

ಒಬ್ಬ ವ್ಯಕ್ತಿಗೆ ಗೌರವ ಡಾಕ್ಟರೇಟ್ ಕೊಟ್ಟು ಸನ್ಮಾನಿಸುವಾಗ ಒಂದು ವಿಶ್ವವಿದ್ಯಾಲಯದ ಕುಲಪತಿ, ಮತ್ತದರ ಅಕೆಡೆಮಿಕ್ ಕೌನ್ಸಿಲ್ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆದ, ಸಂವಿಧಾನದ ರಕ್ಷಕನೂ ಆಗಿ ಕೆಲಸ ಮಾಡಬೇಕಾದ ರಾಜ್ಯಪಾಲ ಅನುಸರಿಸಬೇಕಾದ ಮಾನದಂಡಗಳೂ ಆಗಬೇಕು. ಹೀಗಾಗಿ ಗೌರವ ಡಾಕ್ಟರೇಟ್ ಪಡೆಯಲು ಒಬ್ಬ ವ್ಯಕ್ತಿ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಕೊಡುಗೆ ಕೊಡದಿದ್ದರೂ ಅದಕ್ಕೆ ವ್ಯತಿರಿಕ್ತವಾಗಿಲ್ಲದೇ ಇರುವುದು ಅತಿ ಮುಖ್ಯ.

ಒಬ್ಬ ವ್ಯಕ್ತಿ ತನ್ನ ಕ್ಷೇತ್ರದಲ್ಲಿ ಎಂಥದೇ ಅಸಾಧಾರಣಾ ಸಾಧನೆ ಮಾಡಿದ್ದರೂ ಆತ ಸಂವಿಧಾನದ ಮೌಲ್ಯಗಳಿಗೆ ವ್ಯತಿರಿಕ್ತವಾಗಿದ್ದರೆ ಆತನಿಗೆ ಗೌರವ ಡಾಕ್ಟರೇಟ್‌ನ ಗೌರವ ನೀಡುವುದು ಖಂಡಿತಾ ಸರಿಯಲ್ಲ. ಕೇವಲ ವಿದ್ವತ್ತು ಮತ್ತು ಸಾಧನೆ - ಇವೆರಡೇ ಸಮಾಜದ ಸಕಲರ ಪರವಾಗಿ ವಿಶ್ವವಿದ್ಯಾಲಯಗಳು ಕೊಡುವ ಗೌರವಗಳಿಗೆ ಮಾನದಂಡವಾಗಿಬಿಟ್ಟರೆ ನಾಳೆ 'ಆವರಣ', 'ಕವಲು'ದಂಥ ದ್ವೇಷೋತ್ಪಾದನೆಯ ಸಾಹಿತ್ಯವನ್ನು ಸೃಷ್ಟಿಸಿದ ಸಾಹಿತಿಗಳಿಗೂ ಜ್ಞಾನಪೀಠವನ್ನೂ, ನರೇಂದ್ರ ಮೋದಿಗೆ ಆಡಳಿತದಲ್ಲಿ ಸಾಧನೆ ಮಾಡಿದ್ದಕ್ಕೆ ಭಾರತ ರತ್ನವನ್ನೂ ಕೊಡುವುದು ತಪ್ಪಲ್ಲ ಎಂದಾಗಿಬಿಡುತ್ತದೆ.

ಈ ಹಿನ್ನೆಲೆಯಲ್ಲೇ ಚಿಮೂಗೆ ಗೌರವ ಡಾಕ್ಟರೇಟ್ ವಿಷಯವನ್ನೂ ನೋಡಬೇಕಲ್ಲವೇ?


ಭಾಷೆಯ ವಿಷಯದಲ್ಲಿ, ಸಂಶೋಧನಾ ವಿದ್ವತ್ತಿನ ವಿಷಯದಲ್ಲಿ, ಸಾಮಾಜಿಕ ಕೊಡುಗೆಯ ವಿಷಯದಲ್ಲಿ ಮತ್ತು ಸಾಂವಿಧಾನಿಕ ಮೌಲ್ಯಗಳಿಗೆ ಕೊಡುಗೆ ಕೊಡುವ ವಿಷಯದಲ್ಲಿರಲಿ, ಅದಕ್ಕೆ ಬದ್ಧರಾಗಿರುವ ವಿಷಯದಲ್ಲೂ ಚಿದಾನಂದ ಮೂರ್ತಿಗಳು ಖಂಡಿತಾ ಗೌರವ ಡಾಕ್ಟರೇಟ್ ಮನ್ನಣೆಗೆ ಅರ್ಹರಲ್ಲ. ಅದರಲ್ಲೂ ಒಂದು ಸರ್ಕಾರ ಸಕಲ ಜನರ ಪ್ರತಿನಿಧಿಯಾಗಿರಬೇಕು ಎಂಬ ಆಶಯವಿರುವ ಪ್ರಜಾತಂತ್ರದಲ್ಲಿ ಒಂದು ವಿಶ್ವವಿದ್ಯಾಲಯವಾಗಲೀ,

▶▶ 13

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com



ಭ್ರಷ್ಟರ ಸಂತೆಯಿಂದ ಎದ್ದುಹೋದ ಸಂತ

ಎಂ.ಪಿ. ಪ್ರಕಾಶರ ಸಾವು ಒಂದು ವ್ಯಕ್ತಿಯದಲ್ಲ, ಬದಲಾಗಿ ಒಂದು ಕಾಲಘಟ್ಟದ ಅಂತ್ಯ ಎನಿಸುತ್ತಿದೆ. ಈಗಿನ ರಾಜಕಾರಣಿಗಳತ್ತ ಒಮ್ಮೆ ಕಣ್ಣು ಹಾಯಿಸಿ ನೋಡಿದರೆ ಪ್ರಕಾಶರ ಸಾವು ಎಂತಹ ಶೂನ್ಯವನ್ನು ಸೃಷ್ಟಿಸಿದೆ ಎಂದು ಗೊತ್ತಾಗುತ್ತದೆ. ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿದ್ದ ಪ್ರಕಾಶರೆಲ್ಲಿ, ಗಣಿ ಲೂಟಿಕೋರ ರೆಡ್ಡಿಗಳೆಲ್ಲಿ; ರಂಗಭೂಮಿ ಬಗ್ಗೆ ಒಲವಿದ್ದ ಪ್ರಕಾಶರೆಲ್ಲಿ, ನಂಗಾನಾಚ್ ಕುಖ್ಯಾತಿಯ ರೇಣುಕಾಚಾರ್ಯನೆಲ್ಲಿ; ತಮ್ಮ ರಾಜಕೀಯ ಜೀವನದುದ್ದಕ್ಕೂ ಒಂದೇ ಒಂದು ಹಗರಣದಲ್ಲಿ ಭಾಗಿ ಆಗಿರದಿದ್ದ ಪ್ರಕಾಶರೆಲ್ಲಿ, ರಾಜ್ಯವನ್ನು ನುಂಗಿ ಹಾಕುತ್ತಿರುವ ಹಗರಣಗಳ ಸರದಾರ ಶಿಕಾರಿಪುರದ ಬಿಡಿಯೂರಪ್ಪನೆಲ್ಲಿ? ಇಂತಹ ದುಷ್ಟ ರಾಜಕೀಯ ವ್ಯವಸ್ಥೆಯಲ್ಲಿ ಪ್ರಕಾಶರ ನಿರ್ಗಮನದೊಂದಿಗೆ ನೈತಿಕ, ಚಿಂತನಶೀಲ, ಸೂಕ್ಷ್ಮಮನಸ್ಸಿನ ರಾಜಕಾರಣಿಗಳ ಯುಗವೂ ಅಂತ್ಯಗೊಂಡಿದೆ ಎನಿಸುತ್ತಿದೆ.

ಪ್ರಕಾಶ್ ನಿಜವಾಗಲೂ ವಿಭಿನ್ನ ವ್ಯಕ್ತಿತ್ವದ ರಾಜಕಾರಣಿ. ಒಮ್ಮೆ ಅವರನ್ನು ಭೇಟಿ ಆದಾಗ ಅವರು ಆಡಿದ ಮಾತು ಇವತ್ತೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಆಗ ಜಾತ್ಯತೀತ ಜನತಾದಳದ ಹಲವು ಶಾಸಕರು ಪ್ರಕಾಶರ ಹಿಂದೆ ಇದ್ದು ಆ ಪಕ್ಷವನ್ನು ತ್ಯಜಿಸಿ ಪ್ರಕಾಶರೊಂದಿಗೆ ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದರು. ಆದರೆ ಅವರಲ್ಲಿ ಹಲವರು ಕೆಲವು ಷರತ್ತುಗಳನ್ನು ಪ್ರಕಾಶರಿಗೆ ಹಾಕಿದ್ದರು. ಅವುಗಳಲ್ಲಿ ಮುಂದಿನ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಗ್ಯಾರಂಟಿಯಾಗಿ ಕೊಡಿಸಬೇಕು ಮತ್ತು ಚುನಾವಣೆ ಖರ್ಚಿಗೆ ಹಣ ಸಹ ಕೊಡಬೇಕೆಂಬುದು ಪ್ರಮುಖವಾಗಿದ್ದವು.

ಆ ಅವರೆಲ್ಲರಿಗೆ ಆಗ ಸುಳ್ಳು ಭರವಸೆ ನೀಡಿ ಅವರನ್ನೆಲ್ಲ ತಮ್ಮೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಸೆಳೆದುಕೊಂಡು ಹೋಗಿದ್ದರೆ ಪ್ರಕಾಶರಿಗೆ ಆ ಪಕ್ಷದಲ್ಲಿ ಹೆಚ್ಚಿನ ತೂಕ ಸಿಗುತ್ತಿತ್ತು. ಆದರೆ ಆ ಶಾಸಕರ ಷರತ್ತುಗಳನ್ನು ಕೇಳಿಯೇ ಪ್ರಕಾಶ್ ಹೈರಾಣಾಗಿ ಹೋಗಿದ್ದರು. ಅಂದು ರಾಜಕೀಯ ಬೆಳವಣಿಗೆಗಳನ್ನು ಕುರಿತು ಪ್ರಕಾಶರನ್ನು ಮಾತನಾಡಿಸಲು ನಾನು ಮತ್ತು ಪಾರ್ವತೀಶ ಅವರ ಮನೆಗೆ ಹೋಗಿದ್ದೆವು.

ಅವತ್ತು "ಈ ಶಾಸಕರಿಗೆಲ್ಲ ಚುನಾವಣೆಗೆ ನಾನು ಎಲ್ಲಿಂದ ಹಣ ತರಲಿ?" ಎಂದು ದುಃಖಪಟ್ಟ ಪ್ರಕಾಶ್ "ಇವತ್ತು ರಾಜಕೀಯ ಎಷ್ಟು ಕೆಟ್ಟುಹೋಗಿದೆ ಎಂದರೆ ಯಾರೂ ಕೂಡ ಇಲ್ಲಿ ಸಂಪೂರ್ಣವಾಗಿ ಶುದ್ಧವಾಗಿರಲು ಸಾಧ್ಯವೇ ಇಲ್ಲ ಎಂಬ ಸ್ಥಿತಿ ನಿರ್ಮಾಣವಾಗಿದೆ. ನನ್ನಂತಹವರು ಇಂತಹ ಪರಿಸ್ಥಿತಿಯಲ್ಲಿ ಅತ್ತ ಸಂಪೂರ್ಣವಾಗಿ ಶುದ್ಧವಾಗಿರಲೂ ಸಾಧ್ಯವಾಗದೆ, ಇತ್ತ ಭ್ರಷ್ಟರಾಗಲು ಹೋಗದೆ ಎರಡು ಸ್ಟೂಲ್‌ಗಳ ನಡುವೆ ಬಿದ್ದಿದ್ದೇವೆ. ನನ್ನ ತಂದೆ ಕೂಡ ಒಮ್ಮೆ ಶಾಸಕರಾಗಿದ್ದರು. ಆದರೆ ಅವರೆಂದೂ ಭ್ರಷ್ಟಾಚಾರದಲ್ಲಿ ತೊಡಗಲಿಲ್ಲ. ಆ ಕಾರಣಕ್ಕೆ ನನ್ನ ತಂದೆ ಕೊನೆಕೊನೆಗೆ ಟಾರ್ಪೋಲಿನ್ ಮಾರುವ ಮಟ್ಟಕ್ಕೆ ಬಂದಿಳಿದರು. ನನಗೂ ಆ ಸ್ಥಿತಿ ಬಂದರೆ ಎಂದು ಹಲವೊಮ್ಮೆ ಹೆದರಿಕೆ ಆಗುತ್ತದೆ" ಎಂದು ಅವರು ಹೇಳಿದಾಗ ಅವರ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಅದು ವಾಸ್ತವ ಸ್ಥಿತಿಯೊಂದಿಗೆ ಪ್ರಕಾಶ್ ನಡೆಸುತ್ತಿದ್ದ ಹೊಯ್ದಾಟದ ದುಮ್ಮಾನ ಎಂದು ನಮಗನ್ನಿಸಿತ್ತು.

ಪ್ರಕಾಶ್ ಅವರನ್ನು ನಿಜವಾಗಲೂ ಸಂಪೂರ್ಣವಾಗಿ ಅಲುಗಾಡಿಸಿದ್ದು ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಗಣಿ ರೆಡ್ಡಿಗಳು ಹರಿಸಿದ ಹಣದ ಹೊಳೆ. ಹಂಪನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಪ್ರಕಾಶ್ ವಿರುದ್ಧ ಸ್ಪರ್ಧಿಸಿದ್ದ ಕರುಣಾಕರ ರೆಡ್ಡಿ ಆ ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂದು ಕೋಟ್ಯಾಂತರ ರೂಪಾಯಿಗಳನ್ನು ಹಂಚಿದ್ದ. ಆತನ ಗಣಿ ಹಣದ ಹೊಳೆಯಲ್ಲಿ ಪ್ರಕಾಶರ ಜನಪರ ಕಾಳಜಿ ಮತ್ತು ಸಜ್ಜನಿಕೆ ಕೊಚ್ಚಿಕೊಂಡು ಹೋಗಿತ್ತು. ಅಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನೂ ಗಣಿ ಹಣ ಕೊಂದು ಹಾಕಿತ್ತು.

ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಬದಲಾಗುತ್ತಾ ಹೋದ ರಾಜ್ಯದ ರಾಜಕೀಯ ವ್ಯವಸ್ಥೆಯೊಂದಿಗೆ ಪ್ರಕಾಶ್ ಒಲ್ಲದ ಮನಸ್ಸಿನಿಂದಲೇ ರಾಜಿ ಮಾಡಿಕೊಳ್ಳುತ್ತಾ ಸಾಗಿದ್ದೂ ಅವರಲ್ಲಿ ಬೇಸರ ಮೂಡಿಸಿತ್ತು. ರಾಮಕೃಷ್ಣ ಹೆಗಡೆ ಅವರು ಆಶಯದಂತೆ ಆಗ ಸಂಯುಕ್ತ ಜನತಾದಳ ಬಿಜೆಪಿಯೊಂದಿಗೆ ಕೈಜೋಡಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಪ್ರಕಾಶ್‌ಗೆ ವೈಯಕ್ತಿಕವಾಗಿ ಅದೆಷ್ಟೇ ಮುಜುಗರವಾಗಿದ್ದರೂ ಪಕ್ಷದ ಆಶಯ ಪ್ರಕಾರ ನಡೆದುಕೊಂಡಿದ್ದರು. ಆ ಚುನಾವಣೆ ಬಗ್ಗೆ ಒಮ್ಮೆ ನನ್ನೊಂದಿಗೆ ಮಾತನಾಡುತ್ತಾ "ನಾನು ಮತ್ತು ನನ್ನ ಮನೆಯವರು ಆಗ ಸುಷ್ಮಾ ಸ್ವರಾಜ್ ಪರವಾಗಿ ಬಳ್ಳಾರಿಯಲ್ಲಿ ಪ್ರಚಾರ ಮಾಡಿದ್ದೆವು. ಆದರೆ ನನ್ನ ಮೂವರು ಪುತ್ರಿಯರು ನನಗಿಂತ ಸೋಷಲಿಸ್ಟರಾಗಿದ್ದರು. ಅದಕ್ಕೆ ಅವರು 'ನೀವು ಬೇಕಾದರೆ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಿ ಆದರೆ ನಾವು ಮಾತ್ರ ಯಾವ ಕಾರಣಕ್ಕೂ ಬಿಜೆಪಿಗೆ ನಮ್ಮ ಓಟು ಹಾಕುವುದಿಲ್ಲ' ಎಂದು ನಮ್ಮ ವಿರುದ್ಧವೇ ಕಾಂಗ್ರೆಸ್‌ನ ಸೋನಿಯಾ ಗಾಂಧಿಗೆ ಓಟು ಹಾಕಿದ್ದರು" ಎಂದು ಹೇಳಿ ರಾಜಕೀಯ ವ್ಯಂಗ್ಯದ ಬಗ್ಗೆ ಜೋರಾಗಿ ನಕ್ಕಿದ್ದರು.

ಕುಮಾರಸ್ವಾಮಿ ಬಿಜೆಪಿಯೊಂದಿಗೆ ಕೈಜೋಡಿಸಿ ಸಮ್ಮಿಶ್ರ ಸರ್ಕಾರ ಸ್ಥಾಪಿಸಿದಾಗ ನಾವೆಲ್ಲರೂ "ನೀವು ಈ ಸರ್ಕಾರದ ಭಾಗವಾಗಬೇಡಿ" ಎಂದಿದ್ದೆವು. ಆದರೆ ಅವರು "ದಳ ತೊರೆದು ನಾವು ಎಲ್ಲಿಗೆ ಹೊಗಬೇಕು? ನಮ್ಮ ರಾಜಕೀಯ ಜೀವನದುದ್ದಕ್ಕೂ ಕಾಂಗ್ರೆಸ್ ಅನ್ನು ವಿರೋಧಿಸಿಕೊಂಡು ಬಂದಿದ್ದೇವೆ. ಈಗ ಆ ಪಕ್ಷವನ್ನು ಸೇರುವುದು ಹೇಗೆ?" ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು. ಅಷ್ಟೇ ಅಲ್ಲ, ವಿಧಾನಸಭೆಯಲ್ಲಿ ಪ್ರಕಾಶರು 'ಜಾತ್ಯತೀತ ಅಂದರೆ ಏನು?' ಎಂದಿದ್ದ ಕುಮಾರಸ್ವಾಮಿಯವರೇ ತಮ್ಮ ನಾಯಕ ಎಂದು ಘೋಷಿಸಿ ನಮ್ಮಂತಹರಲ್ಲಿ ಅಪಾರ ನಿರಾಶೆ ಮೂಡಿಸಿದ್ದರು.

ಆನಂತರದ ದಿನಗಳಲ್ಲಿ ಬಾಬಾಬುಡನ್‌ಗಿರಿಯಲ್ಲಿನ ಸೌಹಾರ್ದ ಪರಂಪರೆಯನ್ನು ಉಳಿಸಬೇಕೆಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಹೋರಾಟ ನಡೆಸಿದ್ದಾಗ ನಾನೂ ಸೇರಿದಂತೆ ಸುಮಾರು ಒಂದು ಸಾವಿರ ಹೋರಾಟಗಾರರನ್ನು ಎರಡನೆ ಬಾರಿಗೆ ಚಿಕ್ಕಮಗಳೂರು ಜೈಲಿಗೆ ಕಳುಹಿಸಲಾಯಿತು. ಆಗ ದಳ-ಬಿಜೆಪಿಯ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದು ಪ್ರಕಾಶರೇ ರಾಜ್ಯದ ಗೃಹಮಂತ್ರಿಯಾಗಿದ್ದರು. ಆಗ ನಮ್ಮಲ್ಲಿನ ಒಗ್ಗಟ್ಟನ್ನು ಮುರಿಯಲೆಂದು ನಮ್ಮನ್ನೆಲ್ಲ ರಾಜ್ಯದ ವಿವಿಧ ಜೈಲುಗಳಿಗೆ ಸಾಗಿಸುವ ಹುನ್ನಾರವನ್ನು ಚೆಡ್ಡಿಗಳು ಮಾಡಿದರು. ಇದನ್ನು ಕೇಳಿ ನಾನು ಜೈಲಿನಿಂದಲೇ ಪ್ರಕಾಶರಿಗೆ ಫೋನ್ ಮಾಡಿ "ಇದೆಂತಹ ಕುತಂತ್ರ. ನಾವು ಚಿಕ್ಕಮಗಳೂರು ಜೈಲು ಬಿಟ್ಟು ಬೇರೆಲ್ಲಿಗೂ ಹೋಗುವುದಿಲ್ಲ" ಎಂದಿದ್ದೆ. ಆಗ ಪ್ರಕಾಶ್ ಅವರು "ಆದರೆ ಬಿಜೆಪಿಯವರು ಹಠ ಹಿಡಿದಿದ್ದಾರೆ" ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ನಾನು "ಈ ರಾಜ್ಯದ ಗೃಹಮಂತ್ರಿ ನೀವು. ನೀವು ಓರ್ವ ಪ್ರಜ್ಞಾವಂತ ರಾಜಕಾರಣಿ ಎಂದೇ ಬಹಳಷ್ಟು ಜನ ನಿಮಗೆ ಮರ್ಯಾದೆ ಕೊಡುತ್ತಾರೆ. ಆದರೆ ನೀವೇ ಈಗ ಬಿಜೆಪಿಯವರ ಮುಂದೆ ಅಸಹಾಯಕರಾದರೆ ರಾಜ್ಯದ ಬೇರೆಯವರ ಗತಿ ಏನು?" ಎಂದು ಪ್ರಶ್ನಿಸಿದೆ. ಅದಾದ ಹಲವು ಗಂಟೆಗಳಲ್ಲೇ ನಮ್ಮೆಲ್ಲರನ್ನು ಸರ್ಕಾರ ಬಿಡುಗಡೆಮಾಡಿತು.

ಇನ್ನೊಮ್ಮೆ ಅವರನ್ನು ಭೇಟಿ ಆಗಲು ಅವರ ಮನೆಗೆ ಹೋಗಿದ್ದಾಗ ಅವರ ಮಿತ್ರರಾದ ಶಿವಮೊಗ್ಗೆಯ ಶಂಕರ್ ಮತ್ತು ಓರ್ವ ವಿದೇಶಿ ಮಹಿಳೆ ಮಾತನಾಡುತ್ತಾ ಕೂತಿದ್ದರು. ನನ್ನನ್ನು ಆ ಮಹಿಳೆಗೆ ಪರಿಚಯಿಸಿದ ಪ್ರಕಾಶರು "ಗೌರಿ ತುಂಬಾ ಗಟ್ಟಿಗಿತ್ತಿ. ಕೋಮು ಸೌಹಾರ್ದಕ್ಕಾಗಿ ಆಕೆ ಜೈಲಿಗೂ ಹೋಗಿಬಂದಿದ್ದಾರೆ" ಎಂದರು. ಆಗ ನಾನು "ಒಮ್ಮೆ ನನ್ನನ್ನು ಜೈಲಿಗೆ ಕಳುಹಿಸಿದ್ದೂ ಪ್ರಕಾಶ್ ಅವರೆ" ಎಂದು ಆಕೆಗೆ ಹೇಳಿದಾಗ ಪ್ರಕಾಶ್ ಅವರಿಗೆ ಮುಜುಗರವಾದರೂ ಜೋರಾಗಿ ನಕ್ಕಿದ್ದರು.

ಪ್ರಕಾಶ್ ಓರ್ವ ಒಳ್ಳೆ ವ್ಯಕ್ತಿಯಾಗಿದ್ದರು ನಿಜ. ಆದರೆ ಅವರ ಆ ಒಳ್ಳೆತನವೇ ಅವರು ದಿಟ್ಟ ನಿಲುವುಗಳನ್ನು ತಳೆಯಲು ಹಿಂಜರಿಯುವಂತೆ ಮಾಡುತ್ತಿದ್ದವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಯಾರನ್ನೂ ನೋಯಿಸುವುದು ಅವರಿಂದ ಸಾಧ್ಯವಿರಲಿಲ್ಲ. ಅದ್ದರಿಂದ ಎಲ್ಲರೊಂದಿಗೆ ಹೊಂದಿಕೊಂಡು ಹೋಗಲು ಅವರು ಸದಾ ಪ್ರಯತ್ನಿಸುತ್ತಿದ್ದರು. ಆ ಕಾರಣಕ್ಕೆ ಅವರು ತಾವು ನಂಬಿದ್ದ ಸಿದ್ಧಾಂತಕ್ಕೆ ವಿರುದ್ಧವಾದ ಸಿದ್ಧಾಂತ ಹೊಂದಿದವರೊಂದಿಗೂ ಹೋಗುವುದು ಸಾಧ್ಯವಾಗುತ್ತಿತ್ತು. ಅವರ ಈ ಧೋರಣೆಯಿಂದಾಗಿಯೇ ಹಲವರ ಟೀಕೆಗೆ ಗುರಿಯಾಗುತ್ತಿದ್ದರು.

ಪ್ರಕಾಶರ ನ್ಯೂನತೆಗಳೇನೇ ಇರಲಿ ಅವರ ಸರಳತೆ, ಸಜ್ಜನಿಕೆ ಮತ್ತು ಸೂಕ್ಷ್ಮತೆ ನನ್ನಂತಹವರಿಗೆ ಇಷ್ಟವಾಗುತ್ತಿತ್ತು. ಈಗಿನ ರಾಜಕಾರಣಿಗಳ ಬಗ್ಗೆ ಅಷ್ಟನ್ನೂ ಹೇಳಲಾಗುವುದಿಲ್ಲ.

ಅಪ್ಪನ ಬಗ್ಗೆ ಮತ್ತು ನಮ್ಮ ತಂಡದ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಪ್ರಕಾಶರಿಗೆ ವಿದಾಯ....


ಎಲ್ಲಾ ದೇಶದ್ರೋಹ!

ಮಾನವತಾ ಪ್ರೇಮಿ ದೇಶದ್ರೋಹಿಯಂತೆ,
ಜನಸೇವೆ ದೇಶದ್ರೋಹವಂತೆ,
ನಮ್ಮ ದೇಶದಲ್ಲಿ ನ್ಯಾಯ ವಿಡಂಬನೆಯಿದು!
ಊರಾದರೇನು, ಕಾಡಾದರೇನು?
ಬಯಲಾದರೇನು, ಜೈಲಾದರೇನು?
ಅನ್ಯಾಯದ ಕೈ ಮೇಲಾದರೇನು?
ನ್ಯಾಯ ನಿಧಾನವಾದರೇನು?
ನಿಧನವಾಗದು ಜನಸೇವಕನ ಗುರಿಯು.
ಜನಸೇವೆ ಮಾಡುವವಗೆ
ಅನ್ಯಾಯಕ್ಕೊಳಗಾದ ಜನರಿದ್ದೆಡೆ ಸಾಕು!!
ನ್ಯಾಯ ಕುರುಡಾದರೇನು?
ನ್ಯಾಯಾಂಗ ಪೂರ್ವಾಗ್ರಹಿತವಾದರೇನು?
ಜೀವಾವಧಿ ಶಿಕ್ಷೆಯಾದರೇನು?
ಜೈಲಿನಲ್ಲಿರುವ ನತದೃಷ್ಟ
ಕೈದಿಗಳದೇ ಸೇವೆ ಮಾಡುವನವನು,
ಜೀವಾವಧಿ ಶಿಕ್ಷೆಯಲ್ಲವಿದು
ಜೀವಾವಧಿ ಜನಸೇವೆ
ಮಾಡುವ ಅವಕಾಶವಿದೆನ್ನುವನು
ಅದಮ್ಯ ಚೇತನನು
ಬಿನಾಯಕ ಸೇನನು

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು



ಗುಡಗೇರಿ ಬಸವರಾಜ ಮೌನವಾಯಿತು ಗಂಡು ಮೆಟ್ಟಿದ ನಾಡಿನ ಗಂಡು ಧ್ವನಿ



"ಲೇ ಸೂಳೀ ಮಕ್ಳಾ ನಿಲ್ರಲೇ... ಭೂತಾಯಿ ಮಗಾ ನಾನು.. ಬರ್ರಲೇ ಎದರಿಗೆ ಗಂಡಸರಾಗಿದ್ರ, ಒಂದು ಕೈ ನೋಡೇ ಬಿಡತೇನಿ..." ಇಂಥಾ ಏರು ಧ್ವನಿ ಹೊರ ಬಂದರೆ ಸಾಕು, ಎದುರಿಗೆ ಕುಳಿತ ಪ್ರೇಕ್ಷಕ ಸಿಳ್ಳೆ ಕೇಕೆಗಳಿಂದ ಅದನ್ನು ಸ್ವೀಕರಿಸಿ ಆದರಿಸುತ್ತಿದ್ದ. ಕಳೆದ ಐದು ದಶಕಗಳಿಂದ ಮಾರ್ದನಿಸಿದ ಆ ಎತ್ತರದ ಧ್ವನಿ ಈಗ ಸ್ತಬ್ಧವಾಗಿದೆ. ನಾಡಿನ ವೃತ್ತಿ ರಂಗಭೂಮಿಯ ಹಿರಿಯ ರಂಗಚೇತನ ಗುಡಗೇರಿ ಎನ್. ಬಸವರಾಜ್ ಚಿರನಿದ್ರೆಗೆ ಜಾರಿದ್ದಾರೆ.

ಉತ್ತರ ಕರ್ನಾಟಕ ಭಾಗದಲ್ಲಿ ವೃತ್ತಿ ನಾಟಕಗಳಿಗೆ ಹೊಸ ಆಯಾಮ ನೀಡಿ, ಮಾದರಿ ನಾಟಕ ಕಂಪನಿಯನ್ನು ಕಟ್ಟಿ ಬೆಳೆಸಿದ ಕೀರ್ತಿ ಬಸವರಾಜರಿಗೆ ಸಲ್ಲುತ್ತದೆ. ವೃತ್ತಿ ನಾಟಕ ಕಂಪನಿಗಳು ಆರ್ಥಿಕ ಸಂಕಷ್ಟಕ್ಕೊಳಗಾಗಿ ಮುಚ್ಚುವ ಭೀತಿ ಎದುರಾದಾಗ ಬಹುಮುಖ್ಯ ಮನೋರಂಜನಾ ಮಾಧ್ಯಮವಾದ ರಂಗಭೂಮಿಯ ಮೂಲಕ ಕಂಪನಿಯನ್ನು ಅತಿ ಯಶಸ್ವಿಯಾಗಿ ನಡೆಸಿದ್ದಲ್ಲದೆ, ನೂರಾರು ಕಲಾವಿದರಿಗೆ ಐದು ದಶಕಗಳಿಂದ ಆಶ್ರಯ ನೀಡಿದ ಆಶ್ರಯದಾತ ಇವರು.

ನಾಗರಹಳ್ಳಿ ಮನೆತನದ ಚನ್ನಪ್ಪ ಮತ್ತು ಗೌರಮ್ಮರವರ ಏಕೈಕ ಪುತ್ರ ಬಸವರಾಜ ಗುಡಗೇರಿ ಬಸವರಾಜ ಎಂದೇ ಪ್ರಸಿದ್ಧರಾದರು. ನಾಲ್ಕನೇ ತರಗತಿಗೆ ವಿದ್ಯಾಭ್ಯಾಸ ಕೈಬಿಟ್ಟು ಕುಸ್ತಿ ಪೈಲ್ವಾನನಾಗುವ ಆಸಕ್ತಿ ಬೆಳೆಸಿಕೊಂಡ ಬಸವರಾಜ ದೇಹದಂಡನೆಗೆ ಆದ್ಯತೆ ನೀಡಿದರು. ಗುಡಗೇರಿಯ ಡಾ.ಭೂಪಾಲಬಸ್ತಿ ಎಂಬುವರಿಂದ ಆರ್ಥಿಕ ನೆರವು ಪಡೆದು ಕುಸ್ತಿ ತಾಲೀಮಿಗೆ ಕೊಲ್ಲಾಪುರಕ್ಕೆ ತೆರಳಿದರು. ಆಗಿನ ಕಾಲದಲ್ಲಿ ಕೊಲ್ಲಾಪುರದಲ್ಲಿ ಕುಸ್ತಿ ಕಲಿತರೆ, ಯಾವ ಪೈಲ್ವಾನರನ್ನೂ ಪಂದ್ಯದಲ್ಲಿ ಸೋಲಿಸಿ ನೆಲಕ್ಕೆ ಎಸೆಯಬಹುದು ಎಂಬುದು ವಾಡಿಕೆಯಾಗಿತ್ತು. ಬಸವರಾಜ ಕೂಡ ಆ ನಂಬಿಕೆಯನ್ನು ಹುಸಿಗೊಳಿಸಲಿಲ್ಲ. ತರಬೇತಿಯ ನಂತರ ಊರಿಗೆ ಮರಳಿ ನೂರೈವತ್ತಕ್ಕೂ ಹೆಚ್ಚು ಕುಸ್ತಿ ಆಡಿದರು. ಕಟ್ಟುಮಸ್ತಾದ ದೇಹ ಹೊಂದಿದ್ದ ಇವರು ತೊಡೆ ತಟ್ಟಿ ಕುಸ್ತಿ ಅಖಾಡಕ್ಕಿಳಿದರೆ ಸಾಕು ಎದುರಾಳಿಯ ಮೈಯಿಂದ ಬೆವರು ತಾನಾಗೇ ಇಳಿಯುತ್ತಿತ್ತು. ತಮ್ಮ ಮೂವತ್ತನೇ ವರ್ಷದವರೆಗೆ ಆಡಿದ ಪಂದ್ಯದಲ್ಲಿ ಸೋಲೆಂಬುದು ಹತ್ತಿರಕ್ಕೂ ಸುಳಿಯಲಿಲ್ಲ.

ಹೀಗೆ ಕುಸ್ತಿ ಪಟುವಾಗಿ ಬೆಳೆದಿದ್ದ ಬಸವರಾಜ ರಂಗಭೂಮಿಗೆ ಕಾಲಿಟ್ಟದ್ದೇ ವಿಚಿತ್ರ. 1961ರಲ್ಲಿ ಗದುಗಿನ ಚನ್ನಬಸಯ್ಯ ನರೇಗಲ್ ಅವರ ಶಾರದಾ ಥಿಯೇಟರಿನಲ್ಲಿ 'ಕಟ್ಟಿದ ತಾಳಿ' ಎಂಬ ನಾಟಕ ಪ್ರದರ್ಶನವಾಗುತ್ತಿತ್ತು. ಬಸವರಾಜ ಗುಡಗೇರಿಯಿಂದ ತಮ್ಮ ಮಿತ್ರರೊಂದಿಗೆ ಆ ನಾಟಕ ನೋಡಲು ಹೋಗಿದ್ದರಂತೆ. ನಾಟಕ ನೋಡ ನೋಡುತ್ತಿದ್ದಂತೆ ತಾನೂ ಮುಖಕ್ಕೆ ಬಣ್ಣ ಹಚ್ಚಬೇಕು, ಒಂದು ನಾಟಕ ಕಂಪನಿಯ ಮಾಲಿಕನಾಗಬೇಕು ಎಂಬ ಹೊಸ ಆಸೆ ಅವರ ಮನದಲ್ಲಿ ಮೂಡಿತು. ಆದರೆ ಕಂಪನಿ ತೆರೆಯಲು ಆರ್ಥಿಕ ತೊಂದರೆ ಎದುರಾಯಿತು. ಹಿಡಿದ ಹಠ ಬಿಡದ ಬಸವರಾಜ ಸ್ನೇಹಿತ ಮುದುಕಣ್ಣ ಹರಕೋಣಿ ಎಂಬುವರೊಂದಿಗೆ ಸೇರಿಕೊಂಡು ನಾಲ್ಕು ಎಕರೆ ಜಮೀನು ಮಾರಿ ಬಂದ ದುಡ್ಡಿನಲ್ಲಿ 1963 ನವೆಂಬರ್ 17ರಂದು ತಮ್ಮ ಮನೆದೇವರಾದ ಸಂಗಮೇಶನ ಹೆಸರಿನಲ್ಲಿ "ಶ್ರೀ ಸಂಗಮೇಶ್ವರ ನಾಟ್ಯ ಸಂಘ" ಕಟ್ಟಿದರು. ಈ ಮಧ್ಯೆ ಸ್ನೇಹಿತ ಮುದುಕಣ್ಣ ಸಂಘದ ಆರಂಭಕ್ಕೆ ಹೂಡಿದ ಬಂಡವಾಳವನ್ನು ಹಿಂದೆ ಪಡೆದಾಗ್ಯೂ ಅಂಜದೆ ಬಸವರಾಜ ಮುನ್ನಡೆದರು.

ಬಸವರಾಜ ಅವರ ನಾಟ್ಯ ಸಂಘದಲ್ಲಿ ಅಭಿನಯಿಸಲು ಒಂದು ಅವಕಾಶ ಸಿಕ್ಕರೆ ಕಲಾ ಬದುಕು ಸಾರ್ಥಕವಾಯಿತು ಎಂದೇ ಆಗಿನ ಹಿರಿಯ ನಟ ನಟಿಯರು ಭಾವಿಸುವ ಮಟ್ಟಕ್ಕೆ ಇವರ ಕಂಪನಿ ಬೆಳೆದು ನಿಂತಿತ್ತು. ಮಿನುಗುತಾರೆ ಕಲ್ಪನಾ, ಮಂಜುಳ, ವಜ್ರಮುನಿ, ಸುಧೀರ್, ಉಮಾಶ್ರೀ ಸೇರಿದಂತೆ ಅನೇಕರು ಗುಡಗೇರಿ ಕಂಪನಿಯಲ್ಲಿ ಪಾತ್ರ ನಿರ್ವಹಿಸಿದ್ದರು. ಬಸವರಾಜ ಕರೆದರೆ ಎಂತಹ ಚಿತ್ರ ನಟಿಯರೂ ಹಾಜರಾಗುತ್ತಿದ್ದರು. ಏಕೆಂದರೆ, ಇವರ ಕಂಪನಿಯಲ್ಲಿ ಉತ್ತಮ ಸಂಭಾವನೆ ಇತ್ತು. ಹೀಗಾಗೇ ನಾ ಮುಂದು ತಾ ಮುಂದು ಎನ್ನುತ್ತಿದ್ದರಂತೆ. ಪ್ರಸಿದ್ಧಿಯ ಉತ್ತುಂಗದಲ್ಲಿರುವ ನಟಿಯರನ್ನು ಕರೆಸಿ ಪಾತ್ರ ಮಾಡಿಸುವುದು ಬಸವರಾಜರ ಸ್ಟೈಲ್. ಎಷ್ಟೇ ಖರ್ಚಾಗಲಿ ಮನಸ್ಸಿಗೆ ಬಂದ ನಟಿಯನ್ನ ಕರೆಸುವುದು ಅವರ ಫ್ಯಾಶನ್. ಅದು ಕಂಪನಿಯ ವಿಶೇಷತೆ ಎಂದೇ ಬಸವರಾಜ್ ಹೇಳಿಕೊಳ್ಳುತ್ತಿದ್ದರು.

'ದುಡ್ಡಿನ ದರ್ಪ', 'ವೀರ ಸಿಂಧೂರ ಲಕ್ಷ್ಮಣ', 'ಗೌಡರ ಗದ್ಲ', 'ಸಂಗ್ಯಾಬಾಳ್ಯಾ' ನಾಟಕಗಳಲ್ಲಿನ ವಿಶಿಷ್ಟ ಅಭಿನಯದ ಮೂಲಕ ಮನೆಮಾತಾದ ಬಸವರಾಜ್ ರಂಗಭೂಮಿ ಜೀವನ ಪಯಣದಲ್ಲಿ ಬೇರೆಯವರನ್ನು ಅನುಕರಣೆ ಮಾಡದೆ ತಮ್ಮ ಸ್ವಂತಿಕೆ ಪ್ರದರ್ಶಿಸಿದವರು. ಕಡಿಮೆ ಓದಿದ್ದರೂ ವೃತ್ತಿ ರಂಗಭೂಮಿಯಲ್ಲಿನ ಅವರ ಜ್ಞಾನ ಅಪಾರ. ಗ್ರಾಮೀಣ ಭಾಗದ ರೈತರ ನಾಡಿಮಿಡಿತ ಅರಿತಿದ್ದ ಅವರು ಜನರ ಅಪೇಕ್ಷೆಯ ನಾಟಕಗಳನ್ನು ಪ್ರದರ್ಶಿಸಿದರು. ರೌದ್ರಾವತಾರದ ಪಾತ್ರಳಿಗೆ ಹೆಸರುವಾಸಿಯಾಗಿದ್ದ ಬಸವರಾಜ ಅವರ ನಟನೆಯನ್ನು ಜನ ಮೈಮರೆತು ನೋಡುತ್ತಿದ್ದರು.

ಖ್ಯಾತ ನಾಟಕಕಾರ ಮಹದೇವ ಬಣಕಾರರ 'ಹದ್ದು ಮೀರಿದ ಹೆಣ್ಣು', ಪಿ.ಬಿ.ದುತ್ತರಗಿಯವರ 'ತಾಯಿ ಕರುಳು' ನಾಟಕಗಳು ಸಂಗಮೇಶ್ವರ ಕಂಪನಿಯಲ್ಲಿ ಬರೋಬ್ಬರಿ ಒಂದು ವರ್ಷ ಓಡಿ ಇತಿಹಾಸ ಸೃಷ್ಟಿಸಿದ್ದವು. ಹುಬ್ಬಳ್ಳಿಯಲ್ಲಿ ಸಾಳಂಕಿಯವರ 'ವರ ನೋಡಿ ಹೆಣ್ಣು ಕೊಡು' ಎಂಬ ನಾಟಕ 455 ಪ್ರಯೋಗ ನಡೆಸಿ ದಾಖಲೆ ನಿರ್ಮಿಸಿತ್ತಲ್ಲದೆ, ಆಗಿನ ಕಾಲಕ್ಕೆ ಎನ್.ಬಸವರಾಜ್‌ಗೆ 4 ಲಕ್ಷ ಆದಾಯ ತಂದುಕೊಟ್ಟು ಅವರನ್ನು ಆರ್ಥಿಕ ಸಂಕಷ್ಟದಿಂದ ಹೊರ ತಂದಿತ್ತು. 1965ರಲ್ಲಿ 'ಸೂಳೆ ಮಗ' ಎಂಬ ನಾಟಕವನ್ನು ತಾವೇ ಬರೆದು ಪ್ರದರ್ಶನಕ್ಕೆ ತಂದು ಸಾಕಷ್ಟು ಸಿನಿಮಾ ನಟಿಯರಿಗೆ ಅದರಲ್ಲಿ ಪಾತ್ರ ನೀಡಿದ್ದರು. ಇದು ಸತತ 5 ವರ್ಷ ಪ್ರದರ್ಶನಗೊಂಡಿತ್ತು. ಇನ್ನು ಹೊಸದಿಲ್ಲಿಯ ಕೆಂಪುಕೋಟೆಯಲ್ಲಿ ಪ್ರದರ್ಶನಗೊಂಡ ಭಾವೈಕ್ಯತೆ ಸಾರುವ 'ಶಿರಹಟ್ಟಿ ಫಕ್ಕೀರೇಶ್ವರ ಮಹಾತ್ಮೆ' ನಾಟಕ ರಾಜ್ಯದಲ್ಲಿ 900 ಪ್ರದರ್ಶನ ಕಂಡಿತ್ತು. ವೃತ್ತಿ ರಂಗಭೂಮಿಯ ಖ್ಯಾತ ಕಲಾವಿದ ಗುಬ್ಬಿ ವೀರಣ್ಣ ಅವರ ನಂತರ ಈ ಕ್ಷೇತ್ರಕ್ಕೆ ಮತ್ತೆ ಜೀವಂತಿಕೆ ತುಂಬಿದವರು ಎನ್.ಬಸವರಾಜ್. ಕೇವಲ ನಟನೆಯನ್ನಷ್ಟೆ ವೃತ್ತಿಯನ್ನಾಗಿಸದೆ, ಬರವಣಿಗೆಯಲ್ಲೂ ಸೈ ಎನಿಸಿಕೊಂಡ ಇವರು 'ರೈತನ ಮಕ್ಕಳು', 'ಸತ್ಯ ಸತ್ತಿತು', 'ದುಡ್ಡಿನ ದರ್ಪ', 'ಸುಶಿಕ್ಷಿತರು', 'ಕೆಡಿಸಿದ್ದು ಯಾರು', 'ನೀ ಹುಟ್ಟಿದ್ದು ಯಾರಿಗೆ' ಸೇರಿದಂತೆ ಇನ್ನೂ ಅನೇಕ ಜನಪ್ರಿಯ ನಾಟಕಗಳನ್ನು ರಚಿಸಿದ್ದಾರೆ. ಇವರ ಒಂದು ವಿಶೇಷ ಎಂದರೆ, ಸಂಗಮೇಶ್ವರ ನಾಟಕ ಸಂಘ ಆರಂಭಗೊಂಡ ನಂತರ ತಾವು ಬರೆದ ನಾಟಕಗಳಲ್ಲಿ ಮಾತ್ರ ಅಭಿನಯಿಸಿದ್ದು.

ತಮ್ಮ ಕಂಪನಿ ಅದೆಷ್ಟೇ ನಷ್ಟ ಅನುಭವಿಸಿದರೂ ಎಂದಿಗೂ ಕಲಾವಿದರ ಹಣವನ್ನು ಬಸವರಾಜ ಉಳಿಸಿಕೊಂಡವರಲ್ಲ. ಕಲಾವಿದರಿಗೆ ಆರ್ಥಿಕ ಸಮಸ್ಯೆ ಎದುರಾದಾಗ ಟಿಕೆಟ್ ಮೂಲಕ ಸಂಗ್ರಹವಾದ ಹಣವನ್ನ ಮುಲಾಜಿಲ್ಲದೆ ಕೊಟ್ಟು ಕಳುಹಿಸುತ್ತಿದ್ದ ಸಾಕಷ್ಟು ಉದಾಹರಣೆಗಳಿವೆ. ಪ್ರತಿ ಸೋಮವಾರ ತಮ್ಮ ಮನೆದೇವರಾದ ಸಂಗಮೇಶನ ಪೂಜೆಯ ನಂತರ ಕಂಪನಿಯ ಕಲಾವಿದ ಸಿಬ್ಬಂದಿಗೆ ಸಿಹಿ ಊಟ ಮಾಡಿಸುತ್ತಿದ್ದ ಬಸವರಾಜ ನಾಟಕಗಳಲ್ಲಿ ಅನಗತ್ಯ ಅಶ್ಲೀಲತೆಗೆ ಅವಕಾಶ ಕೊಡುತ್ತಿರಲಿಲ್ಲ. ಪ್ರದರ್ಶನದ ಸಮಯದಲ್ಲಿ ಕಲಾವಿದರು ಸಾರಾಯಿ ಕುಡಿದು ಬಂದಿದ್ದು ಗೊತ್ತಾದರೆ ಎಲ್ಲರ ಎದುರಿಗೆ ಶಿಕ್ಷಿಸುವುದು ಅವರಿಗೆ ರೂಢಿಯಾಗಿತ್ತು. ಕುಡಿತ ಕಂಡರೆ ಕೆಂಡಕಾರುತ್ತಿದ್ದ ಬಸವರಾಜ ತಮ್ಮೂರು ಗುಡಗೇರಿಯಲ್ಲಿ ಸಾರಾಯಿ ವಿರುದ್ಧ ಹೋರಾಟಕ್ಕಿಳಿದು ಹಲವಾರು ವರ್ಷ ಸಾರಾಯಿ ಮುಕ್ತ ಗ್ರಾಮವನ್ನಾಗಿಸಿದ್ದರು.


ಬಸವರಾಜ್ ತಾವು ರಚಿಸಿದ ನಾಟಕಗಳನ್ನು ಸಿನಿಮಾಕ್ಕೆ ಪರಿವರ್ತಿಸಿ ಅದರಲ್ಲೂ ಅಭಿನಯಿಸಿ ಸೈ ಎನಿಸಿಕೊಂಡರು. 'ವೀರ ಸಿಂಧೂರ ಲಕ್ಷ್ಮಣ', 'ಸಂಗ್ಯಾಬಾಳ್ಯಾ', 'ಆದಿಮಾನವ', 'ರೈತನ ಮಕ್ಕಳು' ಸೇರಿದಂತೆ ಅನೇಕ ಚಲನಚಿತ್ರಗಳಲ್ಲಿ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದರು. ಇವರ ರಂಗ ಅಭಿನಯ, ಸಾಹಸ, ಕೊಡುಗೆಗಾಗಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಗಳನ್ನು ನೀಡಿ ಗೌರವಿಸಿತ್ತು. ಒಂದು ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಕೆಲಸ ಮಾಡಿದ್ದ ಬಸವರಾಜರಿಗೆ ರಾಜಕೀಯ ಕ್ಷೇತ್ರ ಮಾತ್ರ ಕೈ ಹಿಡಿಯಲಿಲ್ಲ. ಕುಂದಗೋಳ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ಸೋಲುಂಡ ಬಸವರಾಜ ಮುಂದೆ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಕಣಕ್ಕಿಳಿದು ಸೋಲು ಕಂಡಿದ್ದರು. ಮುಂದೆ ಈ ಪರಿಣಾಮದಿಂದ ರಾಜಕೀಯದ ಕಡೆ ಮುಖ ಕೂಡಾ ಮಾಡದೆ ರಂಗಭೂಮಿಗೆ ಹಿಂದಿರುಗಿದ್ದರು.

ದೀರ್ಘಾವಧಿ ಕ್ಯಾನ್ಸರ್‌ನಿಂದ ಬಳಲಿ ಕೊನೆಯುಸಿರೆಳೆದ ಎನ್. ಬಸವರಾಜ ಮಹಾನ್ ಹಠವಾದಿ. ನೋಡಲಿಕ್ಕೆ ಕಠಿಣ ಅನ್ನಿಸಿದರೂ ಮೃದುಹೃದಯಿ. ರಂಗಭೂಮಿ ಅವಸಾನದಲ್ಲಿದೆ ಎಂಬುದನ್ನು ಯಾವತ್ತು ಒಪ್ಪುತ್ತಿರಲಿಲ್ಲ. ರಂಗಭೂಮಿಯ ಮಗ ಗುಡಗೇರಿ ಎನ್. ಬಸವರಾಜ್ ಅವರ ಸಾವಿನಿಂದ ವೃತ್ತಿ ರಂಗಭೂಮಿಯ ಮೇರು ಪರ್ವತ ಉರುಳಿ ಬಿದ್ದಂತಾಗಿದೆ. ಉತ್ತರ ಕರ್ನಾಟಕ ಸೀಮೆಯ ಸಿಂಹಗರ್ಜನೆ ಮೌನವಾದಂತಾಗಿದೆ.

• ಹುರಳಿಕುಪ್ಪಿ ವಿನಯ್

ಮೈಸೂರು: ಪಾಲಿಕೆ ಆಯುಕ್ತ ರಾಯ್ಕರ್‌ನ ಜಲಬಾಧೆ!

ಮೈಸೂರು ಮಹಾನಗರ ಪಾಲಿಕೆಗೂ ವಿವಾದಗಳಿಗೂ ಎಲ್ಲಿಲ್ಲದ ನಂಟು. ಅದರಲ್ಲೂ ಪಾಲಿಕೆಗೆ ಕೆ.ಆರ್.ರಾಯ್ಕರ್ ಆಯುಕ್ತನಾಗಿ ಬಂದ ನಂತರವಂತೂ ವಿವಾದಗಳು ಅತಿರೇಕಕ್ಕೆ ಹೋಗುತ್ತಿವೆ. ವಿವಾದಗಳ ಪಿತಾಮಹನಾದ ರಾಯ್ಕರ್ ಇತ್ತೀಚೆಗೆ ಮತ್ತೊಂದು ಯಡವಟ್ಟು ಮಾಡಿಕೊಂಡು ಮೇಯರ್, ಕಾರ್ಪೊರೇಟರ್‌ಗಳ ಆದಿಯಾಗಿ ಜನಸಾಮಾನ್ಯರಿಂದ, ಸಂಘ ಸಂಸ್ಥೆಗಳಿಂದ ಉಗಿಸಿಕೊಳ್ಳುತ್ತಿದ್ದಾನೆ.


ರಾಯ್ಕರ್

ಆತ ಮಾಡಿರುವ ಯಡವಟ್ಟು ಏನಪ್ಪ ಅಂದರೆ, ಮೈಸೂರು ನಗರದ 64 ವಾರ್ಡ್‌ಗಳಿಗೆ ಸಾಕಾಗುವಷ್ಟು ಕುಡಿಯುವ ನೀರನ್ನು ನಗರ ಪಾಲಿಕೆಗೆ ಸರಬರಾಜು ಮಾಡಲಾಗದಿದ್ದರೂ, ಬೆಳಗೋಳ, ವಿಜಯನಗರ, ಇಲವಾಲ ಮತ್ತಿತರೆಡೆ ತಲೆ ಎತ್ತಿರುವ ಸರ್ಕಾರಿ ಉದ್ದಿಮೆಗಳಾದ ಆರ್.ಬಿ.ಐ. (ನೋಟು ಮುದ್ರಣಾಲಯ) ಮತ್ತು ಬಾಬಾ ಅಣು ಸಂಶೋಧನಾ ಕೇಂದ್ರ ಸೇರಿದಂತೆ ಇನ್ಫೋಸಿಸ್, ವಿಕ್ರಾಂತ್ ಟೈರ್ಸ್, ಎಲ್ ಆಂಡ್ ಟಿ, ಬರುಕಾ, ಫಾಲ್ಕಾನ್‌ನಂತಹ ದೈತ್ಯ ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ತೃಪ್ತಿಯಾಗುವಷ್ಟು ನೀರುಣಿಸುವ ಬೃಹತ್ ಯೋಜನೆಗೆ ರಾಯ್ಕರ್ ತಥಾಸ್ತು ಎಂದಿರುವುದು! ಅಷ್ಟೇ ಅಲ್ಲ, ಈ ನೀರು ತನ್ನಪ್ಪನ ಮನೆಯ ಆಸ್ತಿಯೆಂಬಂತೆ ಯಾರ ಗಮನಕ್ಕೂ ಬಾರದೆ ಈ ಸರ್ಕಾರಿ ಮತ್ತು ಖಾಸಗಿ ಕಂಪನಿಗಳೊಂದಿಗಿನ ಒಪ್ಪಂದಕ್ಕೆ ಅಂಕಿತ ನೀಡಿರುವುದು!

ಈ ಕಂಪನಿಗಳಿಗೆ ಸರಬರಾಜು ಮಾಡಲು ಒಪ್ಪಿಕೊಂಡಿರುವುದು ಎಲ್ಲೋ ಯಥೇಚ್ಛವಾಗಿ ಸಿಗುವ ನೀರಿನ ಮೂಲದಿಂದಲ್ಲ, ಬದಲಾಗಿ ಮೈಸೂರಿನ ನಾಗರಿಕರಿಗೆ ಮತ್ತು ಸುತ್ತುಮುತ್ತಲಿನ ರೈತಾಪಿಗಳಿಗೆ ಅಗತ್ಯವಾಗಿ ಬೇಕಾಗಿರುವ ಕಾವೇರಿ ನೀರನ್ನು!

ಪ್ರತಿ ಬೇಸಿಗೆಯಲ್ಲೂ ಬೆಳೆದ ಬೆಳೆಗೆ ನೀರುಣಿಸುವ ವಿಚಾರದಲ್ಲಿ ಬೆಳಗೋಳ ಪ್ರಾಂತದ ರೈತರು ಮತ್ತು ಮೈಸೂರು ನಗರ ಪಾಲಿಕೆ ನಡುವೆ ಗಲಾಟೆಗಳು ನಡೆಯುತ್ತವೆ. ಹಾಗೆಯೇ ಮೈಸೂರಿನಲ್ಲೂ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಕೇಳಿಸುವುದೂ ಮಾಮೂಲಿಯಾಗಿದೆ. ಈ ಕಾರಣದಿಂದಲೇ ರೈತರ ಪರವಾಗಿ ಈಗಾಗಲೇ ಪ್ರವೀಣ್ ಶೆಟ್ಟಿಯವರ ಕರ್ನಾಟಕ ರಕ್ಷಣಾ ವೇದಿಕೆ ಮಾತ್ರವಲ್ಲದೆ ರೈತಸಂಘಗಳೂ ಪ್ರತಿಭಟನೆ ನಡೆಸಿವೆ. ಹಾಗೆಯೇ ಮೈಸೂರಿಗರ ಪರವಾಗಿ ಮೇಯರ್ ಸಂದೇಶ್ ಸ್ವಾಮಿ ಮತ್ತು ಶಾಸಕ ಸಂದೇಶ್ ನಾಗರಾಜ್ ನಿಂತಿದ್ದಾರೆ.

ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ತಪ್ಪಲ್ಲ. ಆದರೆ ಇಲ್ಲಿ ನಡೆದಿರುವ ಗುಪ್ತ ಒಡಂಬಡಿಕೆಯಲ್ಲಿ ನಾಗರಿಕರು ಮತ್ತು ರೈತರಿಗೆ ಸಿಗಬೇಕಾದ ನೀರನ್ನ ಕಿತ್ತುಕೊಂಡು ಖಾಸಗಿಯವರಿಗೆ ಕೊಡುವ ಹುನ್ನಾರ ಮಾತ್ರ ಅತ್ಯಂತ ಅಪಾಯಕಾರಿಯಾಗಿದೆ. ವಿಪರ್ಯಾಸ ಅಂದರೆ ಈ ನೀರಿನ ಫಲಾನುಭವಿ ಕಂಪನಿಗಳಲ್ಲಿ ಈ ಹಿಂದೆ 2 ಕೋಟಿ ರೂ.ಗಳ ನೀರಿನ ಕಂದಾಯದ ಹಣ ಕೊಡಲು ನಖರಾ ಮಾಡಿ ಪಾಲಿಕೆಯನ್ನ ಸರ್ವೋಚ್ಚ ನ್ಯಾಯಾಲಯದವರೆಗೂ ಅಲೆಸಿರುವ ವಿಕ್ರಾಂತ್ ಕಂಪನಿಯೂ ಸೇರಿಕೊಂಡಿದೆ. ನೀರಿನ ಕಂದಾಯವನ್ನ ಪಾಲಿಕೆಗೆ ನೀಡದೆ ಮುಂಡಾ ಮೋಚಿರುವ ಕಂಪನಿಗಳೂ ಇವೆ!

ಇಂತಹ ಬೃಹತ್ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಪಾಲಿಕೆಯ ಕೌನ್ಸಿಲ್ ಸಭೆಗಾಗಲೀ, ಕನಿಷ್ಠ ಮೇಯರ್ ಸಂದೇಶ್‌ಗಾಗಲೀ ಅಸಲಿ ವಿಚಾರವನ್ನು ತಿಳಿಸಿರಲೇ ಇಲ್ಲ! ಬದಲಾಗಿ ಆಯುಕ್ತ ರಾಯ್ಕರ್ ಮತ್ತವರ ಚೇಲಾಗಳಾದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಹೊನ್ನೇಗೌಡ, ಸುಬ್ಬೇಗೌಡ, ವಾಣಿವಿಲಾಸ್ ಇಂಜಿನಿಯರ್ ಸುಬ್ರಮಣ್ಯ ಹಾಗೂ ಖಾಸಗಿ ಕಂಪನಿಗಳ ಕೆಲವು ಅಧಿಕಾರಿಗಳು ಸೇರಿಕೊಂಡು ಗುಪ್ತವಾಗಿ ತಮ್ಮ ಅಜೆಂಡಾವನ್ನು ಪಾಸು ಮಾಡಿಕೊಂಡಿದ್ದಾರೆ. ಈ ಷಡ್ಯಂತ್ರದಲ್ಲಿ ಭಾಗಿಯಾಗಿರುವ ಲೂಟಿಕೋರ ಖಾಸಗಿ ಕಂಪನಿಗಳು ಯಾವುದೇ ಷರತ್ತುಗಳು, ನೀತಿನಿಯಮಗಳು, ತೆರಿಗೆ ಪಾವತಿಯ ವಿಚಾರಗಳ ಬಗ್ಗೆ ಕನಿಷ್ಠ ಚರ್ಚೆಯನ್ನೂ ನಡೆಸಿಲ್ಲ.




ಮೈಸೂರು ನಗರಕ್ಕೆ ಪ್ರತಿ ದಿನ ಪೂರೈಕೆಯಾಗುವ 65 (ಮಿಲಿಯನ್ ಲೀಟರ್ ಪರ್ ಡೇ) ಎಂ.ಎಲ್.ಡಿ. ನೀರಿನಲ್ಲಿ 15 ಮಿಲಿಯನ್ ಲೀಟರ್ ನೀರನ್ನ ಕೈಗಾರಿಕೆಗಳು ಅಧಿಕೃತವಾಗಿ ಹೀರುತ್ತಿವೆ. ಆದರೆ ಈ ಹೊಸಾ ಒಡಂಬಡಿಕೆಯನ್ವಯ ಇಡೀ ಮೈಸೂರಿಗೆ ಸರಬರಾಜಾಗುವ 65 ಎಂ.ಎಲ್.ಡಿ. ನೀರು ಪ್ರತ್ಯೇಕವಾಗಿ ಖಾಸಗಿ ಕಂಪನಿಗಳ ಪಾಲಾಗಲಿದೆ. ಅಂದರೆ ಮುಂದಿನ ದಿನಗಳಲ್ಲಿ ನೀರಿಗಾಗಿ ರೈತರು ಮತ್ತು ಪಾಲಿಕೆ ನಡುವೆ ಕದನ ನಡೆಯುವುದು ಖಚಿತ.

ರಾಯ್ಕರ್‌ಗೆ ನಿವೃತ್ತಿಯ ವಯಸ್ಸು ಹತ್ತಿರ ಬರುತ್ತಿದ್ದಂತೆ ಈ ರೀತಿ ದೊಡ್ಡ ಮಟ್ಟದ ಯೋಜನೆಗಳು ಯಾರ ಗಮನಕ್ಕೂ ಬರದಂತೆ ಜಾರಿಯಾಗುತ್ತಿರುವುದು, ಪಾರದರ್ಶಕತೆಯನ್ನ ಪಾಲಿಸದಿರುವುದು ಹಲವಾರು ಗುಮಾನಿಗಳಿಗೆ ಕಾರಣವಾಗಿದೆ. ರೈತರ ಫಸಲಿಗೆ, ಮೈಸೂರಿಗರ ಕುಡಿಯುವ ನೀರಿಗೆ ಕಂಟಕಪ್ರಾಯವಾದ ಈ ವಂಚಕ ಒಡಂಬಡಿಕೆಯನ್ನ ರದ್ದುಪಡಿಸಬೇಕಿದೆ. ಅದಾಗದಿದ್ದರೆ ಈ ಭಾಗದ ಜನಪರ ಸಂಘಟನೆಗಳು ಪಾಲಿಕೆಗೆ ಚುರುಕು ಮುಟ್ಟಿಸಬೇಕಿದೆ.


ಮೈಸೂರು ಮಹಾನಗರ ಪಾಲಿಕೆ...

• ಲಕ್ಷ್ಮಣ್ ಚೀರನಹಳ್ಳಿ



ಪರದೆ ಹಿಂದೆ ಸರಿದ ಪ್ರಕಾಶ್

• ಬಿ.ಚಂದ್ರೇಗೌಡ

ಎಂ.ಪಿ.ಪ್ರಕಾಶ್ ನಿಧನರಾದ ಸುದ್ದಿಯಿಂದ ಶಾಕ್ ಆಗಲಿಲ್ಲ. ಏಕೆಂದರೆ ಅವರಿಗೆ ಕ್ಯಾನ್ಸರ್ ಎಂದು ಗೊತ್ತಾದಾಗಲೇ ಆಘಾತ ಅನುಭವಿಸಿದ್ದೆವು. ಒಂದು ರೀತಿ ಮುಂಗಡವಾಗಿ ಸಂತಾಪದ ಮಾತುಗಳನ್ನಾಡಿ ಅವರ ಕಡೆಯ ದಿನಕ್ಕಾಗಿ ಮಾನಸಿಕ ಸಿದ್ಧತೆ ನಡೆಸಿದ್ದೆವು. ಕ್ಯಾನ್ಸರ್ ಎಂದು ಗೊತ್ತಾದಾಗ ಅವರನ್ನ ನೋಡಲು ಹೋಗಿದ್ದ ಗೆಳೆಯ ಶಂಕರ್ ಮತ್ತು ನಾನು ಯಾವ ಕಾರಣಕ್ಕೂ ಅವರ ಕಾಯಿಲೆ ವಿಷಯ ಪ್ರಸ್ತಾಪಿಸಬಾರದೆಂದು ನಿರ್ಧರಿಸಿಕೊಂಡೇ ಹೋಗಿದ್ದೆವು, ಅದರಂತೆ ಅಂದು ಬರೀ ರಾಜಕಾರಣ ಮಾತನಾಡಿ ಬಂದೆವು ಆಗ ಅವರ ಮಗಳ ಮುಖಾಂತರ ಸಿಕ್ಕಿದ ಮಾಹಿತಿ ಪ್ರಕಾಶ್ "ಹೆದರುವ ಅಗತ್ಯವಿಲ್ಲ ಕ್ಯಾನ್ಸರಿನ ಪ್ರಾಥಮಿಕ ಹಂತದಲ್ಲೇ ಪತ್ತೆಹಚ್ಚಿ ನಿಷ್ಕ್ರಿಯೆಗೊಳಿಸಲಾಗಿದೆ" ಎಂಬುದು. ಬಹುಶಃ ವೈದ್ಯರು ಕುಟುಂಬದವರನ್ನು ಈ ರೀತಿ ಸಾಂತ್ವನಗೊಳಿಸಿದ್ದರು ಅನ್ನಿಸುತ್ತೆ.

ಕೇವಲ ವಾರದ ಹಿಂದೆ "ಶಿವಮೊಗ್ಗದ ಕಡೆ ಬರಲೇ ಇಲ್ಲವಲ್ಲ ಸಾರ್" ಎಂದು ಫೋನ್ ಮಾಡಿದ್ದೆ, ಅದಕ್ಕೆ ಉತ್ತರ ಕೊಡದ ಪ್ರಕಾಶರು ಕಾಳಮಾವ ಜುಮ್ಮಿ ಹೇಗಿದ್ದಾರೆಂದು ಕೇಳಿದ್ದರು. ಕಡೆಗೆ "ಹೆಗ್ಗೋಡಿನ ಚರಕದ ಕಾರ್ಯಕ್ರಮಕ್ಕೆ ಬರುತ್ತೇನೆ. ಆಗ ಶಿವಮೊಗ್ಗದಲ್ಲಿ ಉಳಿದಿದ್ದು ಬರುತ್ತೇನೆ" ಎಂದಿದ್ದರು. ಬರುವುದಿಲ್ಲ ಎಂದು ಯಾವ ಕಾರಣಕ್ಕೂ ಅವರು ಹೇಳುತ್ತಿರಲಿಲ್ಲ. ನಾಗಮಂಗಲದಲ್ಲಿ ಬಿಡುಗಡೆಯಾದ ಹೆಚ್.ಟಿ.ಕೃಷ್ಣಪ್ಪನವರ ಅಭಿನಂದನಾ ಗ್ರಂಥದ ಬಿಡುಗಡೆಗೂ ಬರಲು ಒಪ್ಪಿಕೊಂಡಿದ್ದರು. ಅದರಂತೆ ಹೊರಡುವ ತಯಾರಿಯಲ್ಲಿದ್ದವರು ರೂಮಿಗೆ ಹೋಗಿ ಮಲಗಿದರೆಂದು ಅವರ ಗನ್‌ಮ್ಯಾನ್ ಶಿವರಾಂ ಹೇಳಿದಾಗ ಪ್ರಕಾಶ್‌ರ ಉತ್ಸಾಹಕ್ಕೆ ಅವರ ದೇಹ ಸ್ಪಂದಿಸುತ್ತಿಲ್ಲವೆಂದು ತಿಳಿದು ಸುಮ್ಮನಾಗಿದ್ದೆವು. ಆದರೂ ಏಡಿಹುಣ್ಣಿನಿಂದ ಬಿಡಿಸಿಕೊಂಡು ಮತ್ತೆ ಹಡಗಲಿ ಪ್ರಾಂತ್ಯದಲ್ಲಿ ಸಭೆ ಸಮಾರಂಭಕ್ಕೆ ಹೊರಡುತ್ತಾರಂತೆ ಎಂಬ ಆಶಾದಾಯಕ ಸುದ್ದಿ ದಿಢೀರನೆ ಸುಳ್ಳಾಗಿ ಹೋಯ್ತು!

ಪ್ರಕಾಶ್‌ರನ್ನ ನಾನು ಮೊದಲು ನೋಡಿದ್ದು ಲಂಕೇಶರ ಆಫೀಸಿನಲ್ಲಿ. ಆಗವರು ಹೆಗಡೆ ಸರಕಾರದಲ್ಲಿ ಮಂತ್ರಿಗಳು. ಮಂತ್ರಿಯಾಗಿದ್ದರೂ ಸಂಜೆ ಹೊತ್ತಿನಲ್ಲಿ ಲಂಕೇಶರ ಆಫೀಸಿನಲ್ಲಿ ಕಾಣಿಸಿಕೊಂಡು ಮೇಷ್ಟ್ರ ಛೇಂಬರಿಗೆ ಬಗ್ಗಿ ನೋಡಿ "ನಮಸ್ಕಾರ್ರಿ ಸಾರ್" ಎಂದರು. ಲಂಕೇಶ್ "ಬನ್ನಿ ಪ್ರಕಾಶ್" ಎಂದರು. ಆದಾಗಲೇ ಅವರ ಟೇಬಲ್ ಮೇಲೆ ಲಂಕೇಶರ ತೋಟದಿಂದ ತಂದ ಹಳೆಮಾವಿನಮರದ ಹಣ್ಣುಗಳಿದ್ದವು ಅದನ್ನು ತಿನ್ನುತ್ತಾ ಮಾತಿಗಾರಂಭಿಸಿದರು. ಆಗಲೂ ನಾನು ಪ್ರಕಾಶ್ ಕಣ್ಣಿಗೆ ಬೀಳಲಿಲ್ಲ.

ಕಟ್ಟೆಪುರಾಣ ಕಾಲಂ ಪ್ರಾರಂಭವಾದ ನಂತರ ಅದನ್ನು ಓದಿ ಕಾಳೇಗೌಡ ನಾಗವಾರರ ಬಳಿ ತುಂಬ ಹೊಗಳಿದ್ದರೆಂದು ಕೇಳಿದೆ. ಕಾಳೇಗೌಡರೇ ಒಮ್ಮೆ "ಶಿವಮೊಗ್ಗದ ಕಡೆ ಪ್ರಕಾಶ್ ಬಂದಾಗ ಸುಮ್ಮನೆ ನಿಮ್ಮ ಹೆಸರೇಳಿ ಸಾಕು" ಎಂದಿದ್ದರು. ಅದರಂತೆ ಪ್ರಕಾಶ್ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಒಮ್ಮೆ ಶಿವಮೊಗ್ಗಕ್ಕೆ ಬಂದರು. ಸರ್ಕ್ಯೂಟ್‌ಹೌಸಿನ ಬಳಿ ಮುತ್ತಿಕೊಂಡಿದ್ದ ಜನರ ನಡುವೆ ಹೋಗಿ "ನಾನು ಬಿ.ಚಂದ್ರೇಗೌಡ ಸಾರ್" ಎಂದೆ. ಕೂಡಲೇ ಪ್ರಕಾಶ್ ನನ್ನ ಕೈ ಕುಲುಕಿ "ಬರ್ರಿ ಮಾತಾಡಣ" ಎಂದು ಕರೆದುಕೊಂಡು ಹೊರಟರು. ಅವರು ರೂಮಿನ ಒಳಹೋದ ಕೂಡಲೇ ಪೊಲೀಸರು ಕೈಅಡ್ಡ ಹಿಡಿದು ನನ್ನನ್ನು ಹಿಂದೆ ನೂಕಿ ಹೋಗ್ರಿ ಎಂದರು. ನಾನು ಹೊರಟ ನಂತರ ನೂಕಿದ್ದ ಪೊಲೀಸರು ಓಡಿಬಂದು "ಇಲ್ಲಿ ಚಂದ್ರೇಗೌಡ ಅಂದ್ರೆ ಯಾರ್ರಿ" ಎಂದು ತಡಕಿ, ನಾನೆ ಎಂದು ಹತ್ತಿರವಾದಾಗ ನನ್ನನ್ನು ಹಿಡಿದು ರೂಮಿನೊಳಕ್ಕೆ ನೂಕಿ ಬಾಗಿಲಾಕಿಕೊಂಡರು.

ಪ್ರಕಾಶ್ ನಗುತ್ತಾ ಮಾತಿಗೆ ಕೂರಿಸಿಕೊಂಡು ಪತ್ರಿಕೆ, ಮೇಷ್ಟ್ರು ಮತ್ತು ತಮ್ಮ ಮೇಲೆ ಬಂದ ವರದಿಗಳನ್ನು ಕುರಿತು ತುಂಬ ಮಾತನಾಡಿದರು. ಕಡೆಗೆ "ಪಟೇಲ್ರ ಪರಿಚಯ ಇಲ್ಲವೆ?" ಎಂದರು "ಇಲ್ಲ ಸಾರ್" ಎಂದೆ. ಕೂಡಲೇ ಒಳಗಡೆ ರೂಮಿಗೆ ಕರೆದುಕೊಂಡು ಹೋದರು. ಅಲ್ಲಿ ಪಟೇಲರು ಕುರ್ಚಿಯ ಮೇಲಕ್ಕೆ ಕಾಲೆಳೆದುಕೊಂಡು ಪಟೇಲರಂತೆಯೇ ಕುಳಿತಿದ್ದರು. "ನಾನು ಹೇಳಿದ್ನಲ್ಲ ಆ ಹುಡುಗ ಈತನೇ ಸಾರ್ ಚಂದ್ರೇಗೌಡ" ಎಂದು ಪ್ರಕಾಶ್ ನನ್ನನ್ನು ಪರಿಚಯಿಸಿದರು. ಪಟೇಲರು "ಅಲಲೆ, ಚೆನ್ನಾಗಿ ಬರೀತಿ ಕಣಯ್ಯ. ಆಡು ಮಾತು ಓದದು ಕಷ್ಟ ಆದ್ರೂ ಅರ್ಥ ಚೆನ್ನಾಗಿರುತ್ತದೆ" ಎಂದು ಕೈ ಕುಲುಕಿದರು. ಹೊರಬಂದ ನಂತರ ಜನತಾದಳದ ಕೆಲವು ಮಂದಮತಿಗಳು ಪ್ರಕಾಶ್‌ರ ತಲೆ ತಿನ್ನುವ ಸೂಚನೆ ಸಿಕ್ಕಿದ್ದರಿಂದ ಗಹನವಾದ ಸೋಗಿನಲ್ಲಿ ಮಾತನಾಡಿದೆವು. ನನಗೆ ನಿಜಕ್ಕೂ ಅದು ಪ್ರಥಮ ಭೇಟಿ ಅನ್ನಿಸಲಿಲ್ಲ.


ಪ್ರಕಾಶ್ ಕಟ್ಟೆಪುರಾಣವನ್ನ ತಪ್ಪದೇ ಓದುವವರಾದ್ದರಿಂದ ಫೋನಿಗೆ ಸಿಕ್ಕಾಗ ನಾನು ಬರೆದು ಮರೆತಿದ್ದ ಪ್ರಸಂಗವನ್ನು ನನಗೇ ಜ್ಞಾಪಿಸಿ ಹೇಳುತ್ತಿದ್ದರು. ಕಟ್ಟೆ ಪುರಾಣ ನಾಟಕವಾಗಿ ಸ್ಟೇಜಿನ ಮೇಲೆ ಬಂದಾಗ ಅದನ್ನ ನೋಡಿ "ನಿಮ್ಮ ಕಾಳಮಾವ ನನ್ನ ಗ್ರಹಿಕೆಯ ಕಾಳಮಾವ ಅಲ್ಲ, ಆ ಪಾತ್ರಧಾರಿ ಕಾಳಮಾವನನ್ನ ಹಾಸ್ಯಗಾರ ಅಂದುಕೊಂಡಿದ್ದಾನೆ" ಎಂದರು. ಆ ಕಾಲಂ ಬಗ್ಗೆ ಅವರಿಗಿದ್ದ ಕುತೂಹಲವನ್ನ ಗಮನಿಸಿ ನಾನು ಕಟ್ಟೆಪುರಾಣ ನಾಟಕ ಪ್ರಿಂಟಾಕಿಸಿದಾಗ ಅದನ್ನ ಅವರಿಗೇ ಅರ್ಪಿಸಿದೆ.

ಆಗ ಪಟೇಲರು ಮುಖ್ಯಮಂತ್ರಿ, ಪ್ರಕಾಶ್ ಗ್ರಾಮೀಣಾಭಿವೃದ್ಧಿ ಮಂತ್ರಿ. ಜೊತೆಗೆ ಲಂಕೇಶ್. ಬಹುಶಃ ಬಹಳ ಒಳ್ಳೆಯ ದಿನಗಳವು. ಇಡೀ ರಾಜ್ಯ ನಮ್ಮ ಕೈಲಿದ್ದಂತೆ ಕಾಣುತ್ತಿತ್ತು, ಯಾವುದೊ ಉಮೇದು ನಮ್ಮನ್ನು ಆವರಿಸಿತ್ತು, ಆ ಸಮಯದಲ್ಲಿ ಊರಿನಿಂದ ನಾಟಕದ ಮೇಷ್ಟ್ರರನ್ನ ಕರೆತಂದು 'ರಾಜಸೂಯ ಯಾಗ' ನಾಟಕ ಕಲಿಯಲಾರಂಭಿಸಿದೆವು, ನಾಟಕದ ದಿನ ಯಾರನ್ನಾದರೂ ಅತಿಥಿಯನ್ನಾಗಿ ಕರೆಯಬೇಕೆಂದು ಯೋಚಿಸುತ್ತಿದ್ದಾಗ ಹೊಳೆದ ಹೆಸರು ಎಂ.ಪಿ.ಪ್ರಕಾಶ್. ಕೂಡಲೇ ಫೋನ್ ಮಾಡಿದಾಗ ಅವರು ಒಪ್ಪಿಕೊಂಡರು. "ಸಾರ್ ಒಂದು ಪಾತ್ರ ಇದೆ, ಮಾಡ್ತೀರಾ?" ಎಂದೆ "ಯಾವ ಪಾತ್ರ?" ಎಂದರು. "ನಾಟಕದ ಆರಂಭದಲ್ಲೇ ಬರುವ ಪಾಂಡುರಾಜನ ಪಾತ್ರ ಸಾರ್" ಎಂದೆ. "ಆಯ್ತು, ಡೈಲಾಗ್ ಕಳಿಸಿಕೊಡಿ" ಎಂದರು. ನಾನು ಖುಷಿಯಾಗಿ ಡೈಲಾಗ್ ಹೊಸೆದು ಕಳುಹಿಸಿದೆ. ನಾಟಕ ಮರುದಿನ ಇದೆ ಎನ್ನುವಾಗ ಪ್ರಕಾಶ್ ಫೋನ್ ಮಾಡಿ "ನಾಳೆ ಶಿವರಾತ್ರಿಯಂತೆ. ನನ್ನ ಹೆಂಡತಿ ಮನೆಯಲ್ಲೇ ಇರಬೇಕೆಂದು ಹಟ ಹಿಡಿದಿದ್ದಾಳೆ. ಬರಲಾಗಲ್ಲ" ಎಂದಾಗ ನನಗೆ ಜೀವ ಧಸಕ್ಕೆಂದಿತ್ತು. "ಸಾರ್, ಗ್ರಾಮೀಣಾಭಿವೃದ್ಧಿ ಸಚಿವರಾದ ಎಂ.ಪಿ.ಪ್ರಕಾಶರ ಪಾತ್ರ ನೋಡಲು ಮರೆಯದಿರಿ, ಮರೆತು ನಿರಾಶರಾಗದಿರಿ ಅಂತ ಆಟೋದಲ್ಲಿ ಕೂಗಿಸಿದ್ದಿವಿ ವಾಲ್ ರೈಟಿಂಗ್ ಮಾಡಿದ್ದಿವಿ ನಮ್ಮ ಮರಿಯಾದಿ ಪ್ರಶ್ನೆ ಸಾರ್" ಎಂದು ಗೋಗರೆದೆ "ಆಯ್ತು ಬರ್ತಿನಿ" ಎಂದರು.



ಅದರಂತೆ ಮರುದಿನ ಬಂದು ಸ್ವತಃ ತಾವೇ ಬರೆದುಕೊಂಡು ಬಂದ ಡೈಲಾಗಿನೊಂದಿಗೆ ಪ್ರಾಕ್ಟೀಸ್ ತೆಗೆದುಕೊಂಡರು. ಆ ಸಮಯ ಬಹಳ ತಮಾಷೆಯಾಗಿತ್ತು. ಹೊರಗಡೆ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯದರ್ಶಿ, ಎಸ್ಪಿ ಮತ್ತಿತರ ಅಧಿಕಾರಿಗಳೆಲ್ಲಾ ಕಾಯುತ್ತಾ ಕುಳಿತಿದ್ದರೆ ಪ್ರಕಾಶ್ ಒಳಗೆ ನಮ್ಮಂತಹ ತರ್ಲೆ ಹುಡುಗರೊಂದಿಗೆ ಪಾಂಡುರಾಜನ ತಾಲೀಮು ನಡೆಸುತ್ತಿದ್ದಾರೆ. ಶಿವರಾತ್ರಿ ಮತ್ತು ಎರಡನೇ ಶನಿವಾರ ಅಡ್ಜೆಸ್ಟ್ ಮಾಡಿಕೊಂಡು ರಜಾ ಅನುಭವಿಸಲು ತಯಾರಾಗಿದ್ದ ಅಧಿಕಾರಿಗಳು ಬಹಳ ಅಸಹನೆಯಿಂದ ನಮ್ಮ ನಾಟಕದ ಪ್ರಸಂಗದಲ್ಲಿ ಸಿಕ್ಕಿಕೊಂಡಿದ್ದರು. ಇದನ್ನು ಪ್ರಕಾಶ್‌ಗೆ ಹೇಳಿ ನಗಿಸಿದ್ದೆ. ಆದರೆ ಪ್ರಕಾಶ್ ಅವರನ್ನೆಲ್ಲಾ ಕರೆದು ವಿನಯದಿಂದ "ನೀವೆಲ್ಲಾ ಹೋಗ್ರಪ್ಪ, ನಮ್ಮ ಯಾವುದೊ ತೆವಲಿಗೆ ನೀವ್ಯಾಕ ಕಾಯ್ತಾಯಿದ್ದಿರಿ" ಎಂದು ಹೇಳಿದ್ದರು.

ಪ್ರಕಾಶ್ ತಮ್ಮ ಪಾತ್ರ ಮುಗಿಸಿ ರಾತ್ರಿಯೆಲ್ಲಾ ನಾಟಕ ನೋಡಿದರು. ಆಗ ನಾವು "ನೋಡಿ ಸಾರ್ ಕೆಟ್ಟ ಕೆಟ್ಟ ಸಿನಿಮಾಗಳಿಗೆ ಲಕ್ಷಾಂತರ ಸಬ್ಸಿಡಿ ಕೊಡ್ತರೆ. ನಮ್ಮಂತವರು ಪೌರಾಣಿಕ ನಾಟಕ ಆಡಿದ್ರೆ ಒಂದು ಪೈಸೆ ಕೊಡೋದಿಲ್ಲ" ಎಂದು ಹೇಳಿದೆವು. ಆ ಬಗ್ಗೆ ಗಂಭೀರವಾಗಿ ಯೋಚಿಸಿದ ಪ್ರಕಾಶ್ ಸದನದಲ್ಲಿ ಚರ್ಚೆ ತೆಗೆದು ಗ್ರಾಮೀಣ ಪ್ರದೇಶದಲ್ಲಾಡುವ ಪೌರಾಣಿಕ ನಾಟಕಕ್ಕೆ ಐದು ಸಾವಿರ ಧನಸಹಾಯ ಕೊಡುವಂತೆ ಮಾಡಿದರು.



ಈ ಬಗ್ಗೆ ಲಂಕೇಶ್ ಪತ್ರಿಕೆಯಲ್ಲಿ ನಾನು ಲೇಖನ ಬರೆಯುತ್ತಾ ಕುಳಿತಿದ್ದಾಗ ಹೊರಬಂದ ಲಂಕೇಶರು "ಆ ಪ್ರಕಾಶ ನಾಟಕ ಆಡಿದ ಅಂತ ಸುಳ್ಳುಸುಳ್ಳನೇ ಬರೀತಿಯಲ್ಲಯ್ಯ" ಎಂದರು. "ಸುಳ್ಳಲ್ಲ ಫೋಟೋ ನೋಡಿ ಸಾರ್" ಎಂದೆ. "ಪ್ರಕಾಶನಿಗೆ ನಾಟಕದ ಹೆಂಗಸರ ಜೊತೆ ಮಾತಾಡದು ಅಂದ್ರೆ ತುಂಬಾ ಇಷ್ಟ ಗೊತ್ತೆ?" ಎಂದು ಲಂಕೇಶ್ ತಮಾಷೆ ಮಾಡಿದರು. ನಾನದನ್ನು ಅಲ್ಲಗಳೆದಾಗ ನಮ್ಮ ನಾಟಕದ ಫೋಟೊಗಳು ಅವರ ಟೇಬಲ್ ಮೇಲಿದ್ದವು. ಅವುಗಳಲ್ಲಿ ದ್ರೌಪದಿ ಪಾತ್ರಧಾರಿ ಪ್ರಕಾಶ ಜೊತೆ ತೆಗೆಸಿಕೊಂಡಿದ್ದ ಫೋಟೊ ಕೂಡ ಇತ್ತು, ಕೂಡಲೇ ಲಂಕೇಶ್ ಅದನ್ನೆತ್ತಿ "ನೋಡು ನಾನೇಳ್ಲಿಲ್ವೆ?" ಎಂದು ನಕ್ಕರು.

ಪ್ರಕಾಶ್ ಬಗ್ಗೆ ಎಷ್ಟೆಲ್ಲಾ ಟೀಕಿಸಿದರೂ, ಆಡಿಕೊಂಡು ಲೇಖನ ಬರೆದರೂ, ಲಂಕೇಶ್ ಮತ್ತು ಪ್ರಕಾಶರ ನಡುವೆ ಒಳ್ಳೆಯ ಸ್ನೇಹವಿತ್ತು, ನನ್ನನ್ನು ಒಂದು ಬಾರಿ ಲಂಕೇಶರು "ಅದೇನಯ್ಯ ನಿನಗೆ ಪ್ರಕಾಶ್ ಕಂಡ್ರೆ ಬಾಳ ಇಷ್ಟ?" ಎಂದರು. "ನಾವೆಲ್ಲಾ ರಾಜಕಾರಣಿಗಳಾದ್ರೆ ಪ್ರಕಾಶ್ ತರನೆ ಇರಬೇಕಲ್ಲಾ ಸಾರ್, ಅದಕ್ಕೆ" ಎಂದೆ. "ಏನಿಲ್ಲ, ಅವ್ರುನೆಲ್ಲೊ ನಿನ್ನ ಲೇಖನ ಹೊಗಳಿದ್ರುನೆ ಅದ್ಕೆ ನೀನು ಪ್ರಕಾಶ್ ಪ್ರಕಾಶ್ ಅಂತಿ" ಎಂದರು. ಈ ಮಾತು ನನ್ನ ಒಳ ಮನಸ್ಸಿಗೊಂದಿಷ್ಟು ಬ್ಯಾಟರಿ ಹಚ್ಚುವಂತೆ ಮಾಡಿತು. ಆದರೆ ಪ್ರಕಾಶ್ ನಾನು ಲೇಖಕನಲ್ಲದಿದ್ದರೂ ಗೌರವಿಸುವಂತಹ ವ್ಯಕ್ತಿಯಾಗಿದ್ದರು.

ಸರಕಾರದ ದೊಡ್ಡ ದೊಡ್ಡ ಖಾತೆಗಳನ್ನ ಅವರು ನಿಭಾಯಿಸಿದ್ದರೂ ಆ ಸ್ಥಾನಮಾನ ಅವರನ್ನು ಬದಲಿಸಲಾಗಲಿಲ್ಲ, ಜಾನಪದ ಕಲಾವಿದರು, ನಾಟಕದವರು, ಸಾಂಸ್ಕೃತಿಕ ಲೋಕದವರನ್ನ ಅತ್ಯಂತ ಪ್ರೀತಿಗೌರವದಿಂದ ನಡೆಸಿಕೊಳ್ಳುತ್ತಿದ್ದರು. ತಮ್ಮ ಅಭಿರುಚಿಯನ್ನ ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವವರಾಗಿದ್ದರು. ಕ್ಲಾರಿಯೋನೆಟ್ ವಾದಕ ನರಸಿಂಹಲು ವಡವಾಟಿಯವರ ವಿದ್ವತ್ತಿಗೆ ತಲೆದೂಗಿದ ಪ್ರಕಾಶ್ ಅವರನ್ನ ಕರೆದುಕೊಂಡು ಬಂದು ಲಂಕೇಶರಿಗೆ ಪರಿಚಯಿಸಿ ಅವರ ಮುಂದೆ ನುಡಿಸುವಂತೆ ಮಾಡಿದ್ದರು ವಡವಾಟಿಯವರ ಕ್ಲಾರಿಯೋನೆಟ್ ಮೆಲೋಡಿಗೆ ದಂಗಾದ ಲಂಕೇಶರು "ನಿನ್ನ ವಿದ್ವತ್ತನ್ನು ಹೊಗಳೊ ಶಕ್ತಿ ನನಗಿಲ್ಲ ಕಣಯ್ಯ" ಎಂದಿದ್ದರು.

ಉತ್ತರ ಕರ್ನಾಟಕದ ಎಲ್ಲಾ ಕಲಾವಿದರಿಗೂ ಪ್ರಕಾಶ್ ಗೆಳೆಯರಂತಿದ್ದರು. ಆ ಭಾಗದ ಯಾವುದೇ ಕಲಾವಿದನ ಹೆಸರೇಳಿದರೆ ಸಾಕು. ಅವರ ಪೂರ್ಣ ವೃತ್ತಾಂತವನ್ನೇ ಹೇಳುತ್ತಿದ್ದರು. ಆ ಲೆಕ್ಕದಲ್ಲಿ ಕರ್ನಾಟಕ ರಾಜಕಾರಣ ಕಂಡ ಸಾಂಸ್ಕೃತಿಕ ವ್ಯಕ್ತಿ ಪ್ರಕಾಶ್ ಒಬ್ಬರೆ. ಸಾಹಿತ್ಯ ಮತ್ತು ರಾಜಕಾರಣವನ್ನು ಸಮನಾಗಿ ಅಧ್ಯಯನ ಮಾಡುತ್ತಿದ್ದ ಪ್ರಕಾಶ್ ಕನ್ನಡದಲ್ಲಿ ಹೊಸದಾಗಿ ಯಾವುದೇ ಪುಸ್ತಕ ಬಂದರೂ ಓದಿರುತ್ತಿದ್ದರು. ರಾತ್ರಿ ನಿದ್ದೆ ಬರುವವರೆಗೂ ಓದುತ್ತಿದ್ದರು. ಆ ನಿದ್ದೆ ಬೆಳಗಿನ ಜಾವಕ್ಕೂ ಬರಬಹುದಿತ್ತು, ಕೃತಿ ಚೆನ್ನಾಗಿದ್ದರೆ ಮುಗಿಸಿಯೇ ಮಲಗುತ್ತಿದ್ದರು. ಆದರೆ ಅವರ ವಿಮರ್ಶೆಯಲ್ಲಿ ತುಂಬ ವಿನಯವಿದ್ದ ಕಾರಣಕ್ಕೆ ಒಮ್ಮೆ ಭೈರಪ್ಪನನ್ನು ಹೊಗಳಿ ಲಂಕೇಶರಿಂದ ಬೈಸಿಕೊಂಡಿದ್ದರು.


ಇಷ್ಟಾದರೂ ಪ್ರಕಾಶ್‌ರಲ್ಲಿ ವ್ಯಕ್ತಿಗಳನ್ನು ಅಳೆಯುವ ಬಹು ಸೂಕ್ಷ್ಮ ದೃಷ್ಟಿಯಿತ್ತು, ಆದರೆ ಅದನ್ನ ಎದುರಿಗೆ ಹೇಳುತ್ತಿರಲಿಲ್ಲ. ಹೇಳಿದ್ದರೆ ಸುಮಾರು ಜನ ಸರಿ ಹೋಗುತ್ತಿದ್ದರೇನೊ. ರೇಣುಕಾಚಾರಿ ಮಾಡಬಾರದ ಕೆಲಸ ಮಾಡಿ ಅವರ ಮನೆಗೆ ಬಂದು ಕುಳಿತಿದ್ದಾಗ ಆತ ಏನೇನೂ ಮಾಡಿಲ್ಲ, ಆತ ತುಂಬಾ ಒಳ್ಳೆ ವ್ಯಕ್ತಿ, ತಾನೇ ತಪ್ಪು ಮಾಡಿದವರಂತೆ ತುಂಬಾ ವಿನಯದಿಂದ ಅವನೊಂದಿಗೆ ಪ್ರಕಾಶ್ ನಡೆದುಕೊಂಡರು. ಕಠೋರವಾಗಿ ಮಾತನಾಡಿ ಬೇರೆಯವರು ತಮ್ಮ ಮೇಲಿಟ್ಟ ಗೌರವವನ್ನು ಪ್ರಕಾಶ್ ಕಳೆದುಕೊಳ್ಳಲು ತಯಾರಿರಲಿಲ್ಲವೇನೋ ಎಂದು ಅನುಮಾನಿಸುವಷ್ಟರಲ್ಲಿ, ಜೈಲಿನಿಂದ ಕೊಲೆ ಆರೋಪಿಯೊಬ್ಬನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಗೃಹಸಚಿವರ ಒಪ್ಪಿಗೆ ಕೇಳಲು ಆತನನ್ನು ಕರೆದುಕೊಂಡು ಬಂದರು. ಕೊಲೆ ಆರೋಪಿಯನ್ನ ನೋಡಿದ ಪ್ರಕಾಶ್ "ಕೂತಗಳಪ್ಪ" ಎಂದರು. ಗೃಹಮಂತ್ರಿಗಳ ಈ ಮಾತಿಗೆ ದಂಗು ಬಡಿದ ಆತ ಗರಬಡಿದಂತೆ ನಿಂತಿದ್ದಾಗ ಪ್ರಕಾಶ್ ಮತ್ತೆ ಅದೇ ಮಾತನ್ನ ಹೇಳಿದರು. ಇದೆಲ್ಲಾ ಅವರ ಸಹಜ ನಡವಳಿಕೆಗಳಾಗಿದ್ದವು.

ಜನತಾದಳ ಕ್ಷಿಪ್ರವಾಗಿ ನಡೆಸಿದ ಅನೈತಿಕ ರಾಜಕಾರಣದ ಫಲವಾಗಿ ಎಂ.ಪಿ.ಪ್ರಕಾಶ್ ವಿಧಾನಸಭೆಯಲ್ಲಿ ಅಗ್ನಿಪರೀಕ್ಷೆಯೊಂದಕ್ಕೆ ತುತ್ತಾದರು. ಕುಮಾರಸ್ವಾಮಿಯನ್ನು ತನ್ನ ನಾಯಕನೆಂದು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಪ್ರಕಾಶ್‌ರಿಂದ ಕರ್ನಾಟಕದ ಪ್ರಜ್ಞಾವಂತ ಮನಸ್ಸುಗಳು ನೇರ ನಡೆಯನ್ನು ನಿರೀಕ್ಷಿಸಿದ್ದವು. ಸಿಂಧ್ಯಾ "ಎಂ.ಪಿ.ಪ್ರಕಾಶ್‌ರೇ ನನ್ನ ನಾಯಕ"ನೆಂದು ಹೇಳಿದರೂ ಪ್ರಕಾಶ್ "ಕುಮಾರಸ್ವಾಮಿ ನನ್ನ ನಾಯಕ" ಎಂದರು. ಆದಾದ ಕೆಲದಿನಗಳ ನಂತರ ಅವರು ಹೆಗ್ಗೋಡಿನ ಪ್ರಸನ್ನರ ಕಾರ್ಯಕ್ರಮಕ್ಕೆ ಬಂದರು. ಆಗ ಅವರನ್ನು ಭೇಟಿಯಾದ ಅವರ ಹಿತೈಷಿಗಳು "ಈ ಸರಕಾರದೊಳಕ್ಕೆ ಸೇರಬೇಡಿ" ಎಂಬ ಸಲಹೆ ಕೊಟ್ಟರು. ಆಗ ನಾನು "ಸಾರ್, ಕಡಿದಾಳು ಶಾಮಣ್ಣನ ಮೇಲೆ ಒಂದು ನಾಟಕ ಬರೆದು ಪ್ರಿಂಟಾಕಿಸಿದ್ದೇನೆ. ಅದರ ಬಿಡುಗಡೆ ನಿಮ್ಮಿಂದಲೇ ಆಗಬೇಕು. ಆದರೆ ಒಂದು ವೇಳೆ ನೀವು ಕುಮಾರಸ್ವಾಮಿ ಸರಕಾರದಲ್ಲಿ ಮಂತ್ರಿಯಾದರೆ ಬರುವುದೇ ಬೇಡ. ನಾನು ನಿಮ್ಮನ್ನು ಕರೆಯುವುದೂ ಇಲ್ಲ" ಎಂದೆ. ಇದನ್ನು ಕೇಳಿ ಅವರು ಒಂದಿಷ್ಟೂ ಬೇಸರ ಮಾಡಿಕೊಳ್ಳದೆ ನಕ್ಕು ಸುಮ್ಮನಾದರು. ಪ್ರಸನ್ನ ಮಾತ್ರ "ಪ್ರಕಾಶ್ ನೀವೀಗ ದೆಹಲಿಗೆ ಹೋಗಿ ಹಳೆ ಸೋಷಲಿಸ್ಟ್ ಗೆಳೆಯರನ್ನ ಭೇಟಿ ಮಾಡಿ ಬನ್ನಿ, ಈ ಸರಕಾರದೊಳಕ್ಕೆ ಸೇರಬೇಡಿ. ಇದು ಕೆಟ್ಟ ಹೆಸರು ತೆಗೆದುಕೊಳ್ಳುತ್ತೆ" ಎಂದರು. ಆದರೆ ನಮ್ಮ ಸಲಹೆಗಳನ್ನು ಮೀರಿದ ರಾಜಕಾರಣ ಪ್ರಕಾಶ್‌ರನ್ನು ಆವರಿಸಿತ್ತು, ಗಣಿರೆಡ್ಡಿಗಳು ರಾಕ್ಷಸಾಕಾರಕ್ಕೆ ಬೆಳೆದು ಸವಾಲಾಗಿದ್ದರು. ಪ್ರಕಾಶ್‌ರನ್ನು ದ್ವೇಷಿಸಲು ಕಾರಣವೇ ಇಲ್ಲದ ಅವರು ಬಹಳ ಅಸಂಸ್ಕೃತರಾಗಿ, ಅನಾಗರಿಕವಾಗಿ ವರ್ತಿಸುತ್ತಿದ್ದರು. ಅಂತಹವರಿಗೆ ಉತ್ತರ ಕೊಡಬೇಕಾದರೆ, ಮತ್ತವರನ್ನ ಎದುರಿಸಬೇಕಾದರೆ ಪ್ರಕಾಶ್ ಮಂತ್ರಿಯಾಗಬೇಕಾದ ಅನಿವಾರ್ಯತೆಯಿತ್ತು. ಕಡೆಗೆ ಪ್ರಕಾಶರ ತೀರ್ಮಾನವನ್ನು ನಾವು ಮೆಚ್ಚಿಕೊಂಡು ಅವರ ಹತ್ತಿರ ಸೇರಿಕೊಂಡೆವು.

ಕವಿತಾ ಲಂಕೇಶ್ 'ಮುಸ್ಸಂಜೆ ಕಥಾಪ್ರಸಂಗ'ವನ್ನು 'ಅವ್ವ' ಎಂದು ನಾಮಕರಣ ಮಾಡಿ ಚಿತ್ರ ತೆಗೆಯಲು ಹೊರಟಾಗ ಮುಸ್ಸಂಜೆಯಲ್ಲಿ ಬರುವ ನಂದ್ಯಪ್ಪನ ಪಾತ್ರಕ್ಕೆ ಎಂ.ಪಿ.ಪ್ರಕಾಶ್‌ರನ್ನು ಆಯ್ಕೆ ಮಾಡಿದರು. ಆ ಪಾತ್ರಕ್ಕೂ ಪ್ರಕಾಶರ ಆಕಾರಕ್ಕೂ ಸರಿಯಾಗಿ ಹೊಂದಿಕೆಯಾಗಿದ್ದರಿಂದ ಪ್ರಕಾಶ್ ಬಹಳ ಖುಷಿಯಿಂದ ಒಪ್ಪಿಕೊಂಡು ಶೂಟಿಂಗ್‌ಗೆ ಬಂದೇಬಿಟ್ಟರು. ಗೃಹಮಂತ್ರಿ ಸಿನಿಮಾದಲ್ಲಿ ಪಾತ್ರ ಮಾಡುವುದರಿಂದ ಮಂಡ್ಯದ ಎಸ್ಪಿ ಮತ್ತು ಇತರೇ ಪೊಲೀಸರೆಲ್ಲಾ ಶೂಟಿಂಗ್ ಜಾಗದಲ್ಲಿ ಜಮಾಯಿಸಿದರು. ಅವರನ್ನೆಲ್ಲಾ ಹತ್ತಿರ ಕರೆದ ಪ್ರಕಾಶ್ "ನೀವೆಲ್ಲಾ ಇಲ್ಲಿ ಬರುವ ಅಗತ್ಯವಿಲ್ಲ" ಎಂದು ಕಳುಹಿಸಿದರು.

ಶೂಟಿಂಗ್ ಆರಂಭವಾದ ನಂತರ ಗೃಹಮಂತ್ರಿಗಳಿಗೆ ತುಂಬಾ ಫೋನ್ ಕರೆಗಳು ಬರಲಾರಂಭಿಸಿವು. ಆಗ ಗಣಿರೆಡ್ಡಿಗಳು ಮತ್ತು ಕುಮಾರಸ್ವಾಮಿ ಸರಕಾರದ ನಡುವೆ ಸಮರವೇ ನಡೆಯುತ್ತಿದ್ದರಿಂದ ಪ್ರಕಾಶ್‌ರ ಮೇಲೆ ತುಂಬಾ ಒತ್ತಡ ಬಿದ್ದಿತ್ತು, ಆಗವರು ಕವಿತಾ ಲಂಕೇಶ್ ಬಳಿ ಕ್ಷಮೆ ಯಾಚಿಸಿ ತಮ್ಮನ್ನು ಆ ಚಿತ್ರದಿಂದ ಕೈಬಿಡುವಂತೆ ಕೇಳಿಕೊಂಡು ನಿರ್ಗಮಿಸಿದರು.

ಈಗ ಈ ನರಕಸದೃಶ ರಾಜಕಾರಣ ನೋಡಲಾಗದೆ ನಿರ್ಗಮಿಸಿದ್ದಾರೆ ಸೃಜನಶೀಲ ವ್ಯಕ್ತಿತ್ವದ ಎಂ.ಪಿ.ಪ್ರಕಾಶ್.



ಮುತಾಲಿಕನ ಭಯೋತ್ಪಾದಕ ಶಿಷ್ಯ ಟಕ್ಕಳಕಿ ಸಿಕ್ಕಿ ಬಿದ್ದ

ಕೊನೆಗೂ ಹಿಂದೂತ್ವವಾದಿಗಳ ಅಸಲಿ ಕರಾಳಮುಖ ಬೆತ್ತಲಾಗುತ್ತಿದೆ. ಹಿಂದೂ ಧರ್ಮದ ಹೆಸರಲ್ಲಿ ಹಿಂದೂತ್ವವಾದಿಗಳು ನಡೆಸಿರುವ ಭಯೋತ್ಪಾದಕ ಕೃತ್ಯಗಳು, ಬಾಂಬ್ ಸ್ಫೋಟಗಳು, ಹಣ ವಸೂಲಿ, ದರೋಡೆ, ಅತ್ಯಾಚಾರದಂತಹ ಪ್ರಕರಣಗಳು ಒಂದೊಂದಾಗಿ ಹೊರಬಂದು ಇವರ ಹಾರಾಟಕ್ಕೆ ಸರಿಯಾದ ಹೊಡೆತ ಬಿದ್ದಿದೆ.

ಹಿಂದೂತ್ವವಾದಿಗಳ ಅಸಲಿ ಮುಖವಾಡವನ್ನು ಬೆತ್ತಲಾಗಿಸುವ ಪ್ರಕ್ರಿಯೆಯಲ್ಲಿ ಮೊನ್ನೆ ಬೆಳಗಾಂ ಜಿಲ್ಲೆಯ ಗೋಕಾಕ್ ಪಟ್ಟಣದಿಂದ ಪ್ರವೀಣ ಟಕ್ಕಳಕಿ ಎಂಬ ಕಟ್ಟರ್ ಹಿಂದೂ ಉಗ್ರನನ್ನು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿ ಎಳೆದೊಯ್ದಿದ್ದಾರೆ. ಆ ಮೂಲಕ, ಮಾಲೆಗಾಂವ್, ಅಜ್ಮೀರ್, ಸಂಜೋತಾ ಎಕ್ಸ್‌ಪ್ರೆಸ್ ರೈಲು ಮತ್ತು ಇತರೆಡೆ ಬಾಂಬ್‌ಗಳನ್ನು ಸ್ಫೋಟಿಸಿ



ನೂರಾರು ಅಮಾಯಕರನ್ನು ಬಲಿ ತೆಗೆದುಕೊಂಡ ಆರೆಸ್ಸೆಸ್‌ನ ಹಿಂದೂತ್ವವಾದಿ ಭಯೋತ್ಪಾದಕರ ಜಾಲ ಕರ್ನಾಟದಲ್ಲೂ ಹರಡಿಕೊಂಡಿದೆ ಎಂಬುದು ಸಾಬೀತಾಗಿದೆ.

ಪ್ರಮೋದ್ ಮುತಾಲಿಕ್ ಎಂಬ ಹಿಂದೂತ್ವವಾದಿ ವಿಷಜಂತುವಿನ ಅಪರಾವತಾರದಂತೆ ಕೋಮುವಾದದ ವಿಷ ಉಗುಳುತ್ತಿದ್ದವನು ಪ್ರವೀಣ ಟಕ್ಕಳಕಿ. ಸ್ವಾಮಿ ಅಸೀಮಾನಂದ, ಸಾಧ್ವಿ ಪ್ರಜ್ಞಾಸಿಂಗ್, ಕರ್ನಲ್ ಪುರೋಹಿತ್ ಮತ್ತು ಇತರ ಹಿಂದೂತ್ವವಾದಿ ಭಯೋತ್ಪಾದಕರು 2006ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ ನಾಲ್ಕು ಬಾಂಬ್‌ಗಳನ್ನು ಸ್ಫೋಟಿಸಿ ಹಲವಾರು ಜನರನ್ನು ಕೊಂದಿದ್ದರು. ಅವರ ಗುಂಪಿಗೆ ಪ್ರವೀಣ ಟಕ್ಕಳಕಿ ಸೇರಿದ್ದಾನೆ ಎಂಬುದಕ್ಕೆ ಸಾಕಷ್ಟು ಸಾಕ್ಷಿಗಳನ್ನು ಕಲೆ ಹಾಕಿರುವ ಎ.ಟಿ.ಎಸ್. ತಂಡ ಮೊನ್ನೆ ಸದ್ದಿಲ್ಲದೆ ಆತನನ್ನು ಬಂಧಿಸಿತು.

ವಿಚಿತ್ರವೆಂದರೆ ಟಕ್ಕಳಕಿ ವಿರುದ್ಧ ಇಲ್ಲಿಯವರೆಗೆ ಯಾವೊಂದು ಕೇಸನ್ನೂ ಸ್ಥಳೀಯವಾಗಿ ದಾಖಲಿಸಿಲ್ಲ. ಹೀಗಾಗಿ ಗೋಕಾಕದ ಜನ ಟಕ್ಕಳಕಿ ಸಾಚಾ ಎಂದು ನಂಬಿ ಆತನ ಬಂಧನವನ್ನು ಖಂಡಿಸಿ ಪ್ರತಿಭಟನೆ, ಗೋಕಾಕ್ ಬಂದ್ ಎಂದೆಲ್ಲಾ ಘರ್ಜಿಸುತ್ತಿದ್ದಾರೆ.

ಮುತಾಲಿಕನೆ ಇವನಿಗೆ ಮಾಡೆಲ್

ಪಕ್ಕಾ ಸಂಭಾವಿತ ಕುಟುಂಬದಲ್ಲಿ ಹುಟ್ಟಿರುವ ಟಕ್ಕಳಕಿ ಯಾವ ಮಟ್ಟಕ್ಕೆ ಮುತಾಲಿಕ್‌ನ ಗರಡಿಯಲ್ಲಿ ಪಳಗಿದ್ದ ಎಂದರೆ, ಗೋಕಾಕ್‌ನ ಪ್ರತಿ ಗಲ್ಲಿಯ ಯುವಕರನ್ನು ತನ್ನ ಗ್ಯಾಂಗಿಗೆ ಸೇರಿಸಿಕೊಂಡಿದ್ದ. ನಂತರ ಈ ಗ್ಯಾಂಗಿನೊಂದಿಗೆ ಮುಸಲ್ಮಾನರನ್ನು ಪ್ರತಿ ಹಂತದಲ್ಲೂ ಕಾಡತೊಡಗಿದ. ಹಿಂದೊಮ್ಮೆ ಗೋಕಾಕದ ಖಾಸಗಿ ಹೋಟೆಲ್ಲೊಂದರ ಸಭಾಭವನದಲ್ಲಿ ಮತಾಂತರದ ಬಗ್ಗೆ ಪ್ರಚೋದನಾಕಾರಿ ಭಾಷಣ ಮಾಡುತ್ತಿದ್ದಾರೆಂದು ಇದೇ ಪ್ರವೀಣ ಕೆಲ ಹುಡುಗರೊಂದಿಗೆ ಸೇರಿ ಅಲ್ಲಿ ದಾಂಧಲೆ ಮಾಡಿದ್ದ. ಅಲ್ಲಿದ್ದ ಜನರಿಗೆ ಮನಬಂದಂತೆ ಥಳಿಸಿದ್ದ. ಟಕ್ಕಳಕಿಯ ಇಂತಹ ಸಾಹಸಗಳಿಂದಾಗಿ ಗೋಕಾಕದ ಜನ ಈತನನ್ನು 'ಪ್ರವೀಣ ಮುತಾಲಿಕ್' ಎಂತಲೂ ಕರೆಯುತ್ತಿದ್ದರು.


ಒಂದು ಹಂತದಲ್ಲಿ ಪ್ರಮೋದ್ ಮುತಾಲಿಕ್ ಭಜರಂಗ ದಳದಿಂದ ಕಿಕ್‌ಔಟಾದ. ಆನಂತರ ಒಂದಷ್ಟು ದಿನ ಮಹಾರಾಷ್ಟ್ರದ ಶಿವಸೇನೆಯನ್ನು ಕರ್ನಾಟಕದಲ್ಲೂ ಕಟ್ಟುತ್ತೇನೆಂದು ಮುತಾಲಿಕ್ ಓಡಾಡಿದ. ಅದು ಸರಿಬರಲಿಲ್ಲವಾದ್ದರಿಂದ ಶಿವಸೇನೆಗೆ ಕೈಕೊಟ್ಟ ಮುತಾಲಿಕ್ ನಂತರದ ದಿನಗಳಲ್ಲಿ 'ಶ್ರೀ ರಾಮಸೇನೆ' ಎಂಬ ಯುವ ಮಂಗಗಳ ಗುಂಪು ಹುಟ್ಟುಹಾಕಿದ. ಈ ಎಲ್ಲಾ ಹಂತಗಳಲ್ಲೂ ಮುತಾಲಿಕನೊಂದಿಗೆ ಪೂರ್ಣಾವಧಿ ಮುಖಂಡನಾಗಿ ಕೆಲಸ ಮಾಡಿದ ಟಕ್ಕಳಕಿ ವಿರುದ್ಧ ಆತನ ಮನೆಯವರಿಂದಲೇ ವಿರೋಧವಿತ್ತು.

ಟಕ್ಕಳಕಿಯ ತಂದೆ ನಿವೃತ್ತ ಉಪ ತಹಶೀಲ್ದಾರ್ ವೆಂಕಟೇಶ ಟಕ್ಕಳಕಿ ಎರಡು ವರ್ಷಗಳ ಹಿಂದೆ ತೀರಿಕೊಂಡರು. ಹುಬ್ಬಳ್ಳಿಯ ಮೋಟಾರು ಕಂಪನಿಯಲ್ಲಿ ಅಣ್ಣ ಮಾಲತೇಶ ನೌಕರಿ ಮಾಡುತ್ತಿದ್ದಾರೆ. ಸಹೋದರಿಯರಿಬ್ಬರೂ ಮದುವೆ ಮಾಡಿಕೊಂಡು ಗಂಡನ ಮನೆ ಸೇರಿದ್ದಾರೆ. ಗೋಕಾಕ್‌ನಲ್ಲೆ ಡಿಪ್ಲೊಮಾವರೆಗೂ ಓದಿಕೊಂಡಿದ್ದ ಪ್ರವೀಣ ಟಕ್ಕಳಕಿ ಇತ್ತೀಚೆಗೆ ಗೋಕಾಕ್ ಪಟ್ಟಣದ ಗುರುವಾರ ಪೇಟೆಯ ತಂಬಾಕ್ ಗಲ್ಲಿಯಲ್ಲಿ ಒಂದು ಅಂಗಡಿ ಇಟ್ಟುಕೊಂಡು ಅದರಲ್ಲಿ ಮೊಬೈಲ್ ಕರೆನ್ಸಿ ಮಾರುತ್ತಿದ್ದ.

ಟೈಗರ್ ಗ್ಯಾಂಗ್...

ಪ್ರಮೋದ ಮುತಾಲಿಕ್ ಭಜರಂಗದಳದಲ್ಲಿದ್ದಾಗ ತಾನು ತಯಾರು ಮಾಡಿದ್ದ ಕೆಲ ಹುಡುಗರನ್ನು ಇಟ್ಟುಕೊಂಡು ಶಿವಸೇನಾದ ಬಾಳಾಠಾಕ್ರೆಯಿಂದ ಹಣ ಕಿತ್ತುಕೊಂಡು ಬಂದು 'ಶ್ರೀ ರಾಮಸೇನೆ' ಎಂಬ ಹೊಸ ಸಂಘಟನೆ ಹುಟ್ಟುಹಾಕಿದ. ಪ್ರಾರಂಭದಲ್ಲಿ ರಾಜ್ಯದ ಹಿಂದೂ ಶ್ರೀಮಂತರ ಪಟ್ಟಿ ತಯಾರಿಸಿಕೊಂಡ ಇವರು ಕಂಡಕಂಡಲ್ಲಿ ವಸೂಲಿಗಿಳಿದರು. ಆಗಲೇ ಪ್ರಮೋದ ಮುತಾಲಿಕ್ ಸರ್ಕಾರಿ ಬಸ್ಸಿನಿಂದ ಫೋರ್ಡ್ ಕಾರಿಗೆ ಪ್ರಮೋಷನ್ ಪಡೆದಿದ್ದು!

ಗೋಕಾಕ್‌ನಲ್ಲಿ ಟಕ್ಕಳಕಿ ಹಿಂದೂಪರ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದನ್ನು ಗಮನಿಸಿದ ಮುತಾಲಿಕ್‌ನ ಬಲಗೈ ಭಂಟ ರಾಜು ಜಾದವ ಇವನನ್ನು ಮತ್ತಷ್ಟು ಹುರಿದುಂಬಿಸಿ ಮುತಾಲಿಕನಿಗೆ ಪರಿಚಯಿಸಿದ.




ಮುತಾಲಿಕ

ಆವಾಗಲೇ ಟಕ್ಕಳಕಿಯ ಮುಸ್ಲಿಮ್ ವಿರೋಧಿ ಯಾತ್ರೆ ಪ್ರಾರಂಭವಾಗಿದ್ದು, ಹಿಂದೂ ಸೇನಾ ಕಟ್ಟಲು ಉತ್ತರ ಕರ್ನಾಟಕ ಭಾಗದ ಬಾಗಲಕೋಟೆಯ ನಾಗರಾಜ ಜಂಬಗಿ, ಹನುಮಂತ ಬಂಡಿವಡ್ಡರ, ಬಸವರಾಜ ರೂಗಿ, ಹುಬ್ಬಳ್ಳಿ ಮೂಲದ ರಾಜು ಜಾದವರ ಗುಂಪಿಗೆ ಪ್ರವೀಣ ಟಕ್ಕಳಕಿಯೂ ಸೇರಿಕೊಂಡ. ಅಸಲಿಗೆ ಈ ಟೀಂ ಕಟ್ಟಿದವನು ಪ್ರಮೋದ ಮುತಾಲಿಕ್. ಆದರೆ ನಿರೀಕ್ಷೆಗೆ ತಕ್ಕಂತೆ ಹಿಂದೂ ಸೇನಾ ಹೆಸರಿನಿಂದ ಹಣ ವಸೂಲಿಯಾಗಲಿಲ್ಲ. ಆದರೆ ಹಣದ ಹಸಿವಿಗೆ ಬಿದ್ದ ಮುತಾಲಿಕ್ ಲೂಟಿ, ದರೋಡೆಗಾಗಿ ಮುಂದೆ ಇದೇ ಹುಡುಗರನ್ನು ಇಟ್ಟುಕೊಂಡು ಟೈಗರ್ ಗ್ಯಾಂಗ್ ಕಟ್ಟಿದ್ದ. ರಾಜು ಜಾದವ ಈ ಗ್ಯಾಂಗಿನ ಮುಖ್ಯಸ್ಥನಾದ. ಅದಕ್ಕೆ ಟಕ್ಕಳಕಿಯೂ ಮನಸಾರೆ ಸೇವೆ ಸಲ್ಲಿಸಿದ.

ಕೊಲೆ, ದರೋಡೆನೇ ಇವರ ಕಾಯಕ

ರಾಜು ಜಾದವನ ಪಕ್ಕಾ ಹಿಂಬಾಲಕನಾಗಿದ್ದ ಪ್ರವೀಣ ಟಕ್ಕಳಕಿ ಕೂಡಾ ಗೋಕಾಕ್‌ನಲ್ಲಿ ತನ್ನ ಪ್ರಲಾಪ ತೋರಿದ. ಆದರೆ ನಡೆದ ಎಲ್ಲ ಪ್ರಕರಣಗಳಲ್ಲೂ ಇವನ ಹೆಸರು ದಾಖಲಾಗಿಲ್ಲ.



ಸಾಧ್ವಿ ಪ್ರಜ್ಞಾ

ಹಿಂದೂ ಹುಡುಗಿಯೊಬ್ಬಳನ್ನು ಪ್ರೀತಿಸಿದ ಕಾರಣಕ್ಕೆ ರಿಯಾಜ್ ಎಂಬುವನ್ನು ರಮ್ಜಾನ್ ಹಬ್ಬದ ದಿನವೇ ಭೀಕರವಾಗಿ ಹತ್ಯೆ ಮಾಡಲಾಯಿತು. ಇದು ರಾಜು ಜಾದವನ ಕೃತ್ಯವಾಗಿತ್ತು, ರಿಯಾಜ್‌ನ ಗುಪ್ತ ಅಂಗವನ್ನು ಕತ್ತರಿಸಿ ಹಾಕಿದ್ದ ಈ ಕೊಲೆಗಡುಕರು ಇಡೀ ಗೋಕಾಕ್ ಬೆಚ್ಚಿ ಬೀಳುವಂತೆ ಮಾಡಿದ್ದರು. ನಾಗರಾಜ ಜಂಬಗಿ ಟೀಂನೊಂದಿಗೆ ಪ್ಯಾರಲಲ್ ಆಗಿ ಕೆಲಸ ಮಾಡುತ್ತಿದ್ದ ಜಾದವನ ಗುಂಪು ಮಹಾರಾಷ್ಟ್ರದ ಮೀರಜ್, ಸೊಲ್ಲಾಪುರ, ಸತಾರಾ, ಪುಣೆ, ಕೊಲ್ಹಾಪುರಗಳಲ್ಲಿ ಸಾಕಷ್ಟು ದರೋಡೆಗಳನ್ನು ಮಾಡಿದೆ.

ಇವರ ಅಟ್ಟಹಾಸ ಮತ್ತು ಚಲನವಲನದ ಮೇಲೆ ಕಣ್ಣಿಟ್ಟಿದ್ದ ಶಾಸಕ ಸತೀಶ ಜಾರಕಿಹೊಳಿ ಮತ್ತು ಪೊಲೀಸ್ ಅಧಿಕಾರಿಗಳಾದ ನಾರಾಯಣ ಬರ್ಮನಿ, ತುಳಸಿಗೇರಿ, ರವೀಂದ್ರ ಶಿರೂರರನ್ನೂ ಹತ್ಯೆ ಮಾಡಲು ಈ ಗ್ಯಾಂಗ್ ಸಂಚು ರೂಪಿಸಿತ್ತಂತೆ. ಗೋಕಾಕ್ ಹೊರವಲಯದ ಗುಡ್ಡದ ಮೇಲೆ ಸಭೆ ನಡೆಸಿ ಈ ತೀರ್ಮಾನಕ್ಕೂ ಜಾದವನ ಟೀಂ ಬಂದಿತ್ತಂತೆ. ಅದೃಷ್ಟವಶಾತ್ ಅವರ ಈ ಯಾವ ಯೋಜನೆಯೂ ಜರುಗಲಿಲ್ಲ. ಮುಂದೆ ಹುಬ್ಬಳ್ಳಿ ಕೋರ್ಟ್ ಬ್ಲಾಸ್ಟ್ ಕೇಸಿನಲ್ಲಿ ಜಂಬಗಿ ಟೀಂ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾದವನ ಗ್ರೂಪ್ ಜೈಲು ಸೇರಿತು. ಜೈಲು ಸೇರಿದ್ದವರೊಂದಿಗೆ ಪ್ರವೀಣ ಟಕ್ಕಳಕಿಗೆ ನಿಕಟಸಂಪರ್ಕವಿತ್ತು. ಇದು ಹೀಗೆ ಮುಂದುವರೆದರೆ ತಾನೂ ಜೈಲು ಸೇರುವುದು ಗ್ಯಾರಂಟಿ ಎಂದು ಭಾವಿಸಿದ ಟಕ್ಕಳಕಿ ಗೋಕಾಕಿನ ತಂಬಾಕ ಗಲ್ಲಿಯಲ್ಲಿ ಮೊಬೈಲ್ ಅಂಗಡಿ ತೆಗೆದು ತಾನು ಸೇಫಾದೆ ಎಂದು ತಿಳಿದ.

ಮಾಲೆಗಾಂವ್ ನಂಟು

ಸಾಧ್ವಿ ಪ್ರಜ್ಞಾಳ ಸಾರಥ್ಯದಲ್ಲಿ ಮಾಲೆಗಾಂವ್‌ನಲ್ಲಿ ನಡೆದ 31 ಜನ ಮುಸಲ್ಮಾನರ ಹತ್ಯೆಯ ಸಂದರ್ಭದಲ್ಲಿ ಪ್ರವೀಣ ಟಕ್ಕಳಕಿ ಗೋಕಾಕಿನ ಟೈಗರ್ ಗ್ಯಾಂಗಿನಲ್ಲಿ ಸಕ್ರಿಯನಾಗಿದ್ದ. ಇಲ್ಲಿ ಲೂಟಿ ಮಾಡಿದ್ದ ಹಣದ ಥೈಲಿಯನ್ನು ಇದೇ ಟಕ್ಕಳಕಿ ಸೇರಿದಂತೆ ಮೂವರು ಸಾಧ್ವಿಗೆ ತಲುಪಿಸಿದ್ದರೆಂಬ ರೂಮರ್ ಇದೆ. ಗೋಕಾಕದ ಹೊರಗೆ ಹಿಂದೂ ಉಗ್ರರೊಂದಿಗೆ ಸತತ ಸಂಪರ್ಕದಲ್ಲಿದ್ದ ಪ್ರವೀಣ ಅಂತರರಾಜ್ಯ ಹಿಂದೂ ಉಗ್ರರಿಗೂ ಹಾಗೂ ಪ್ರಮೋದ ಮುತಾಲಿಕನಿಗೂ ಮೀಡಿಯೇಟರ್ ನಾಗಿದ್ದ ಎಂಬ ಅನುಮಾನ ಈಗ ಹೊರಬಿದ್ದಿದೆ. ಬೆಳಗಾವಿಯ ಇಬ್ಬರು ಯುವಕರೊಂದಿಗೆ 2006ರಲ್ಲಿ ಸಾಧ್ವಿ ಪ್ರಜ್ಞಾಸಿಂಗ್ ನಡೆಸಿದ ರಹಸ್ಯ ಮೀಟಿಂಗ್‌ಗಳಲ್ಲಿ ಪ್ರವೀಣ ಪಾಲ್ಗೊಂಡಿದ್ದ. ಅಲ್ಲದೆ ಮಾಲೆಗಾಂವ್‌ಗೂ ಎರಡು ಬಾರಿ ಹೋಗಿ ಅಲ್ಲಿಯ ಲಾಡ್ಜ್‌ಗಳಲ್ಲಿ ವಾಸ್ತವ್ಯ ಹೂಡಿದ್ದ ಬಗ್ಗೆ ಎ.ಟಿ.ಎಸ್.ಗೆ ಮಾಹಿತಿ ಸಿಕ್ಕಿದೆ. ಸೆಪ್ಟೆಂಬರ್ 8ರ ಸ್ಫೋಟಕ್ಕೂ ಹದಿನೈದು ದಿನ ಮೊದಲು ಪ್ರವೀಣ ಟಕ್ಕಳಕಿ ಮಾಲೆಗಾಂವ್‌ನಲ್ಲಿದ್ದ ಎಂಬ ಅನುಮಾನ ಭಯೋತ್ಪಾದನಾ ನಿಗ್ರಹದಳದ ಅಧಿಕಾರಿ ರಾಕೇಶ ಮಾರಿಯಾಗೆ ಸ್ಪಷ್ಟವಾಗಿ ಮೂಡಿದೆ.



ಎಟಿಎಸ್ ತಂಡ ಕಳೆದ ಐದಾರು ತಿಂಗಳಿಂದ ಅನೇಕ ಬಾರಿ ಬೆಳಗಾವಿ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಸುತ್ತಾಡಿ ಮಾಹಿತಿ ಕಲೆ ಹಾಕಿದೆ. ಬೆಳಗಾವಿ ಗುಪ್ತ ವಿಭಾಗದ ಪೊಲೀಸರು ಹೇಳುವ ಹಾಗೆ ಎಟಿಎಸ್ ತಂಡ ಒಂಭತ್ತು ಸಾರಿ ಇಲ್ಲಿಗೆ ಬಂದಿದೆಯಂತೆ. ಅಲ್ಲದೆ ಪ್ರವೀಣ ಟಕ್ಕಳಕಿಯನ್ನು ಈ ಹಿಂದೆಯೂ ಒಂದು ಸಲ ವಿಚಾರಣೆಗಾಗಿ ಮುಂಬೈಗೆ ಕರೆದೊಯ್ದಿದ್ದರಂತೆ. ಆದರೆ ಈಗ ಟಕ್ಕಳಕಿಯನ್ನು ಗೋಕಾಕ್‌ದಿಂದಲೇ ಬಂಧಿಸಿದ್ದಾರೆ.

ಟಕ್ಕಳಕಿಯ ವಿಚಾರಣೆಯಿಂದ ಹೊರಬರುವ ಸತ್ಯಗಳ ಮೇಲೆ ಮುಂದಿನ ಬಂಧನ ಯಾರದ್ದು ಎಂಬ ಸುಳಿವು ಸಿಗಬಹುದು. ಸದ್ಯ ಅದು ಪ್ರಮೋದ್ ಮುತಾಲಿಕನತ್ತಲೇ ಗಿರಕಿ ಹೊಡೆಯುತ್ತಿದೆ. ಇನ್ನಾದರೂ ಧರ್ಮ ರಕ್ಷಕರ ಅಸಲೀ ಮರ್ಮ ಜನರಿಗೆ ಅರ್ಥವಾಗಬೇಕಿದೆ.

• ಹುರಳಿಕುಪ್ಪಿ ವಿನಯ್


ಉಗ್ರನಿಗಾಗಿ ಊರು ಬಂದು ಮಾಡಿದ ಮೂರ್ಖರು

ಪ್ರವೀಣ ಟಕ್ಕಳಕಿಯ ನಿಜ ರೂಪ ಅರಿಯದ ಗೋಕಾಕದ ಜನ ಊರು ಬಂದ್ ಮಾಡಲು ಮುಂದಾಗಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ. ಅಲ್ಲದೆ, ಕೇವಲ ಹಿಂದೂಗಳಿಗಾಗಿ ಬದುಕುತ್ತಿರುವ ಹಾಗೆ ಇಲ್ಲಿಯ ಮಠ, ಮಾನ್ಯರು ಮತ್ತು ಬಹುತೇಕ ಎಲ್ಲ ಪಕ್ಷಗಳ ಮುಖಂಡರು ವರ್ತಿಸುತ್ತಿರುವುದು ಖೇದಕರ ಸಂಗತಿಯಾಗಿದೆ.

ಗೋಕಾಕದ ಶ್ರೀ ಕೃಷ್ಣ ಧ್ಯಾನಯೋಗ ಪ್ರತಿಷ್ಠಾನದ ಅಧ್ಯಕ್ಷ ದಯಾನಂದಜಿ ತಾನೆ ಅರೆಸ್ಟ್ ಆದ ಹಾಗೆ ಮೈಪರಚಿಕೊಳ್ಳುತ್ತಿದ್ದಾನೆ. ಟಕ್ಕಳಕಿ ಹಾಗೆಹೀಗೆ ಎಂದು ಮೀಡಿಯಾದ ಮುಂದೆ ಪೋಜು ಕೊಡುತ್ತಿರುವ ಈ ಸ್ವಾಮಿಗೆ ಅಸಲಿ ವಿಚಾರ ಗೊತ್ತಾದರೆ ಕೃಷ್ಣನ ಹೆಸರು ಬದಲಾಯಿಸಿ ರಾಮನ ಹೆಸರಿಟ್ಟುಕೊಂಡು ವನವಾಸಕ್ಕೆ ಹೋಗಬೇಕಾಗುತ್ತದೆ. ಇನ್ನು ಇಲ್ಲಿಯ ಶೂನ್ಯ ಸಂಪಾದಕ ಮಠದ ಮುರುಘರಾಜೇಂದ್ರ ಸ್ವಾಮಿ ತನ್ನ ಮಠದಲ್ಲಿ ಸಭೆ ನಡೆಸಿ ಸ್ವಾತಂತ್ರ ಹೋರಾಟಗಾರನನ್ನೇ ಬಂಧಿಸಲಾಗಿದೆ ಎಂಬಂತೆ ಟಕ್ಕಳಕಿಯ ಅರೆಸ್ಟನ್ನು ವಿರೋಧಿಸಿದ್ದನ್ನು ನೋಡಿದರೆ ನಿಜಕ್ಕೂ ಅಸಹ್ಯವಾಗುತ್ತದೆ.

ನಾಡಿನ ಕೆಲ ಕೇಸರಿಧಾರಿ ಸ್ವಾಮಿಗಳು ಇತ್ತೀಚಿಗೆ ಭ್ರಷ್ಟ ಯಡ್ಡಿ ಪರ ವಕಾಲತ್ತು ವಹಿಸಿದ ಹಾಗೆ ಇವರು ಹಿಂದೂ ಉಗ್ರ ಪ್ರವೀಣ ಟಕ್ಕಳಕಿ ಪರ ನಿಂತಿದ್ದಾರೆ. ಇವರ ಮಾತಿಗೆ ಜೋತು ಬಿದ್ದ ಕೆಲ ಸ್ಥಳೀಯ ರಾಜಕೀಯ ಮುಖಂಡರು ಜೈ ಎಂದಿದ್ದಾರೆ. ಆದರೆ ಎಟಿಎಸ್ ಅಸಲಿಯತ್ತು ಬಯಲಾಗಿಸಿದರೆ ಇವರು ಬೆಚ್ಚಿಗೆ ಮಠ ಸೇರಿಕೊಂಡು 'ಇಂವ ನಮ್ಮವನಲ್ಲ, ಇಂವ ನಮ್ಮವನಲ್ಲ' ಎಂದು ಜಪಮಣಿ ಹಿಡಿಯುವುದರಲ್ಲಿ ಸಂದೇಹವಿಲ್ಲ.


ಬಜೆಟ್ ನಂತರ ಯಡ್ಡಿಗೆ ಗೇಟ್ ಪಾಸ್?



ಈಗ ದೆಹಲಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಸಂಬಂಧ ಸ್ವಲ್ಪ ಸುಧಾರಿಸಿರುವುದು ಯಡ್ಡಿ ಪಾಲಿಗೆ ಕಂಟಕ ಒಂದೇ ರಾಜ್ಯ ರಾಜಕೀಯ ಪಂಡಿತರು ವ್ಯಾಖ್ಯಾನಿಸುತ್ತಿದ್ದಾರೆ. ಈಗ 2ಜಿ ಸ್ಪೆಕ್ಟ್ರಂ ಹಗರಣ ತನಿಖೆಗೆ ಜಂಟಿ ಸದನ ಸಮಿತಿಯನ್ನು ರಚಿಸಲು ಪ್ರಧಾನಿ ಒಪ್ಪಿಕೊಳ್ಳುವ ಮೂಲಕ ಬಿಜೆಪಿಯ ಪ್ರಮುಖ ಬೇಡಿಕೆಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಒಪ್ಪಿಕೊಂಡಂತಾಗಿದೆ. ಇದರಿಂದಾಗಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ನಿಮ್ಮ ಬೇಡಿಕೆಗಳಿಗೆ ನಾವು ಸ್ಪಂದಿಸಿದ್ದೇವೆ. ಆದರೆ ಕರ್ನಾಟಕದಲ್ಲಿ ನೀವೇನು ಮಾಡಿದ್ದೀರಿ?' ಎಂದು ಕಾಂಗ್ರೆಸ್ ನಾಯಕರು ಬಿಜೆಪಿಯ ಮೇಲೆ ತಿರುಗಿಬೀಳುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಪಕ್ಷಕ್ಕೆ ಅವಮಾನವಾಗುವ ಬದಲು ಯಡಿಯೂರಪ್ಪನನ್ನು ಮುಖ್ಯಮಂತ್ರಿ ಹುದ್ದೆಯಿಂದ ತೆಗೆಯುವುದೇ ಲೇಸು ಎಂಬ ತೀರ್ಮಾನಕ್ಕೆ ಬಿಜೆಪಿ ನಾಯಕರು ಬಂದಿದ್ದಾರೆ.

'ಬಜೆಟ್ ಮಂಡನೆ ನಂತರ ಯಡಿಯೂರಪ್ಪ ಮುಖ್ಯಮಂತ್ರಿ ಕುರ್ಚಿ ಬಿಡುತ್ತಾರೆ' ಎಂಬುದು ಸದ್ಯ ವಿಧಾನಸೌಧದ ಮೊಗಸಾಲೆಯಲ್ಲಿ ಕೇಳಿಬರುತ್ತಿರುವ ಮಾತು. ಹಾಗೆ ನೋಡಿದರೆ ಕಳೆದ ಏಳೆಂಟು ತಿಂಗಳಲ್ಲಿ ಯಡಿಯೂರಪ್ಪ ರಾಜೀನಾಮೆ ನೀಡುತ್ತಾರೆ ಎಂಬ ಮಾತು ಕನಿಷ್ಠವೆಂದರೂ ಒಂದು ಡಜನ್ ಬಾರಿ ಕೇಳಿಬಂದಿದೆ. ಪ್ರತಿ ಸಾರಿ "ಈ ಬಾರಿ ರಾಜೀನಾಮೆ ಗ್ಯಾರಂಟಿ" ಎಂದೇ ಯಡಿ ವಿರೋಧಿಗಳು ಹೇಳಿದ್ದುಂಟು. ಆದರೆ ರಾಜಕೀಯ ಪಂಡಿತರ ಭವಿಷ್ಯ ಮತ್ತು ತನ್ನ ವಿರೋಧಿಗಳ ರಾಜಕೀಯ ಲೆಕ್ಕಾಚಾರವನ್ನು ಪ್ರತಿ ಬಾರಿ ಸುಳ್ಳು ಮಾಡುತ್ತಾ ಬಂದಿದ್ದಾರೆ ಯಡ್ಡಿ.

ಆದರೂ ಬಜೆಟ್ ಮಂಡನೆ ನಂತರ ರಾಜ್ಯ ಬಿಜೆಪಿಯಲ್ಲಿ ಸಾಕಷ್ಟು ಬದಲಾವಣೆಗಳು ಆಗುವ ಸೂಚನೆ ಹಿಂದಿಗಿಂತಲೂ ಈಗ ದಟ್ಟವಾಗಿವೆ. ಇದರ ಮುನ್ಸೂಚನೆಯೆಂಬಂತೆ ರಾಷ್ಟ್ರ ಮಟ್ಟದಲ್ಲಿ ನಾಯಕರಾಗಿರುವ ಶತ್ರುಘ್ನ ಸಿನ್ಹ ಮತ್ತು ವೈದ್ಯ "ಭ್ರಷ್ಟಾಚಾರದ ಆರೋಪ ಹೊತ್ತಿರುವ ಯಡಿಯೂರಪ್ಪ ಪಕ್ಷದ ಹಿತದೃಷ್ಟಿಯಿಂದ ಕೂಡಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು" ಎಂದು ದೆಹಲಿಯಲ್ಲಿ ಅರ್ಭಟಿಸಿದ್ದಾರೆ. ಇದೇ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ನಾಯಕ ಅದ್ವಾಣಿ "ಸಾರ್ವಜನಿಕರಲ್ಲಿ ನಂಬಿಕೆ ಬರಬೇಕಾದರೆ ನೀವು ಕೂಡಲೇ ನಿಮ್ಮ ಆಸ್ತಿ ವಿವರಗಳನ್ನು ಘೋಷಿಸಬೇಕು" ಎಂದು ಯಡ್ಡಿಗೆ ಆದೇಶಿಸಿದ್ದರಿಂದ ಯಡ್ಡಿ ತನ್ನ ಆಸ್ತಿ ವಿವರಗಳನ್ನು ಘೋಷಿಸಿದ್ದಾರೆ.



ಇವೆಲ್ಲಕ್ಕಿಂತಲೂ ಕುತೂಹಲಕಾರಿ ವಿಷಯವೆಂದರೆ ಯಡಿಯೂರಪ್ಪ ಯಾಕೆ ಕೇಂದ್ರ ಸರ್ಕಾರದ ಬಜೆಟ್ ಮಂಡನೆಗಿಂತ ಮೊದಲೇ ತರಾತುರಿಯಲ್ಲಿ ರಾಜ್ಯ ಬಜೆಟ್‌ನ್ನು ಮಂಡಿಸುತ್ತಿದ್ದಾರೆ ಎಂಬುದು. ಇದರ ಬಗ್ಗೆ ಪಕ್ಷದ ನಾಯಕರು ಹೇಳುತ್ತಿರುವ ಕಥೆಯೇ ಇವು ಯಡ್ಡಿಯ ಅಂತಿಮ ದಿನಗಳಿರಬಹುದು ಎಂಬ ಗುಮಾನಿಯನ್ನು ಹೆಚ್ಚಿಸುತ್ತಿದೆ. ಕಳೆದ ನವೆಂಬರ್ ತಿಂಗಳಲ್ಲಿ ಭಿನ್ನಮತೀಯ ಚಟುವಟಿಕೆಗಳು ಪರಾಕಾಷ್ಠೆ ತಲುಪಿದಾಗ ಮತ್ತು ಹೈಕಮಾಂಡ್ ಯಡ್ಡಿಗೆ ರಾಜೀನಾಮೆ ನೀಡುವಂತೆ ಆದೇಶಿಸಿದಾಗ ಯಡ್ಡಿ ಪಂಚಾಯತಿ ಚುನಾವಣೆ ಮತ್ತು ಬಜೆಟ್ ನೆಪದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದರು. ಆಗಿನ ಒಪ್ಪಂದದಂತೆ ಸತತ ಮೂರನೇ ವರ್ಷ ಯಡ್ಡಿಗೆ ಬಜೆಟ್ ಮಂಡಿಸಲು ಅವಕಾಶ ಮಾಡಿಕೊಟ್ಟು ಆನಂತರ ಅವರ ಸ್ಥಾನಕ್ಕೆ ಬೇರೊಬ್ಬ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ ಎಂಬ ಮಾತು ಈಗ ಕೇಳಿಬರುತ್ತಿದೆ.


ಖಂಡಿತವಾಗಿಯೂ ಯಡ್ಡಿ ಮಂಡಿಸಲಿರುವ ಈ ಬಾರಿಯ ಬಜೆಟ್‌ನಲ್ಲಿ ಹಲವಾರು 'ಜನಪರ' ಯೋಜನೆಗಳಿರುತ್ತವೆ. ಅಂದರೆ ಯಡ್ಡಿ ಅಂತಹ ಪೊಳ್ಳು ಯೋಜನೆಗಳನ್ನು ಘೋಷಿಸುವ ಮೂಲಕ ತಾನು ಜನಸಾಮಾನ್ಯರ ಪರ ಇರುವ ನಾಯಕನೆಂಬ ಇಮೇಜನ್ನು ಪಡೆಯಲು ಕಸರತ್ತು ಮಾಡಲಿದ್ದಾರೆ. ಆದರೆ ಆ ಯೋಜನೆಗಳೆಲ್ಲವೂ ಬಜೆಟ್ ಪೇಪರ್ ಮೇಲಿರುತ್ತವೆಯೇ ಹೊರತು ಅವು ಕಾರ್ಯರೂಪಕ್ಕೆ ಬರುವುದಿಲ್ಲ.

ಇದೇ ಹೊತ್ತಿಗೆ ಕೇಂದ್ರ ಸರ್ಕಾರ ಕೂಡ ಇದೇ ತರಹದ 'ಜನಪ್ರಿಯ' ಬಜೆಟ್ ಮಂಡನೆಗಾಗಿ ತಯಾರಿ ನಡೆಸುತ್ತಿದೆ. ಈ ಕಾರಣಕ್ಕಾಗಿಯೇ ಅವರಿಗಿಂತ ಮೊದಲೇ ತಾನು ಬಜೆಟ್ ಮಂಡಿಸಿ, ಆನಂತರ ಕೇಂದ್ರ ಸರ್ಕಾರದವರು ತನ್ನ ಬಜೆಟ್‌ನ್ನೇ ಕಾಪಿ ಹೊಡೆದಿದ್ದಾರೆ ಎಂದು ಹೇಳಿಕೊಂಡು ತಿರುಗಾಡಲು ಯಡ್ಡಿ ರಾಜ್ಯ ಬಜೆಟ್‌ನ್ನು ಕೇಂದ್ರ ಬಡ್ಜೆಟ್‌ಗಿಂತಲೂ ಮೊದಲೇ ಮಂಡಿಸುತ್ತಿದ್ದಾರೆ.

ಈಗ ಉದ್ಭವವಾಗಿರುವ ಪ್ರಶ್ನೆ ಯಾವುದೆಂದರೆ: ಯಡ್ಡಿ ಜಾಗಕ್ಕೆ ಯಾರು ಬರಲಿದ್ದಾರೆ?

ಒಂದು ಮೂಲದ ಪ್ರಕಾರ ಬಿಜೆಪಿಯಲ್ಲಿ ಅತ್ಯಂತ ಸಾಧು ಪ್ರಾಣಿ ಎಂದೆನಿಸಿಕೊಂಡಿರುವ ವಿ.ಎಸ್.ಆಚಾರ್ಯಗೆ ಯಡ್ಡಿಯ ಬೆಂಬಲವಿದೆಯಂತೆ. ಇದಕ್ಕೆ ಕಾರಣ ಈ ಹಿಂದೆ ಹೇಗೆ ಆಚಾರ್ಯರನ್ನು ಡಮ್ಮಿ ಗೃಹ ಮುಖ್ಯಮಂತ್ರಿಯಾಗಿಸಿಕೊಂಡು ಎಲ್ಲ ಅಧಿಕಾರವನ್ನು ಯಡ್ಡಿಯೇ ಚಲಾಯಿಸುತ್ತಿದ್ದರೋ ಹಾಗೆಯೇ ಆಚಾರ್ಯ ಮುಖ್ಯಮಂತ್ರಿಯಾದ ಮೇಲೂ. ತಾನೇ ಅಧಿಕಾರ ಚಲಾಯಿಸಬಹುದೆಂಬ ಯಡ್ಡಿಯ ಲೆಕ್ಕಾಚಾರ.

ಆದರೆ ಲಿಂಗಾಯತ ಯಡ್ಡಿಯನ್ನು ತೆಗೆದು ಆತನ ಸ್ಥಾನಕ್ಕೆ ಬ್ರಾಹ್ಮಣ ಆಚಾರಿಯನ್ನು ಕರೆತಂದರೆ ರಾಜ್ಯದ ಲಿಂಗಾಯತರಿಗೆ ಬಿಜೆಪಿ ಬಗ್ಗೆ ಕೋಪ ಬರುತ್ತದೆ ಎಂಬ ಆತಂಕ ಬಿಜೆಪಿಯ ಹೈಕಮಾಂಡಿಗಿದೆ. ಆದ್ದರಿಂದ ಹಲವರು ಯಡ್ಡಿ ಜಾಗಕ್ಕೆ ಮತ್ತೊರ್ವ ಲಿಂಗಾಯತನಾದ ಚೆಡ್ಡಿ ಜಗದೀಶ್ ಶೆಟ್ಟರ್‌ರನ್ನೇ ತರುವ ಸಾಧ್ಯತೆಯೂ ಇದೆಯಂತೆ.



ಇದಕ್ಕೆ ಸರಿಯಾಗಿ, ಸುತ್ತೂರು ಮಠದ ದೇಶಿಕೇಂದ್ರ ಸ್ವಾಮಿಗಳು "ಯಾವ ಕಾರಣಕ್ಕೂ ಯಡ್ಡಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆಯಕೂಡದು. ಆದರೆ ಅವರನ್ನು ಪದಚ್ಯುತಿಗೊಳಿಸುವುದು ಅನಿವಾರ್ಯವಾದರೆ ಅವರ ಜಾಗಕ್ಕೆ ಶೆಟ್ಟರ್ ಅವರನ್ನು ತಂದರೆ ನಮ್ಮದೇನೂ ಅಭ್ಯಂತರವಿಲ್ಲ" ಎಂದು ಬಿಜೆಪಿಯ ದೆಹಲಿ ನಾಯಕರಿಗೆ ತಿಳಿಸಿದ್ದಾರಂತೆ. ಅವರಂತೆ ಇತರೆ ಚೆಡ್ಡಿ ಸ್ವಾಮಿಗಳೂ ಇದೇ ಅಭಿಪ್ರಾಯವನ್ನು ತಾಳಿದ್ದಾರಂತೆ.


ಆದರೆ ತನ್ನ ಜಾಗಕ್ಕೆ ಶೆಟ್ಟರ್ ಬರುವ ಸಾಧ್ಯತೆಯನ್ನು ಕೇಳಿಯೋ ಯಡ್ಡಿ ಕೆಂಡಾಮಂಡಲವಾಗಿದ್ದಾರೆ. ಯಾವುದೇ ಕಾರಣಕ್ಕೂ ಶೆಟ್ಟರನ್ನು ಮುಖ್ಯಮಂತ್ರಿ ಮಾಡಲೇ ಬಾರದು ಎಂದು ಯಡ್ಡಿ ಅರ್ಭಟಿಸಿದ್ದಾರೆ. ತಾನು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಬೇಕಾದರೆ ತಾನು ಸೂಚಿಸಿದವರನ್ನೇ ಮುಖ್ಯಮಂತ್ರಿ ಮಾಡಬೇಕು ಎಂಬುದು ಯಡ್ಡಿ ಹಠ. ಈ ಮಧ್ಯೆ ಶೆಟ್ಟರ್ ಮತ್ತು ಆಚಾರ್ಯ ಬದಲಿಗೆ ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡಿದರೂ ಪರವಾಗಿಲ್ಲ ಎಂದು ಯಡ್ಡಿ ಹೇಳಿದ್ದಾರಂತೆ.

ಇಷ್ಟೆಲ್ಲ ಆದರೂ ತಾನೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕೆಂಬ ಯಡ್ಡಿಯ ಹಟ ಇನ್ನೂ ಬತ್ತಿಲ್ಲ. "ನಾನು ಸೂಚಿಸಿದ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡದಿದ್ದರೆ ನಾನು ಅಸೆಂಬ್ಲಿಯನ್ನು ವಿಸರ್ಜಿಸಿ ಚುನಾವಣೆ ಘೋಷಿಸುತ್ತೇನೆ" ಎಂದೂ ಯಡ್ಡಿ ಹೈಕಮಾಂಡ್‌ಗೆ ಹೆದರಿಸಿದ್ದಾರೆ ಎಂಬ ಸುದ್ದಿ ಬಿಜೆಪಿ ಪಾಳೆಯದಿಂದಲೇ ಕೇಳಿಬರುತ್ತಿದೆ. ಅಷ್ಟೇ ಅಲ್ಲದೆ "ಈ ಬಾರಿಯ ಚುನಾವಣೆಯಲ್ಲಿ ಅತ್ಯಂತ ಹೆಚ್ಚು ಸೀಟುಗಳನ್ನು ಗೆದ್ದು ಭದ್ರವಾದ ಸರ್ಕಾರವನ್ನು ತರುತ್ತೇನೆ. ಆ ಮೂಲಕ ಎಲ್ಲಾ ವಿವಾದಗಳಿಗೆ ಇತಿಶ್ರೀ ಹಾಡುತ್ತೇನೆ" ಎಂದೂ ಯಡ್ಡಿ ದೆಹಲಿ ನಾಯಕರ ಮುಂದೆ ಕೊಚ್ಚಿಕೊಂಡಿದ್ದಾರಂತೆ.

ಇದನ್ನು . ಕೇಳಿ ಯಾವ ಮೂಲೆಯಿಂದ ನಗಬೇಕೆಂದು ತೋಚದೆ ದೆಹಲಿ ನಾಯಕರು "ನಿನ್ನ ಕಾಗಕ್ಕ ಗುಬ್ಬಕ್ಕನ ಕತೆ ನಿಲ್ಲಿಸು" ಎಂದಿದ್ದಾರಂತೆ. ಆದರೆ ದೆಹಲಿ ನಾಯಕರಿಗೂ ಮಧ್ಯಂತರ ಚುನಾವಣೆ ಬೇಡವಾಗಿದೆ. ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ಬಂದ ಮೊದಲ ಬಿಜೆಪಿ ಸರ್ಕಾರವನ್ನು ಯಾವುದೇ ಕಾರಣಕ್ಕೂ ಕೈ ಬಿಡಲು ಹೈಕಮಾಂಡ್ ಸಿದ್ಧವಿಲ್ಲ. ಆದರೆ ಯಡ್ಡಿ ಬಿಜೆಪಿಯ ಪಾಲಿಗೆ ಅತ್ತ ನುಂಗಲೂ ಆಗದ, ಇತ್ತ ಉಗುಳಲೂ ಆಗದ ಬಿಸಿ ತುಪ್ಪದಂತಾಗಿ ಪಕ್ಷಕ್ಕೆ ಮತ್ತು ಅದರ ನಾಯಕರಿಗೆ ದೊಡ್ಡ ಸವಾಲಾಗಿದ್ದಾರೆ.

ಅದೇನೇ ಆದರೂ, ಬರುವ ಮಾರ್ಚ್ ತಿಂಗಳಲ್ಲಿ ರಾಜ್ಯ ಬಿಜೆಪಿ ನಾಯಕತ್ವದಲ್ಲಿ ಬದಲಾವಣೆಯಾಗುತ್ತದೆ. ಜೊತೆಗೆ ಆಮೂಲಾಗ್ರವಾಗಿ ಸಂಪುಟ ಪುನಾರಚನೆ ಕಸರತ್ತೂ ನಡೆಯಲಿದೆ. ಆಗ ಅದ್ಯಾವ ಮೂಲೆಯಿಂದ ಮತ್ತೆ ಭಿನ್ನಮತ ಸ್ಫೋಟಿಸಲಿದೆಯೋ, ಯಾವ ನಾಯಕ ಬಂಡಾಯ ಏಳುವನೋ ಎಂಬುದೆಲ್ಲ ಯಾರ ಎಣಿಕೆಗೂ ಸಿಗದ ಲೆಕ್ಕಾಚಾರವಾಗಿದೆ.

ಹಾಗೆಯೇ ಯಡ್ಡಿ ಇನ್ನೆಷ್ಟು ದಿನ ಮುಖ್ಯಮಂತ್ರಿಯಾಗಿ ಉಳಿಯಲಿದ್ದಾರೆ ಎಂಬುದು ಈಗ ಬಿಜೆಪಿ ನಾಯಕರಿಗೂ ಬಿಡಿಸಲಾಗದ ಒಗಟಾಗಿದೆ?!




ಕಳೆದ ಬಾರಿಯ ಸಂಚಿಕೆಯಲ್ಲಿ 77 ನೇ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದ ವರದಿಯಲ್ಲಿ ನನ್ನ ಬಗ್ಗೆ ಮಾಡಿದ ಆರೋಪಗಳಿಗೆ ನನ್ನ ಪ್ರತಿಕ್ರಿಯೆ....

ವರದಿಯಲ್ಲಿ ಉಲ್ಲೇಖಿಸಿದಂತೆ ಆರೆಸ್ಸೆಸ್‌ಗೂ ನನಗೂ ಸಂಬಂಧವಿಲ್ಲ. ನಾನು. ಪಿ. ಲಂಕೇಶ್‌ರಿಂದ ಪ್ರಭಾವಿತನಾಗಿ ಅವರ ಗರಡಿಯಲ್ಲೇ ಬೆಳೆದವನು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲೇ ಮುಂದುವರೆಯುತ್ತಿದ್ದೇನೆ. ಇನ್ನುಳಿದಂತೆ ಸಮ್ಮೇಳನದ ವಿಚಾರಗೋಷ್ಠಿಗಳಿಗೆ ವಿಷಯ ಆಯ್ಕೆ ಮಾಡುವಲ್ಲೂ ನನ್ನ ಪಾತ್ರವಿರಲಿಲ್ಲ.

ಇನ್ನೊಂದು ಮುಖ್ಯ ವಿಚಾರ, ಕವಿಗೋಷ್ಠಿಗಳಲ್ಲಿ ಪಾಲ್ಗೊಳ್ಳುವ ಕವಿಗಳಿಗೆ ಕೇವಲ 150 ರೂಪಾಯಿ ಕೊಡಲಾಗುತ್ತದೆಂದು ಬರೆಯಲಾಗಿದೆ. ಆದರೆ ಈ ಬಾರಿ ನನ್ನ ಸಲಹೆಯನ್ನಾಧರಿಸಿಯೇ ಪ್ರತಿ ಕವಿಗೂ 750 ರೂಪಾಯಿ ಕೊಡಲಾಗಿದೆ.

ಪುಂಡಲೀಕ ಹಾಲಂಬಿ
ಕಸಾಪ ಖಜಾಂಚಿ



ನಿಲ್ಲದ ಮೀಡಿಯಾ ವಲಸೆ

ಯಾರ ಸಂಬಳ ಎಷ್ಟು?

ಪತ್ರಕರ್ತರ ಪಕ್ಷಾಂತರಗಳು ಅನೇಕ ಸಾರಿ ಸಂಬಳ+ಭತ್ಯೆಯನ್ನೆ ಆಧರಿಸಿ ನಡೆಯುತ್ತಿರುತ್ತದೆ. ಕೆಲವೊಮ್ಮೆ ನಂಬಿಕೆ, ಸಿದ್ಧಾಂತಗಳ ಪ್ರೇರಣೆಯೂ ಇರುತ್ತದೆನ್ನಿ.

ಸಂಬಳ ಎಷ್ಟು ಎಂದು ಕುತೂಹಲಕ್ಕೆ ಚೆಕ್ ಮಾಡಿ ನೋಡಿದರೆ ದೊಡ್ಡ ಮೊತ್ತ ಎನ್ನಬಹುದಾದ ಸಂಬಳ ಅನೇಕರಿಗಿದೆ. ಉದಯವಾಣಿಯ ಹಾಲಿ ಸಂಪಾದಕ ತಿಮ್ಮಪ್ಪ ಭಟ್ಟರಿಗೆ ಮಾಲೀಕ ಪೈಗಳು ಮಾಸಿಕ 65,000ರೂಪಾಯಿ ಕೊಡುತ್ತಿದ್ದಾರೆ. ಆದರೆ ಹೊಸ ಸಂಪಾದಕರಾಗಿ ಬರುತ್ತಿರುವ ರವಿ ಹೆಗಡೆಗೂ ಅಷ್ಟೇ ಸಂಬಳನಾ? ಏನು ಗೊತ್ತಾಗಿಲ್ಲ.

ಅದೇ ರೀತಿ ಕನ್ನಡ ಪ್ರಭದಲ್ಲಿದ್ದ ಶಿವ ಸುಬ್ರಮಣ್ಯಗೆ ತೊಂಬತ್ತೆಂಟು ಸಾವಿರ ಸಂಬಳವಿತ್ತು. ವಿಜಯ ಕರ್ನಾಟಕದಲ್ಲಿದ್ದಾಗ ವಿ.ಭಟ್ಟರು ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿ ದುಡಿಯುತ್ತಿದ್ದರು (ಸಂಬಳದ ಬಾಬ್ತು). ಈಗ ಕನ್ನಡ ಪ್ರಭ ಅಷ್ಟು ಕೊಟ್ಟಿರಲಾರದು. ಬಹುತೇಕ ಒಂದರಿಂದ ಒಂದೂಕಾಲು ಲಕ್ಷಕ್ಕೆ ಈ ಸಂಬಳ ಫಿಕ್ಸ್ ಆಗಿರುವ ಸಾಧ್ಯತೆಗಳಿವೆ.

ಇನ್ನು ಸುವರ್ಣ ಟಿವಿಯ ರಂಗ ಒಂದೂವರೆ, ಈಗ ಸುವರ್ಣದಿಂದ ಹೊರಬಂದಿರುವ ರಂಗನಾಥ ಭಾರದ್ವಾಜ್ ಎಂಬತ್ತು ಸಾವಿರ ರೂ ಪಡೆಯುತ್ತಿದ್ದರು. ಉಳಿದಂತೆ ಟಿವಿ ಚಾನಲ್ಲುಗಳಲ್ಲಿ 40 ರಿಂದ 60 ಸಾವಿರ ಸಂಬಳ ಪಡೆಯುತ್ತಿರುವ ಡಜನ್‌ಗಟ್ಟಲೆ ಜನ ಕನ್ನಡ ಮೀಡಿಯಾಗಳಲ್ಲಿದ್ದಾರೆ.

ಎಲ್ಲಾ ಪತ್ರಕರ್ತರೂ ಬಡವರಲ್ಲ ಎಂಬುದೇ ಇದರ ತಾತ್ಪರ್ಯ.



ಈ ಸಮಯ ಆನಂದಮಯ...! ಸಂಕಟಮಯ...!

ವಲಸೆ ಸಮಸ್ಯೆಗೆ ಸಿಕ್ಕಿಹಾಕಿಕೊಂಡಿರದಿದ್ದರೂ ಕನ್ನಡದ ಹೊಸ ನ್ಯೂಸ್ ಚಾನಲ್ ಸಮಯ ಟಿವಿಯೊಳಗೆ ಬೇರೆಯದೇ ವಿದ್ಯಮಾನಗಳು ನಡೆದಿವೆ.

ಸಮಯದ ಕಾರ್ಯಕ್ರಮಗಳನ್ನೇ ಆಧರಿಸಿ ಹೇಳಬೇಕೆಂದರೆ ಕೆಲವು ಚೆಂದನೆಯ ಪ್ರೋಗ್ರಾಂಗಳು ಅವರಲ್ಲಿವೆ. ನಮ್ಮ ಕಲೆ ನಮ್ಮ ಬದುಕು, ಗೇಮ್ ಪ್ಲಾನ್, ಕೃಷಿ ಸಮಯ, ಸುದ್ದಿ ವಿಶ್ಲೇಷಣೆಗಳ ಒಳನೋಟ, ವರ್ಲ್ಡ್‌ಕಪ್ ಕ್ರಿಕೆಟ್, ನಾಡ ಕಣ್ಮಣಿಗಳು ಇವೆಲ್ಲಾ ಸಮಯ ಟಿವಿಯ ಉತ್ತಮ ಕಾರ್ಯಕ್ರಮಗಳಾಗಿವೆ.

ನಾಗೇಶ ಮಾಡುತ್ತಿರುವ 'ಕೃಷಿ ಸಮಯ' ದಿ ಬೆಸ್ಟ್ ಪ್ರೋಗ್ರಾಂ ಎನಿಸಿಕೊಂಡಿದ್ದರೆ, ಕವಿತಾ ಸಾಗರರ 'ನಮ್ಮ ಕಲೆ', ಸನತ ರೈ ಹಾಗೂ ಸುನೀಲ್‌ರವರ ಗೇಮ್ ಪ್ಲಾನ್ ಹಾಗೂ ವರ್ಲ್ಡ್‌ಕಪ್‌ಗಳು ಪಾಪ್ಯುಲರ್ ಆಗಿವೆ. ಅರವಿಂದ ಹಾಗೂ ಪದ್ಮ ಶಿವಮೊಗ್ಗ ನಡೆಸಿಕೊಡುವ 'ನಾಡ ಕಣ್ಮಣಿಗಳು' ಹಾಗೂ 'ನಮ್ಮ ಭೂಮಿ' ಪಾಪ್ಯುಲರ್ ಆಗಿದ್ದರೂ ಅದೇಕೊ ಈಗ ನಿಂತಿದೆ.

ನ್ಯೂಸ್‌ಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ಸಮಯ ಟಿವಿಯ ಸುದ್ದಿಯ ವೇಗ-ನಿಖರತೆ ಹಾಗೂ ವಿಶ್ಲೇಷಣೆಗಳು ಫ್ರೆಶ್ ಎನಿಸುವಂತಿರುತ್ತವೆ. ಹಾಗೆ ನೋಡಿದರೆ ಶುರುವಾಗಿ ಕೆಲವೇ ಕೆಲವು ತಿಂಗಳಾಗಿದ್ದರೂ TRP (TV Rating Point) ಹಾಗೂ GRP (Gross Rating Point) ನಲ್ಲಿ ಸಮಯ ಈಗಾಗಲೇ ಮೂರನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿರುವ TV9 ಗೆ TRP-GRP ರೇಟ್ 202 ಇದ್ದರೆ ಸುವರ್ಣನ್ಯೂಸ್‌ಗೆ ಅದು 80 ಇದೆ. ಸಮಯ ಟಿವಿಗೆ 41 ಇದೆ. ಇದು ನಿಜಕ್ಕೂ ಸಮಯದ ಪ್ಲಸ್ ಪಾಯಿಂಟ್. ಆದರೆ ಸಮಯಕ್ಕೆ ತನ್ನದೇ ಆದ ಸಮಸ್ಯೆಗಳೂ ಕಾಡುತ್ತಿವೆ. ಹೆಚ್ಚುವರಿ ಸಿಬ್ಬಂದಿ ಸಮಯದ ಈಗಿನ ಮುಖ್ಯ ಸಮಸ್ಯೆ. ಶಶಿಧರ ಭಟ್ ಬಂದ ನಂತರ ಅನಗತ್ಯ ಸಿಬ್ಬಂದಿಯ ಹೊರೆ ತಪ್ಪಿಸುವ ಕಾರ್ಯಾಚರಣೆ ಆರಂಭವಾಗಿದ್ದು ಫೆಬ್ರವರಿ ಅಂತ್ಯದೊಳಗಾಗಿ ಡಜನ್‌ಗಟ್ಟಲೆ ಜನರ ಕೆಲಸ ಹೋಗುವ ಸುದ್ದಿ ಕೇಳಿಬರುತ್ತಿದೆ.

[illegible] ಶುರುವಾದಾಗ [illegible] 450 ಮಂದಿ [illegible] ಸಂಖ್ಯೆ [illegible] ಹಾಗೂ ಅನೇಕ ಜಿಲ್ಲಾ ರಿಪೋರ್ಟರ್‌ಗಳು ಹಾಗೂ ಕ್ಯಾಮರಾಮನ್‌ಗಳ ಪೈಕಿ ಹೆಚ್ಚುವರಿಯಾಗಿವವರು ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಇದೆಲ್ಲಕ್ಕಿಂತಾ ಮುಖ್ಯ ಸುದ್ದಿ ಏನೆಂದರೆ ಸಮಯ ಟಿವಿ ಈಗ ಮಾರಾಟಕ್ಕಿದೆ. 60 ಕೋಟಿ ರೂಪಾಯಿಯ ಆಫರ್ ಬಂದರೆ ತಮ್ಮ ಚಾನಲ್ ಮಾರಿಬಿಡಲು ಜಾರಕಿಹೊಳಿ ಬ್ರದರ್ಸ್ ರೆಡಿಯಾಗಿದ್ದಾರಂತೆ. ವಿಜಯ ಸಂಕೇಶ್ವರ, ಮುರುಗೇಶ ನಿರಾಣಿ ಹಾಗೂ ನ್ಯಾಷನಲ್ [illegible] ಒಂದು ಸಮಯ [illegible] ಖರೀದಿಸಲು ಆಸಕ್ತಿ [illegible] ಮಾತುಕತೆ ಈಗಲೂ ನಡೆಯುತ್ತಿದೆ.

• ಪಾರ್ವತೀಶ
bparvateesha@gmail.com



ಮೋದಿಯೊಂದಿಗೆ ವಿಶ್ವೇಶ್ವರ ಭಟ್...

'ನೋಡ್ತಾ ಇರಿ, ನಾವೀಗ ಬಸ್(VRL) ಇಳಿದಿರೋದೇ ಏರೋಪ್ಲೇನ್ ಹತ್ತಲು, ಸ್ವಲ್ಪ ದಿನ ಕಾಯಿರಿ, ಆಮೇಲೆ ನಾವೇನ್ ಮಾಡ್ತೀವೀಂತ ನೋಡುವಿರಂತೆ'


- ಹೀಗಂತ 2010ರ ಡಿಸೆಂಬರ್ ಎರಡನೇ ವಾರದಲ್ಲಿ ವಿಭಟ್ಟರ ಟೀಂನ ಪ್ರತಾಪ ಸಿಮ್ಮ, ತ್ಯಾಗರಾಜು ಹೇಳಿಕೊಂಡಿದ್ದರು. ಆದರೆ ಅವರೀಗ ಅತ್ತ ಏರೋಪ್ಲೇನೂ ಅಲ್ಲದ, ಇತ್ತ ಹೆಲಿಕಾಪ್ಟರೂ ಆಗಿರದ ವಿಜಯ ಕರ್ನಾಟಕಕ್ಕಿಂತ ಚಿಕ್ಕ ಸೈಜಿನ ಕನ್ನಡಪ್ರಭ ಗಾಡಿ ಹತ್ತುತ್ತಿದ್ದಾರೆ.

ವಿಜಯ ಕರ್ನಾಟಕದ ಮಾಜಿ ಸಂಪಾದಕ ವಿಶ್ವೇಶ್ವರ ಭಟ್ ಕನ್ನಡಪ್ರಭ ಸೇರಿಕೊಂಡಿದ್ದಾರೆ. ಅವರ ಹಿಂದೆಯೇ, ಭ್ರಷ್ಟಾಚಾರ ನಡೆಸಿದ ಅನುಮಾನದ ಆರೋಪ ಹೊತ್ತ ಕೆಲವು ಮಾಜಿ ವಿಕ ಪತ್ರಕರ್ತರೂ ಕನ್ನಡಪ್ರಭ ಸೇರಲಿರುವುದು ಬಹುತೇಕ ಖಚಿತವಾಗಿದೆ.

ಇದೆಲ್ಲದರ ಬೆನ್ನ ಹಿಂದೆಯೇ ಕನ್ನಡ ಮೀಡಿಯಾ ಜಗತ್ತಿನಲ್ಲಿ ಇನ್ನೊಂದು ಸುತ್ತಿನ ವಲಸೆ ಪ್ರಕ್ರಿಯೆ ಶುರುವಾಗಿದೆ. ಸುವರ್ಣ ಟಿವಿ, ಉದಯವಾಣಿ, ಕನ್ನಡಪ್ರಭಗಳಿಂದ ಒಂದಷ್ಟು ಮಂದಿ ಅಲ್ಲಿಂದ ಇಲ್ಲಿಗೆ, ಇರುವಲ್ಲಿಂದ ಮತ್ತೊಂದೆಡೆಗೆ ಹೊರಡಲು ತಯಾರಾಗುತ್ತಿದ್ದಾರೆ. ಕರ್ನಾಟಕದಲ್ಲೀಗ ರಾಜಕಾರಣಿಗಳಿಗಿಂತ ಪತ್ರಕರ್ತರ ಪಕ್ಷಾಂತರಗಳೇ ಜಾಸ್ತಿ ನಡೆಯುತ್ತಿರುವುದು ಎದ್ದು ಕಾಣುತ್ತಿದೆ.

ವಿಭಟ್ಟರಿಗೆ ಅಧ್ವಾಣಿ-ಮೋದಿ ಶಿಫಾರಸ್ಸು

ಕನ್ನಡಪ್ರಭಗೆ ವಿಭಟ್ಟರ ಎಂಟ್ರಿ ಅಷ್ಟು ಸಲೀಸಾಗೇನೂ ಆಗಿಲ್ಲ. ವಿಭಟ್ಟರ ರಾಜಕೀಯ ಗೆಣೆಕಾರ ಸಂಸದ ಅನಂತ್‌ಕುಮಾರ್ ಮೂಲಕ ಬಿಜೆಪಿಯ ನಾಯಕರಾದ ನರೇಂದ್ರ ಮೋದಿ ಹಾಗೂ ಅಧ್ವಾಣಿಯವರಿಗೆ. ಹೇಳಿಸಿ, ನಂತರ ಅವರು ಎಕ್ಸ್‌ಪ್ರೆಸ್ ಮಾಲೀಕ ಸೊಂಥಾಲಿಯಾ ಹಾಗೂ ಪಾಲುದಾರ ರಾಜೀವ್ ಚಂದ್ರಶೇಖರ್‌ಗೆ ಶಿಫಾರಸ್ಸು ಮಾಡಿದ ಮೇಲೆ ಈ ಕೆಲಸ ಕೈಗೂಡಿತೆನ್ನಲಾಗಿದೆ. ಇವೆಲ್ಲ ಒಳಗಿಂದೊಳಗೇ ನಡೆಯುತ್ತಿದ್ದಾಗ ಕನ್ನಡಪ್ರಭದ ಸಂಪಾದಕ ಶಿವಸುಬ್ರಮಣ್ಯ ಮಾತ್ರ ನಿರಾಳವಾಗೇ ಇದ್ದರು. ಅವರಿಗೆ ತಮ್ಮ ವಿರುದ್ಧ ನಡೆಯುತ್ತಿದ್ದ ಒಳಸಂಚಿನ ಸುಳಿವೇ ಸಿಕ್ಕಿರಲಿಲ್ಲ.



ಶಿವಸುಬ್ರಹ್ಮಣ್ಯ

ಆಕಸ್ಮಾತ್ ಗೊತ್ತಾಗಿದ್ದರೂ ಶಿವ ಅದನ್ನು ಕೇರ್ ಮಾಡದೆ, ಇರುವಷ್ಟು ದಿನ ತಮ್ಮ ಕೆಲಸ ಮಾಡಿ ಈಗಿನಂತೆಯೇ ಬಿಟ್ಟುಹೋಗಿರುತ್ತಿದ್ದರೇ ವಿನಃ ತಮ್ಮ ಸ್ಥಾನ ಉಳಿಸಿಕೊಳ್ಳಲು ಲಾಬಿ ನಡೆಸುತ್ತಿರಲಿಲ್ಲ ಬಿಡಿ. ಕಳೆದ ತಿಂಗಳ ಜನವರಿ 20ರಂದು ಸಹ ಎಕ್ಸ್‌ಪ್ರೆಸ್ ಮಾಲೀಕನ ಕರೆಯ ಮೇರೆಗೆ ಚೆನ್ನೈಗೆ ಹೋಗಿದ್ದ ಶಿವ ಹಿಂತಿರುಗಿ ಬಂದಾಗ 'ವಿ.ಭಟ್ಟರ ಆಗಮನದ ಸಾಧ್ಯತೆಯ' ಬಗ್ಗೆ ಕೇಳಿದವರಿಗೆ 'ಅದೆಲ್ಲ ಇಲ್ಲ' ಎಂತಲೇ ಹೇಳಿದ್ದರು. ಆದರೂ 'ಲಂಕೇಶ್' ಈಗೊಂದೆರಡು ವಾರದ ಹಿಂದೆಯೇ 'ವಿ.ಭಟ್ಟರ ಆಗಮನ'ದ ಬಗ್ಗೆ ಹೇಳಿತ್ತು.

ಅದೀಗ ನಿಜವಾಗಿದೆ.

ವಿಭಟ್ಟರು ಕನ್ನಡಪ್ರಭಗೆ ಫೆಬ್ರವರಿ ಏಳರಂದು ಕಾಲಿಟ್ಟ ದಿನ ಮಾಲೀಕ ಸೊಂಥಾಲಿಯಾ ಶಿವ ಸುಬ್ರಹ್ಮಣ್ಯರನ್ನು ಕರೆದು ಮಾತನಾಡಿದ್ದಾರೆ. ವಿಭಟ್ಟರು ಬಂದ ಸುದ್ದಿ ಕೇಳಿ ಅವತ್ತು ತನ್ನ ಚೇಂಬರ್‌ಗೆ ಹೋಗದೆ ಪಾರ್ಕಿಂಗ್ ಲಾಟ್‌ನಲ್ಲೇ ತನ್ನ ಕಾರಿನೊಳಗೆ ಕುಳಿತು ಮುಂದೇನೆಂದು ಯೋಚಿಸುತ್ತಿದ್ದ ಶಿವರನ್ನು ಸಿಬ್ಬಂದಿ ಗಮನಿಸಿ ಒತ್ತಾಯದಿಂದ ಸರ್ಕ್ಯುಲೇಷನ್ ವಿಭಾಗಕ್ಕೆ ಕರೆದೊಯ್ದು ಕೂರಿಸಿಕೊಂಡಿದ್ದರು. ನಂತರ ಮೀಟಿಂಗ್ ಶುರುವಾದಾಗ ನಡೆದ ಮಾತುಕತೆಗಳು ಇಂಟರೆಸ್ಟಿಂಗ್ ಆಗಿವೆ.

ಸೊಂಥಾಲಿಯಾ ಮಾತನಾಡಿ "ವಿಶ್ವೇಶ್ವರ ಭಟ್ ಎಡಿಟರ್ ಇನ್ ಚೀಫ್ ಆಗಿರುತ್ತಾರೆ. ನೀವು (ಶಿವ) ಎಡಿಟರ್ ಆಗಿ ಮುಂದುವರೆಯಿರಿ" ಅಂದರಂತೆ.

ಆಗ ಶಿವ, ತಮ್ಮ ಸಿಎಂಡಿಗೆ "ನೀವು ಇದರ ಬಗ್ಗೆ ಏನನ್ನೂ ಹೇಳಿರಲಿಲ್ಲ, ನಾನು ಇರಲು ಆಗುವುದಿಲ್ಲ" ಅಂದಿದ್ದಾರೆ.

ಅದಕ್ಕೆ ಸೊಂಥಾಲಿಯಾ "ನೀವು ರಾಜೀನಾಮೆ ಕೊಡಲು ರೆಡಿಯಾಗಿದ್ದೀರಲ್ಲ?" ಅಂತ ಕೇಳಿದ್ದಾರೆ.


ಅದಕ್ಕೆ ಶಿವ "ಅದೆಲ್ಲ ಟ್ಯಾಬ್ಲಾಯ್ಡ್ ಪತ್ರಿಕೆಗಳು ಹಬ್ಬಿಸಿದ ರೂಮರ್ ಅಷ್ಟೆ" ಅಂತ ಪ್ರತಿಕ್ರಿಯಿಸಿ "ಭಟ್ಟರು ಇಲ್ಲಿಗೆ ಬರುತ್ತಿರುವ ಸುದ್ದಿ ಬೇರೆ ಪತ್ರಿಕಾ ಸಂಸ್ಥೆಯವರಿಗೆ ಗೊತ್ತಾಗಿದೆ. ಆದರೆ ನನಗೇ ಗೊತ್ತಾಗಲಿಲ್ಲ" ಎಂದರಂತೆ.

ಇಷ್ಟೆಲ್ಲಾ ಆದ ಮೇಲೂ ಸೊಂಥಾಲಿಯಾ ಹಾಗೂ ವಿಭಟ್ಟರು ಶಿವಸುಬ್ರಹ್ಮಣ್ಯರನ್ನು ಕನ್ನಡಪ್ರಭದಲ್ಲೇ ಉಳಿಸಿಕೊಳ್ಳಲು ಯತ್ನಿಸಿದರು. ಆದರೆ ವಿಪರೀತ ಸ್ವಾಭಿಮಾನಿಯಾದ ಶಿವ ಅಷ್ಟರಲ್ಲಿ ಒಂದು ನಿರ್ಧಾರಕ್ಕೆ ಬಂದಿದ್ದರು. ತೊಂಬತ್ತೆಂಟು ಸಾವಿರ ರೂಪಾಯಿಗಳ ತಮ್ಮ ಕೆಲಸ ತ್ಯಜಿಸಿ ಆತ್ಮಗೌರವ ಕಾಪಾಡಿಕೊಂಡಿದ್ದಾರೆ.

ಹಾಗೆ ನೋಡಿದರೆ ವಿ.ಭಟ್ಟರು ಹಾಗೂ ಶಿವ

ಬರಲಿದೆಯೆ ಬೆಂಗಳೂರು ಮಿರರ್ ಥರದ ಕನ್ನಡ ಡೈಲಿ?

ಹಾಗೆಂದು ಒಂದು ಸುದ್ದಿ ಕೇಳಿ ಬರುತ್ತಿದೆ. ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನವರು ಇದನ್ನು ಲಾಂಚ್ ಮಾಡುತ್ತಿದ್ದಾರೆಂಬ ರೂಮರ್ ಅಂತೂ ಇದೆ. ಹಾಲಿ ಬೆಂಗಳೂರ್ ಮಿರರ್‌ನ ಇಂಗ್ಲಿಷ್ ಆವೃತ್ತಿ ಬೆಂಗಳೂರೊಂದರಲ್ಲೇ ಓಡಾಡುತ್ತಿದೆ. ಅಂದಾಜು ನಲವತ್ತು ಸಾವಿರ ಸರ್ಕುಲೇಷನ್ನೂ ಅದಕ್ಕಿದೆ. ಹಾಗಾಗಿ ಅದೇ ಥರದ ಕನ್ನಡ ಮಿರರ್ ಯಾಕೆ ಮಾಡಬಾರದೆಂಬುದು ಟೈಮ್ಸ್ ಧಣಿಗಳ ಯೋಚನೆ. ವಿಜಯ ಕರ್ನಾಟಕ ಖರೀದಿಸಿದಾಗ ಇದ್ದ ಪತ್ರಿಕೆಗಳನ್ನೇ ನಿಲ್ಲಿಸುತ್ತಾ ಬಂದಿದ್ದರು ಟೈಮ್ಸ್ ಮಾಲೀಕರು. ಉಷಾ ಕಿರಣ, ವಿಜಯ ಟೈಮ್ಸ್ ಹಾಗೆ ಅಕಾಲ ಸಾವು ಕಂಡ ಕನ್ನಡ ಪತ್ರಿಕೆಗಳು. ಈಗ ಅದರ ಮಾಲೀಕರಿಗೆ ಹೊಸ ಪತ್ರಿಕೆಗಳನ್ನೂ ಚಾಲು ಮಾಡುವ ಇರಾದೆ ಹುಟ್ಟಿಕೊಂಡಿದೆ. ಶುರುವಾಗುವುದೇ ನಿಜವಾದರೆ ಕನ್ನಡ ಬೆಂಗಳೂರ್ ಮಿರರ್ ಅದರಲ್ಲೊಂದಾಗಬಹುದು.



ರವಿ ಹೆಗಡೆ

ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿವೆಯೇ ವಿನಃ ವೈಯಕ್ತಿಕ ಜಗಳ ಮುನಿಸುಗಳೇನೂ ಇರಲಿಲ್ಲ. ಒಂದು ದಶಕದ ಹಿಂದೆ ಇವರಿಬ್ಬರೂ ಸಂಯುಕ್ತ ಕರ್ನಾಟಕದಲ್ಲಿದ್ದಾಗ ಜೊತೆಯಾಗೆ ಗೆಳೆಯರಾಗೇ ಒಟ್ಟಿಗೆ ಕೆಲಸ ಮಾಡಿದ್ದರು. ನಂತರ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡಿ ಬೆಳೆದರು. ಆದರೆ ವಿ.ಭಟ್ಟರ ಕೈಕೆಳಗೆ ನಿಲ್ಲುವಂತ **Mediocre material** ಶಿವ ಅಲ್ಲವಾದ್ದರಿಂದ ಕನ್ನಡಪ್ರಭದಿಂದ ಅವರ ನಿರ್ಗಮನ ಅನಿವಾರ್ಯವಾಯಿತಷ್ಟೆ.

ಸ್ವಂತ ಊರಿನಲ್ಲೇ ಸಾಕಷ್ಟು ಪಿತ್ರಾರ್ಜಿತ ಆಸ್ತಿ ಹೊಂದಿರುವ ಶಿವಸುಬ್ರಹ್ಮಣ್ಯಗೆ ವೈಲ್ಡ್ ಲೈಫ್ ಫೋಟೋಗ್ರಫಿಯ ಹವ್ಯಾಸವಿದೆ. ಕರ್ನಾಟಕದ ಹೆಸರಾಂತ ಫೋಟೋಗ್ರಾಫರ್‌ಗಳಾದ ಲೋಕೇಶ್ ಮೊಸಳೆ ಹಾಗೂ ಗೌರೀಶ ಕಪನಿಯರ ಗೆಳೆಯ ಶಿವ ತಕ್ಷಣದ ಬಿಡುವನ್ನು ಕಾಡಿನ ಅಲೆದಾಟಕ್ಕೆ ಮೀಸಲಿಟ್ಟಿದ್ದಾರೆ. ಈಗಾಗಲೇ ಟಿವಿ ಹಾಗೂ ಪತ್ರಿಕಾ ಸಂಸ್ಥೆಗಳಿಂದ ಅವರಿಗೆ ಮೂರ್ನಾಲ್ಕು ಆಫರ್‌ಗಳಿವೆ. ಶಿವ ಕೆಲವೇ ದಿನಗಳಲ್ಲಿ ಎಲ್ಲೊ ಒಂದು ಕಡೆ ಪ್ರಮುಖ ಹುದ್ದೆಯಲ್ಲೇ ಕಾಣಿಸಿಕೊಂಡರೂ ಅಚ್ಚರಿಯಿಲ್ಲ.

ಶಿವಸುಬ್ರಹ್ಮಣ್ಯರ ನಿರ್ಗಮನದ ವಿಶೇಷ ಏನೆಂದರೆ ಯಾವುದೇ ಕಳಂಕ ಆರೋಪವಿರದೆ ಆಚೆ ಬಂದದ್ದು. ವಿಭಟ್ಟರನ್ನೂ ಒಳಗೊಂಡಂತೆ ಬೇರೆ ಯಾವುದೇ ಪತ್ರಿಕಾ ಸಂಪಾದಕರು ಕೆಲಸ ಬಿಟ್ಟಾಗ ಜಗಳ, ಆರೋಪ etc ಕಾರಣಗಳಿಂದಲೇ ಹೊರಬಂದ ಪರಂಪರೆ ಕನ್ನಡ ಪತ್ರಿಕೋದ್ಯಮದ್ದು. ಶಿವಸುಬ್ರಹ್ಮಣ್ಯ ಮಾತ್ರ ಇದಕ್ಕೆ ಅಪವಾದವಾದರು.

ವಲಸೆ ಶುರು


ವಿಭಟ್ಟರ ಆಗಮನದ ನಂತರ ಶಿವ ನಿರ್ಗಮನವಾಯಿತು. ಮುಂದೆ ಪ್ರತಾಪ ಸಿಂಹ, ತ್ಯಾಗರಾಜ್ ಮುಂತಾದ ಕೋಮುವಾದಿಗಳು ಕನ್ನಡಪ್ರಭೆಗೆ ಕಾಲಿಟ್ಟರೆ ಮುಂದಿನ ಒಂದೆರಡು ತಿಂಗಳೊಳಗೆ ಅಲ್ಲಿಂದ ಕನಿಷ್ಠ ಎಂಟ್ಹತ್ತು ನುರಿತ ಪತ್ರಕರ್ತರು ಕನ್ನಡಪ್ರಭ ತೊರೆಯಲಿದ್ದಾರೆ. ಬಹುತೇಕ ಸೆಕ್ಯುಲರ್ ಪತ್ರಕರ್ತರಾಗಿರುವ ಅವರಿಗೆ ಆರೆಸ್ಸೆಸ್ ಪತ್ರಕರ್ತರ ಕೈಕೆಳಗೆ ಕೆಲಸ ಮಾಡುವುದು ಒಗ್ಗುವುದಿಲ್ಲ ಎನ್ನಲಾಗುತ್ತಿದೆ. ಮತ್ತೊಂದೆಡೆ ಸುವರ್ಣ ನ್ಯೂಸ್ ಚಾನೆಲ್‌ನ ರವಿ ಹೆಗಡೆ ಮುಂದಿನ ವಾರ ಉದಯವಾಣಿ ಸಂಪಾದಕರಾಗಿ ಹೋಗಲಿದ್ದಾರೆ. ಅವರೊಂದಿಗೆ ಸುವರ್ಣ, ಚೇತನ್ ನಾಡಿಗೇರ್, ವಿಕಾಸ್ ನೇಗಿಲೋಣಿ, ರವಿಶಂಕರ್ ಭಟ್ ಹಾಗೂ ಇತರ ಒಂಭತ್ತು ಮಂದಿ ಉದಯವಾಣಿಯತ್ತ ಹೊರಡುತ್ತಿದ್ದಾರೆ. ಈ ಸಾಮೂಹಿಕ ವಲಸೆಯಿಂದಾಗಿ ಉದಯವಾಣಿಯೊಳಗೂ ತಳಮಳ ಆರಂಭವಾಗಿದೆ. ಹಾಲಿ ಉದಯವಾಣಿಯ ಸಂಪಾದಕರಾದ ತಿಮ್ಮಪ್ಪ ಭಟ್ ಸಜ್ಜನಿಕೆಯ ಮನುಷ್ಯ ಅವರು ಮುಂದೇನು ಮಾಡಲಿದ್ದಾರೆಂಬುದು ಗೊತ್ತಿಲ್ಲ. ಈ ನಡುವೆ ಕನ್ನಡಪ್ರಭ ಸೇರಿರುವ ವಿ.ಭಟ್ಟರು ವಿಜಯ ಕರ್ನಾಟಕದಿಂದಲೂ ಕೆಲವರನ್ನೂ ಎಳೆಯಲು ಪ್ಲಾನ್ ಮಾಡುತ್ತಿದ್ದಾರೆ. ಆಗ ವಿಜಯ ಕರ್ನಾಟಕವೂ, ಕನ್ನಡಪ್ರಭ, ಉದಯವಾಣಿ, ಸುವರ್ಣ ಸೇರಿದಂತೆ ಅನ್ಯ ಸಂಸ್ಥೆಗಳಿಂದ ಕೆಲವರನ್ನೂ ಸೆಳೆಯುವ ಕೆಲಸ ಮಾಡೇ ಮಾಡುತ್ತವೆ. ಆದರಿಂದ ವಲಸೆಯ ಹೊಸ ಸರಣಿ ಶುರುವಾಗುತ್ತದೆ. ವಿಜಯ ಕರ್ನಾಟಕದ ಕೆಲವರ ಗುತ್ತಿಗೇ ಒಪ್ಪಂದವು ಮಾರ್ಚ್ 10ಕ್ಕೆ ಮುಗಿಯಲಿದೆ. ಅವತ್ತು ಯಾರು ಹೋಗುತ್ತಾರೆ. ಯಾರು ಉಳಿಯುತ್ತಾರೆಂದು ನೋಡಿ ಹೊಸ ಸಿಬ್ಬಂದಿಯನ್ನು ತೆಗೆದುಕೊಳ್ಳಲು ವಿಕದವರು ನಿರ್ಧರಿಸಿದ್ದಾರೆ.

ಸಾರಾಂಶದಲ್ಲಿ ಹೇಳಬೇಕೆಂದರೆ ಈಗ ಸುವರ್ಣ ನ್ಯೂಸ್ ಚಾನೆಲ್, ಉದಯವಾಣಿ, ಕನ್ನಡಪ್ರಭ, ಉದಯವಾಣಿಗಳಿಂದ ಸರಾಸರಿ ಆರೆಂಟು ಜನರ ತಂಡಗಳು ತಾವಿರುವಲ್ಲಿಂದ ಹೊರಟು ಇನ್ನೊಂದು ಸಂಸ್ಥೆಗೆ ವಲಸೆ ಹೋಗಲು ತಯಾರಾಗುತ್ತಿವೆ. ಈ ವಲಸೆಕೋರರೆಲ್ಲರಿಗೂ ಕೇವಲ ತಮ್ಮ ಕೆರಿಯರ್, ಹಣ ಮಾತ್ರವಲ್ಲದೆ ಒಂದಲ್ಲ ಒಂದು ರಾಜಕೀಯ ಸಿದ್ಧಾಂತವೂ ಇದೆ. ಹಾಗಾಗಿ ಮಾಧ್ಯಮ ಸಂಸ್ಥೆಗಳ ರಾಜಕೀಯ ನಿಲುವುಗಳೂ ಒಂದು ಟೀಂನ ಆಗಮನ ಅಥವಾ ನಿರ್ಗಮನ ಆಧರಿಸಿ ಬದಲಾಗುತ್ತಿದೆ.

ಬಹುಶಃ ನೀವೂ ಗಮನಿಸಿರಬಹುದು ಕರ್ನಾಟಕದಲ್ಲಿ ಇವತ್ತಿನ ಮಟ್ಟಿಗೆ ಸೆಕ್ಯುಲರ್ ಅನ್ನಬಹುದಾದ ದಿನಪತ್ರಿಕೆ ಅಂದರೆ ಅದು ವಿಜಯ ಕರ್ನಾಟಕ! ●


ರಂಗ SMS ರಗಳೆ

ಸುವರ್ಣ ನ್ಯೂಸ್ ಚಾನಲ್‌ನಲ್ಲಿ ಇಬ್ಬರು ರಂಗನಾಥ ಇದ್ದರು. ಒಬ್ಬರು ಹೆಚ್.ಆರ್.ರಂಗನಾಥ್ ಇನ್ನೊಬ್ಬರು ರಂಗನಾಥ್ ಭಾರದ್ವಾಜ್.



ಭಾರದ್ವಾಜ್

ಈಗ ಭಾರದ್ವಾಜ್ ಸುವರ್ಣದಿಂದ ಹೊರಬಿದ್ದಿದ್ದಾರೆ. ಏನಾಯಿತೆಂದರೆ ಕ್ಯಾಪ್ಟನ್ ರಂಗ ಬಂದ ಮೇಲೆ ಅವರೇ ಎಲ್ಲಾ ಡಾಮಿನೇಟ್ ಮಾಡುತ್ತಿದ್ದಾರೆಂಬ ಒಂದು ಅಸಮಾಧಾನ ಚಾನಲ್ ಆಫೀಸ್ ಉದ್ದಗಲಕ್ಕೂ ಹರಿದಾಡುತ್ತಿತ್ತು. ಸಹಜವಾಗಿಯೇ ಇದು **ego clash,** ಇತ್ಯಾದಿಗಳಿಗೆ ದಾರಿಯಾಯಿತು. ಹಾಗೊಂದು ಸಾರಿ-ಅಂದರೆ ತೀರಾ ಇತ್ತೀಚೆಗೆ- ರಂಗನಾಥ್ ಭಾರದ್ವಾಜ್ ತನ್ನ ಕಡೆಯ ಕೆಲವರಿಗೆ ಒಂದು **SMS** ಕಳಿಸಿದರು. ಅದರಲ್ಲಿ ಕ್ಯಾಪ್ಟನ್ ರಂಗ ಕುರಿತಂತೆ "ಅವರಿಗೇನ್ ಮಹಾ ಗೊತ್ತಿರೋದು...." ಎಂಬಿತ್ಯಾದಿ ಮಾತಿದ್ದವು. ಯಾರೋ ಒಬ್ಬ ನಿಷ್ಠೆಯಿಂದ ಅದನ್ನು ಕ್ಯಾಪ್ಟನ್ ರಂಗನಿಗೆ ಫಾರ್ವರ್ಡ್ ಮಾಡಿಯೂ ಬಿಟ್ಟ. ಅದಾದನಂತರ ಭಾರದ್ವಾಜ್ ಶೂಟಿಂಗ್ ಒಂದರ ಕೆಲಸದ ಮೇಲೆ ಆಚೆ ಹೋಗಿದ್ದಾಗ ಕ್ಯಾಪ್ಟನ್ ರಂಗ "ಭಾರದ್ವಾಜ್ ಮತ್ತೆ ಆಫೀಸ್‌ಗೆ ಬರುವ ಅಗತ್ಯವಿಲ್ಲ" ಅಂತಾ ಫರ್ಮಾನು ಹೊರಡಿಸಿಯೇ ಬಿಟ್ಟರು.



ರಂಗನಾಥ್


ರಂಗನಾಥ ಭಾರದ್ವಾಜ್ ಡ್ಯೂಟಿಯಲ್ಲಿದ್ದಾಗಲೇ **Fire** ಆದರು. ಯಾವುದೇ ನೋಟಿಸು, ವಿವರಣೆ ಏನೂ ಕೊಡದೆ, ಕೇಳದೆ ಭಾರದ್ವಾಜ್ ಕೆಲಸ ಹೋಯಿತು. ಇರಲಿ ಬಿಡಿ. ಭಾರದ್ವಾಜ್ ಏನು ಕಡಿಮೆ ಅನುಭವಿಯಲ್ಲ ಎಲ್ಲಾದರೂ ಒಳ್ಳೆ ಕೆಲಸ ಗಿಟ್ಟಿಸುವುದು ಅವರಿಗೆ ಕಷ್ಟವೂ ಏನಲ್ಲ. ಅವರನ್ನೂ ಖರೀದಿಸುವ ತಾಕತ್ತು ಚಾನಲ್‌ಗಳಿಗಿರಬೇಕು ಅಷ್ಟೆ.




ಹುಬ್ಬಳ್ಳಿ:

ಕಿಮ್ಸ್‌ನಲ್ಲಿ ಸಿಕ್ಕಿಬಿದ್ದ ರಕ್ತ ಮಾರೋ ರ್‍ಯಾಸ್ಕಲ್!

ಉತ್ತರ ಕರ್ನಾಟಕ ಭಾಗದ ಬಡ ರೋಗಿಗಳ ಪಾಲಿನ ಸಂಜೀವಿನಿ ಎಂದೇ ಕರೆಸಿಕೊಳ್ಳುತ್ತಿದ್ದ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಉರ್ಫ್ ಕಿಮ್ಸ್ ಆಸ್ಪತ್ರೆ ಈಗ ಜನರಲ್ಲಿ ನಡುಕ ಹುಟ್ಟಿಲಾರಂಭಿಸಿದೆ. ಶೂಟೌಟ್ ಮಾಡಿಸಿಕೊಂಡ ನಿರ್ದೇಶಕನ ಪ್ರಕರಣದಿಂದ ಹೆಚ್ಚು ಪ್ರಚಾರ ಪಡೆದ ಕಿಮ್ಸ್ ನಂತರ ಕುಡುಕ ವೈದ್ಯರ ನಂಗಾನಾಚ್, ಅಕ್ರಮ ನೇಮಕಾತಿ, ವೈದ್ಯರಿಬ್ಬರ ಬ್ಲೂ ಫಿಲ್ಮ್‌ನಂತಹ ಅಸಹ್ಯಗಳನ್ನು ಹುಟ್ಟುಹಾಕಿದ್ದು ಹಳೇ ಕಥೆ. ಇದನ್ನೆಲ್ಲ ಮೀರಿ ಕಿಮ್ಸ್ ಈಗ ಏನೋ ಸುಧಾರಣೆ ಕಾಣುತ್ತಿದೆ ಎಂದು ಭಾವಿಸುವಷ್ಟರಲ್ಲೆ ಮತ್ತೊಂದು ದೊಡ್ಡ ಪ್ರಕರಣ ಬಯಲಾಗಿದೆ.



ವೆಂಕಟೇಶ್




ಮದಕಟ್ಟಿ



ದೊಡಮನಿ

ಕಿಮ್ಸ್‌ಗೆ ಬರುವ ಸಾವಿರಾರು ಬಡ ರೋಗಿಗಳು ಇಲ್ಲಿ ಉಚಿತ ಸೇವೆ ಸಿಗುತ್ತದೆ ಎಂದು ನಂಬಿ ಆಸ್ಪತ್ರೆಯೊಳಗೆ ಕಾಲಿಟ್ಟಿರುತ್ತಾರೆ. ಆದರೆ ಅಲ್ಲಿ ನಡೆಯುವುದೆ ಬೇರೆ. ರಾಜಕಾರಣಿಗಳ ಜೇಬಿಗೆ ಹಣವಿಟ್ಟೇ ಇಲ್ಲಿ ಉದ್ಯೋಗ ಪಡೆಯುವ ಡಾಕ್ಟರ್‌ಗಳು ತಾವು ಹಾಕಿದ ಬಂಡವಾಳವನ್ನು ಬಡ್ಡಿ ಸಮೇತ ಹಿಂಪಡೆಯುವುದಕ್ಕಾಗಿ ಪ್ರತಿ ದಿನ ಸುಲಿಗೆಗೆ ನಿಲ್ಲುತ್ತಾರೆ. ಇದಕ್ಕೆ ಈಗ ಮನುಷ್ಯ ಉಸಿರಾಡಲು ಅವಶ್ಯವಿರುವ ರಕ್ತ ಭಂಡಾರ ಕೂಡಾ ತುತ್ತಾಗಿದೆ.

ಅವಳಿನಗರದಲ್ಲೆ ಅತಿ ದೊಡ್ಡ ಉಚಿತ ರಕ್ತ ಭಂಡಾರ ಈ ಆಸ್ಪತ್ರೆಯಲ್ಲಿದೆ. ಆದರೆ ಇಲ್ಲಿ 'ಉಚಿತ' ಎನ್ನುವ ಪದವನ್ನು ಭಂಡಾರದ ಸಿಬ್ಬಂದಿಗಳು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. ಪ್ರತಿ 350 ಎಮ್.ಎಲ್. ರಕ್ತದ ಪಾಕೀಟಗೆ 2ರಿಂದ 6 ಸಾವಿರ ರೂಪಾಯಿಗೆ ಒಂದರಂತೆ ಮಾರುತ್ತಿದ್ದಾರೆ. ರೋಗಿಯ ಪರಿಸ್ಥಿತಿ ಹಾಗೂ ಸಮಯಕ್ಕೆ ತಕ್ಕಂತೆ ದರ ನಿಗದಿಯಾಗುತ್ತೆ. ಆಸ್ಪತ್ರೆಯ ಮೂಲಗಳೇ ಹೇಳುವ ಪ್ರಕಾರ ಸಾಯುವ ಹಂತ ತಲುಪಿರುವ ರೋಗಿ ಶ್ರೀಮಂತನಾಗಿದ್ದರೆ ರಕ್ತದ ಪಾಕೀಟಿನ ದರ ಹತ್ತು ಸಾವಿರ ರೂಪಾಯಿಯ ಗಡಿಯನ್ನೂ ದಾಟುತ್ತಿದ್ದಂತೆ.



Pooling Process

ಕಿಮ್ಸ್ ಆಸ್ಪತ್ರೆಯಲ್ಲಿನ ಕಸಗುಡಿಸುವ ಕೂಲಿಯಿಂದ ಹಿಡಿದು ವಾರ್ಡಬಾಯ್, ದಾದಿಯರು, ಕ್ಲರ್ಕಗಳು ಮತ್ತು ಡ್ಯೂಟಿ ಡಾಕ್ಟರ್‌ಗಳು ಈ ಬ್ಲಡ್ ರ್‍ಯಾಕೆಟ್‌ನಲ್ಲಿ ತೊಡಗಿದ್ದಾರೆ. ರೋಗಿಗಳಿಗೆ ರಕ್ತ ಮಾರಿ ರೊಕ್ಕ ಮಾಡುವ ಈ ರ್‍ಯಾಕೆಟ್‌ನಲ್ಲಿ ಇದೀಗ ಬೇರೆ ಬೇರೆ ಗುಂಪುಗಳ ನಡುವೆ ಪೈಪೋಟಿ ಶುರುಹಚ್ಚಿಕೊಂಡಿದ್ದೇ ಈ ಹಗರಣ ಹೊರಬೀಳಲು ಕಾರಣವಾಗಿದೆ.

ಮಹಾರಾಷ್ಟ್ರದ ಸೊಲ್ಲಾಪುರ ಮೂಲದ ರೋಗಿಯೊಬ್ಬ ಹೊಟ್ಟೆಯ ಶಸ್ತ್ರ ಚಿಕಿತ್ಸೆಗೆಂದು ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ. ರೋಗಿಯ ಆಪರೇಶನ್ ಹಿಂದಿನ ದಿನ ವೈದ್ಯರು ಒಂದು ಬಾಟಲಿ ರಕ್ತದ ವ್ಯವಸ್ಥೆ ಮಾಡುವಂತೆ ರೋಗಿಯ ಸಂಬಂಧಿ ಸೂರಜ್ ಕುಮಾರ್‌ಗೆ ಹೇಳಿದ್ದರು. ಆಗ ರಕ್ತ ಮಾರುವ ಪಿಂಪ್‌ಗಳು ಸೂರಜ್‌ನನ್ನು ಮುತ್ತಿಕೊಂಡಿದ್ದಾರೆ. ಕೊನೆಗೆ ಕಾರ್ಡಿಯಾಲಜಿ ವಿಭಾಗದ ಗುಮಾಸ್ತ ವೆಂಕಟೇಶ್ ಎರಡು ಸಾವಿರ ರೂಪಾಯಿಗೆ ಸೂರಜ್‌ಗೆ ಬೇಕಾಗಿದ್ದ O+ ಗ್ರೂಪಿನ ರಕ್ತವನ್ನು ಸಪ್ಲೈ ಮಾಡಿದ್ದಾನೆ. ಮಾರನೇ ದಿನ ಇನ್ನೊಂದು ಪ್ಯಾಕೆಟ್ ರಕ್ತ ಅವನಿಗೆ ತುರ್ತಾಗಿ ಬೇಕಾಗಿದೆ. ಆಗ ಸೂರಜ್ ವೆಂಕಟೇಶ್‌ಗೆ ದುಂಬಾಲು ಬಿದ್ದಿದ್ದಾನೆ. ಪರಿಸ್ಥಿತಿ ಅರಿತ ಈ ರ್‍ಯಾಸ್ಕಲ್ ರಕ್ತ ಕಳ್ಳ ದರವನ್ನು ಇದ್ದಕ್ಕಿದ್ದಂತೆ ಏರಿಸಿದ್ದಾನೆ. ಇದನ್ನು ನೋಡಿ ಸೂರಜ್ ದಂಗಾಗಿಹೋಗಿದ್ದಾನೆ. ಆಗ ವೆಂಕಟೇಶನೊಂದಿಗೆ ಪೈಪೋಟಿಗೆ ಬಿದ್ದಿದ್ದ ಮತ್ತೊಬ್ಬ ಸೂರಜ್‌ಗೆ ಮಾಧ್ಯಮದವರ ಮೊಬೈಲ್ ನಂಬರ್ ಕೊಟ್ಟಿದ್ದಾನೆ. ಸೂರಜ್ ಪ್ರೆಸ್‌ನವರನ್ನು ಕರೆಯಿಸಿ ರಕ್ತ ಹೀರುವ ಗುಮಾಸ್ತ ವೆಂಕಟೇಶನನ್ನು ರೆಡ್‌ಹ್ಯಾಂಡ್ ಆಗಿ ಸಿಕ್ಕುಹಾಕಿಸಿದ್ದಾನೆ.

ಆದರೂ ನಾಚಿಕೆ ಬಿಟ್ಟು ರಕ್ತದ ಮಾರಾಟ ದಂಧೆಗಿಳಿದಿರುವ ವೆಂಕಟೇಶ "ನಾನು ರಕ್ತದ ಪಾಕೀಟ್ ಮಾರಿಲ್ಲ, ಬದಲಾಗಿ ಎರಡು ಸಾವಿರ ಒಬ್ಬರಿಗೆ ಕೊಟ್ಟು O+ ರಕ್ತವನ್ನು ಪಡೆದಿದ್ದೇನೆ; ನನ್ನದೇನೂ ತಪ್ಪಿಲ್ಲ ಬೇಕಾದ್ರೆ ಎರಡು ಸಾವಿರ ವಾಪಾಸ್ ಕೊಡ್ತೀನಿ" ಅಂತೆಲ್ಲ ತೊದಲಿದ್ದಾನೆ.

ವಾಸ್ತವವಾಗಿ ಕಿಮ್ಸ್‌ಗೆ ರೋಗಿ ದಾಖಲಾದಾಗ ಮೊದಲು ಡಾಕ್ಟರ್ ಯಾವ ಗ್ರೂಪ್‌ನ ರಕ್ತ ಬೇಕು ಎಂದು ಹೇಳುತ್ತಾನೆ. ನಂತರ ಆ ವಾರ್ಡಿಗೆ ಸಂಬಂಧಿಸಿದ ಹಿರಿಯ ದಾದಿಯರತ್ತ ಬೆರಳು ತೋರಿಸುತ್ತಾನೆ. ದಾದಿ ಕೂಡ ತನ್ನ ಕಮೀಷನ್ ಲೆಕ್ಕದಲ್ಲಿ ತನಗೆ ಬೇಕಾದ ಏಜೆಂಟ್‌ಗಳನ್ನು ಕರೆಯಿಸಿ ರೋಗಿಯ ಸಂಬಂಧಿಕರಿಗೆ ಪರಿಚಯಿಸಿ ರೋಗಿಯ ಆರ್ಥಿಕ ಪರಿಸ್ಥಿತಿ ಕುರಿತು ಏಜೆಂಟ್‌ಗೆ ಮಾಹಿತಿ ನೀಡುತ್ತಾಳೆ. ಪಾಕೇಟು ರಕ್ತಕ್ಕೆ ಇಷ್ಟು ಅಂತ ಡೀಲು ಫಿಕ್ಸ್ ಮಾಡಿಕೊಂಡ ಏಜೆಂಟ್ ಕಿಮ್ಸ್‌ನ ಮೂರನೆ ಮಹಡಿಯಲ್ಲಿನ ಕಾರ್ಡಿಯಾಲಜಿ ವಿಭಾಗದಲ್ಲಿನ ಅಧಿಕಾರಿಗಳಿಂದ ಬೇಕಾದ ಗ್ರೂಪಿನ ರಕ್ತದ 350 ಎಮ್.ಎಲ್. ಪಾಕೀಟು ತಂದು ಸಪ್ಲೈ ಮಾಡುತ್ತಾನೆ. ಹೀಗೆ ದಿನವೊಂದಕ್ಕೆ ಒಬ್ಬೊಬ್ಬರೂ 10-20 ಸಾವಿರ ಜೇಬಿಗಿಳಿಸುತ್ತಿದ್ದಾರೆ.

ಅಸಲಿಗೆ ಕಿಮ್ಸ್‌ನ ರಕ್ತ ಭಂಡಾರಕ್ಕೆ ಬರುವ ರಕ್ತದ ಪಾಕೀಟುಗಳು ಪುಕ್ಕಟ್ಟೆಯಾಗಿ ದಾನಿಗಳು ನೀಡಿರುವಂಥವು. ವಿದ್ಯಾರ್ಥಿ ಸಂಘಟನೆ, ವಿವಿಧ ಸಂಘಸಂಸ್ಥೆಗಳು ಹಾಗೂ ಯುವಕ ಸಂಘಗಳು ಆಯೋಜಿಸುವ ರಕ್ತದಾನ ಶಿಬಿರದಲ್ಲಿ ದಾನಿಗಳಿಂದ ಪಡೆದ ರಕ್ತವನ್ನು ಇಲ್ಲಿ ಸಂಗ್ರಹಿಸಿ ಇಡಲಾಗುತ್ತದೆ. ಅಲ್ಲದೆ ಕಿಮ್ಸ್‌ನ ಕಾನೂನು ಪ್ರಕಾರ ಇಲ್ಲಿಯ ಭಂಡಾರದಿಂದ ರಕ್ತ ಪಡೆಯುವ ರೋಗಿ ತಾನೊಂದು ಪಾಕೀಟು ರಕ್ತ ಕೊಟ್ಟು ಬೇಕಾದ ಗ್ರೂಪಿನ ರಕ್ತವನ್ನು ಉಚಿತವಾಗಿ ಪಡೆಯ ಬೇಕು. ಆದರೆ ಹೀಗೆ ಸಂಗ್ರಹವಾದ ರಕ್ತದ ಪಾಕೀಟುಗಳನ್ನು ರಕ್ತ ಭಂಡಾರದ ಸಿಬ್ಬಂದಿಗಳು ಬೇಕಾಬಿಟ್ಟಿ ಮಾರಿಕೊಳ್ಳುತ್ತಿದ್ದಾರೆ. ಕಾರ್ಡಿಯಾಲಜಿ ವಿಭಾಗದ ಕೆಲ ಸಿಬ್ಬಂದಿಗಳೇ ಹೇಳೋ ಹಾಗೆ ಪ್ರತಿ ದಿನ 40-50 ಪಾಕೀಟು ರಕ್ತ ಮಾರಾಟವಾಗುತ್ತದೆ. ಅಂದರೆ ದಿನವೊಂದಕ್ಕೆ ಎರಡು ಲಕ್ಷ ರೂಪಾಯಿ ದುಡಿಮೆ ಈ ರಕ್ತ ಭಂಡಾರವೊಂದರಿಂದಲೇ ಆಗುತ್ತಿದೆ.

ಸೂರಜ್ ಅವರು ರಕ್ತ ಮಾರುವ ಖದೀಮರನ್ನು ಮಾಲು ಸಮೇತ ಹಿಡಿದು ಕೊಟ್ಟರೂ ಕಿಮ್ಸ್‌ನ ನಿರ್ದೇಶಕ ಬಿ.ಎಸ್.ಮದಕಟ್ಟಿ ಕಾರ್ಡಿಯಾಲಜಿಯ ಗುಮಾಸ್ತ ವೆಂಕಟೇಶನ ವಿರುದ್ಧ ಕ್ರಮ ಜರುಗಿಸಲು ಮೊದಲು ಹಿಂದೇಟು ಹಾಕಿದ್ದಾರೆ. ಆದರೆ ರೋಗಿಗಳ ಸಂಬಂಧಿಗಳು ಗಲಾಟೆಗೆ ಮುಂದಾದಾಗ ಅವನನ್ನು ಅಮಾನತು ಮಾಡಿದ್ದಾರೆ. ವೆಂಕಟೇಶ ಒಬ್ಬನೇ ಈ ಹಗರಣದಲ್ಲಿಲ್ಲ. ಕಿಮ್ಸ್‌ನ ಬಹುತೇಕ ಸಿಬ್ಬಂದಿ ಇದರಲ್ಲಿ ಶಾಮೀಲಾಗಿದ್ದಾರೆ. ಹೀಗಿರುವಾಗ ತಕ್ಷಣ ತನಿಖೆಗೆ ಆದೇಶಿಸಿ ಖದೀಮರನ್ನು ಹೊರದಬ್ಬುವ ಕೆಲಸಕ್ಕೆ ಮದಕಟ್ಟಿ ಯಾಕೆ ಮುಂದಾಗಲಿಲ್ಲ ಎಂಬ ಸಂಶಯ ಮೂಡುತ್ತಿದೆ.

ಮದಕಟ್ಟಿ ಕೂಡಲೇ ಸೂಕ್ತ ತನಿಖೆ ನಡೆಸಿ ಬಡರೋಗಿಗಳ ನೆರವಿಗೆ ಬರಬೇಕಿದೆ.

● ಹುರಳಿಕುಪ್ಪಿ ವಿನಯ್

೩ ಕೋಟಿಯ ಸಾಂಸ್ಕೃತಿಕ ಅನಾಚಾರ

ಅಕ್ಷರ ಸಂತೇಲಿ ಕೇಸರಿ ಕ್ರಿಮಿಗಳು



ಮುಗಿದ ಜಾತ್ರೆಯ ನೀರವದಲ್ಲಿ ಮುಗಿಯದ ಪ್ರಶ್ನೆಗಳು ಒಂದಾ, ಎರಡಾ?

ಸಾಹಿತ್ಯ ಸಮ್ಮೇಳನವಲ್ಲ ಅದು ಗೌಡರ ಗದ್ದಲ ಎಂಬ ಕುಹಕ, ಬಿಜೆಪಿಯ ಚೆಡ್ಡಿಗಳೆಲ್ಲ ಸೇರಿ ಇಡೀ ಕಾರ್ಯಕ್ರಮವನ್ನೇ ಹೈಜಾಕ್ ಮಾಡಿದರೆಂಬ ಅಣಕ, ವರನಟ ರಾಜ್‌ರನ್ನು ಬೇಕಂತಲೇ ನಿರ್ಲಕ್ಷಿಸಿದ್ದಾರೆಂಬ ಅಭಿಮಾನಿಗಳ ಸಂಕಟ, ದುಡ್ಡು ದೋಚುವುದೊಂದೇ ಹಲವರ ಗುರಿಯಾಗಿತ್ತೆನ್ನುವ ಆರೋಪ, ಕವಿ ಹೃದಯಿ ಪ್ರತಿಭಾವಂತರನ್ನೆಲ್ಲ ಮೂಲೆಗುಂಪು ಮಾಡಿ ಢೋಂಗಿ ಪುಂಗವರಿಗೆ ಮಣೆ ಹಾಕಿದರೆಂಬ ಆಕ್ರೋಶ, ರೋಲ್‌ಕಾಲ್ ಹೋರಾಟಗಾರರ ಕೈಗೆ ಇಡೀ ಸಮ್ಮೇಳನವನ್ನೊಪ್ಪಿಸಿದ ಅನಾಹುತ ಮತ್ತು ಸಾಹಿತಿಗಳ ಜಾತಿಬುದ್ಧಿಯ ವಿಪರೀತಗಳೆಲ್ಲವೂ ಒಟ್ಟೊಟ್ಟಾಗಿ ಸಂಭವಿಸಿದ್ದರ, 'ಪರಿಣಾಮವೇ' ಮೂರು ದಿನಗಳ ಸಾಂಸ್ಕೃತಿಕ ಅನಾಚಾರ.



ಸಾಹಿತ್ಯದ ಗಂಧ, ಅಕ್ಷರ ಕಾಳಜಿಯಿಲ್ಲದ ಪುಢಾರಿಗಳ ಕೈಗೆ ಸಮ್ಮೇಳನ ಸಿಕ್ಕರೆ ಏನೆಲ್ಲಾ ಅನಾಹುತವಾಗುತ್ತೋ ಅದೇ ಆಯಿತು. ಅನಗತ್ಯ ಹಾಸ್ಯಗೋಷ್ಠಿ, ನಕಲಿ ಕವಿಗಳಿಂದಲೇ ಮೇಳೈಸಿದ ಕವಿಗೋಷ್ಠಿ, ನಡೆಯದ ಗಂಭೀರ ಚರ್ಚೆಗಳು, ಸಂಬಂಧವೇ ಇಲ್ಲವೆಂಬಂತೆ ನಿರ್ಲಿಪ್ತರಾಗುಳಿದ ಬೆಂಗಳೂರಿನ ಕನ್ನಡ ಸಂಘಟನೆಗಳು, ಊಟದ ದುರವಸ್ಥೆ ಇತ್ಯಾದಿಗಳೆಲ್ಲದರ ಗೊಂದಲ ಸಂತೆಯಂತಾದ ಬೆಂಗಳೂರು ಸಾಹಿತ್ಯ ಸಮ್ಮೇಳನವನ್ನು ಗೌಡರ ಗದ್ದಲವನ್ನಾಗಿಸಿದ್ದು, ಕೇಸರೀಕರಣದ ಹಿತಾಸಕ್ತಿಗೆ ತಕ್ಕಂತೆ ಬಳಸಿಕೊಂಡಿದ್ದು ಮಂತ್ರಿ ಆರ್. ಅಶೋಕ್‌ರ ಚೆಡ್ಡಿ ಗ್ಯಾಂಗು!

ಇದೊಂದರ್ಥದಲ್ಲಿ ಈ ಬಾರಿಯ ಸಾಹಿತ್ಯ ಸಮ್ಮೇಳನ ಬೆಂಗಳೂರಿನ ಚೆಡ್ಡಿ ಒಕ್ಕಲಿಗರ ಬಾಡೂಟದಂತಾದದ್ದು ಒಂದು ದುರಂತವಾದರೆ, ಮತ್ತೊಂದರ್ಥದಲ್ಲಿ ಆರೆಸ್ಸೆಸ್ ಹುನ್ನಾರಕ್ಕೂ ವೇದಿಕೆ ದೊರಕಿದ್ದು. ನಲವತ್ತು ವರ್ಷಗಳ ನಂತರ ರಾಜಧಾನಿಯಲ್ಲಿ ನಡೆದ ಸಾಹಿತ್ಯ ಜಾತ್ರೆಗೆ ಏನೆಲ್ಲಾ ಆಯಾಮಗಳಿರಬೇಕಿತ್ತೋ ಅದ್ಯಾವುದೂ ಸಾಧ್ಯವಾಗಲೇ ಇಲ್ಲ. ನಿಘಂಟು ನಿಷ್ಣಾತ ವೆಂಕಟಸುಬ್ಬಯ್ಯ ಅಧ್ಯಕ್ಷರೆಂಬ ಕಾರಣಕ್ಕೆ, ಬಸವನಗುಡಿಯ ಬ್ರಾಹ್ಮಣರಿಗಿದು ತಮ್ಮದೇ ಕಾರ್ಯಕ್ರಮವೆನಿಸಿದರೆ, ತಮ್ಮದೇ ಸರ್ಕಾರದ ನಿಧಿಯಿಂದ ನಡೆಯುವ ಸಮ್ಮೇಳನದಲ್ಲಿ ತಮ್ಮ ಮಾತೇ ನಡೆಯಬೇಕೆಂಬುದು ಚೆಡ್ಡಿಗಳ ಇರಾದೆಯಾಗಿತ್ತು. ಅಂತಿಮವಾಗಿ ಸಾಹಿತ್ಯ ಸಮ್ಮೇಳನ ಗೌಡರ ಗದ್ದಲದಲ್ಲೇ ಮುಗಿದುಹೋಯಿತು.

ಬಹುಶಃ ಈತನಕ ನಡೆದ ಸಾಹಿತ್ಯ ಸಮ್ಮೇಳನಗಳ ಸಡಗರವೇ ಒಂದು ರೀತಿಯದಾದರೆ ಬೆಂಗಳೂರಿನದ್ದು ಅವೆಲ್ಲವನ್ನೂ ಮೀರಿಸಿದ ಸಂಭ್ರಮ. ದಿನದ ಯಾವ ಗಳಿಗೆಯಲ್ಲೂ ಮುಖ್ಯ ವೇದಿಕೆಯ ಮುಂದೆ ಐವತ್ತರಿಂದ ಆರವತ್ತು ಸಾವಿರ ಸಾಹಿತ್ಯಾಕಾಂಕ್ಷಿಗಳು ಕಿಕ್ಕಿರಿದಿರುತ್ತಿದ್ದರು. ಪಕ್ಕದ ಪುಸ್ತಕ ಮಳಿಗೆಯಲ್ಲೂ ಅಷ್ಟೇ ಸಂಖ್ಯೆಯ ಜನಜಂಗುಳಿಯಿತ್ತು, ಇದಲ್ಲದೇ ಅಕ್ಕಪಕ್ಕದ ರಸ್ತೆ, ಪಾರ್ಕು, ಮೈದಾನಗಳ ತುಂಬ ಕಮ್ಮಿಯೆಂದರೂ ಲಕ್ಷ ಜನ ಓಡಾಡಿಕೊಂಡಿದ್ದನ್ನು ಲೆಕ್ಕ ಹಾಕಿದರೆ ದಿನದ ಯಾವ ಕ್ಷಣಕ್ಕೂ ಕನಿಷ್ಠ ಎರಡು ಲಕ್ಷ ಮಂದಿ ಭಾಗವಹಿಸಿದ್ದು ಸ್ಪಷ್ಟವಾಗಿತ್ತು.



ಇವರ್ಯಾರೂ ಆಹ್ವಾನ ಪತ್ರಿಕೆಯ ಕಾರಣಕ್ಕಾಗಲಿ, ಸಾಹಿತ್ಯಿಕ ನೆಂಟಸ್ತಿಕೆಗಾಗಲಿ ಬಂದವರಲ್ಲ. ಬೆಂಗಳೂರಿನ ಸಾಮಾನ್ಯ ಕನ್ನಡಿಗರು. ಅದು ಕನ್ನಡದ ಕರುಳಿನ ಸಂಬಂಧ. ಇಂಥ ಕನ್ನಡ ಪ್ರೇಮಿಗಳಿಗೆ ಕನಿಷ್ಠ ಲೋಟ ನೀರು, ಹೊತ್ತಿನ ಊಟ ಹಾಳಾಗಲಿ ನೆಟ್ಟಗೆ ಕುಳಿತುಕೊಳ್ಳುವ ವ್ಯವಸ್ಥೆಯನ್ನೂ ಮಾಡಲಾಗದ ದುರವಸ್ಥೆ ಕಸಾಪದ ಅಧಿಪತಿಗಳದ್ದು. ಸರ್ಕಾರವೇ ಕೊಟ್ಟ ಒಂದು ಕೋಟಿ, ಬಿಬಿಎಂಪಿಯಿಂದ ಬಂದ ಮತ್ತೊಂದು ಕೋಟಿ, ಬಿಡಿಎ ನೀಡಿದ 50 ಲಕ್ಷ, ಬಿಟಿಎಂಸಿಯ ನೌಕರರು ನೀಡಿದ 20 ಲಕ್ಷ ಮತ್ತು ಇತರೇ ಮೂಲಗಳಿಂದ ಬಂದ ದೇಣಿಗೆಯೆಲ್ಲ ಸೇರಿದರೆ ಅದು ಹೆಚ್ಚೂಕಮ್ಮಿ 3ಕೋಟಿಯ ಸಾಹಿತ್ಯ ಸಂತೆ.

ಮೆರವಣಿಗೆಯ ಕಲಾವಿದರಿಗೂ ನೆಟ್ಟಗೆ ಸಂಭಾವನೆ ನೀಡದೆ, ಹೊರ ಊರಿನಿಂದ ಬಂದ ಅತಿಥಿಗಳಿಗೂ ವಾಸದ ವ್ಯವಸ್ಥೆ ಮಾಡದೆ, ಬೇಕಾಬಿಟ್ಟಿ ಊಟ ಕೊಟ್ಟು, ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಗೂ ಗತಿಯಿಲ್ಲದ ಸಮ್ಮೇಳನಕ್ಕೊಂದು ಖರ್ಚಾದದ್ದು ಮೂರು ಕೋಟಿ ರೂಪಾಯಿಗಳು!

ಇದು ಸಮ್ಮೇಳನದ ದುರವಸ್ಥೆಯ ಒಂದು ಮುಖ ಮಾತ್ರ. ಇಷ್ಟೊಂದು ಇಕ್ಕಟ್ಟಾದ, ಪಾರ್ಕಿಂಗ್ ವ್ಯವಸ್ಥೆಯಿಲ್ಲದ, ಜನ ಕೂರುವುದಕ್ಕೂ, ಓಡಾಡುವುದಕ್ಕೂ ಆಸ್ಪದವಿಲ್ಲದ ಜಾಗದಲ್ಲಿ ಏಕೆ ಸಮ್ಮೇಳನವನ್ನು ಹಮ್ಮಿಕೊಂಡರೆಂಬುದು ' ಯಾರಿಗೂ ಅರ್ಥವಾಗಲಿಲ್ಲ. ಅದು ಆರೆಸ್ಸೆಸ್ ತಂತ್ರವಾಗಿತ್ತೆ? ಬಿಜೆಪಿಯ ರಾಷ್ಟ್ರನಾಯಕ ಅನಂತ್‌ಕುಮಾರ್ ವರ್ಚಸ್ಸಿಗೆಂದೇ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನವನ್ನು ಬಳಸಲಾಯ್ತೆ?

ಶುರುವಿನಲ್ಲಿ ಅರಮನೆ ಮೈದಾನದಲ್ಲಿ ನಡೆಸಬೇಕೆಂದಿದ್ದ ಸಮ್ಮೇಳನವನ್ನು ನ್ಯಾಷನಲ್ ಕಾಲೇಜು ಮೈದಾನಕ್ಕೆ ಬದಲಾಯಿಸಿದ್ದರ ಮರ್ಮವೇನು?

ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯರ ಮೂಲಕ ತಮ್ಮ ಶಕ್ತಿ ಪ್ರದರ್ಶನಕ್ಕೆಂದು ಅನಂತ್‌ಕುಮಾರ್ ಸಮ್ಮೇಳನವನ್ನು ಬಳಸಿಕೊಂಡರೆಂಬುದು ಎಷ್ಟು ಸತ್ಯ!



ಇಂಥ ಗುಮಾನಿಗಳಿಗೆ ತಕ್ಕಂಥೆ ಸಮ್ಮೇಳನ ನಡೆದ ಬಸವನಗುಡಿಯಿಂದ ಹಿಡಿದು ಜಯನಗರದ ತನಕ ಮೆಜೆಸ್ಟಿಕ್, ಚಾಮರಾಜಪೇಟೆ, ವಿವಿಪುರಂ, ಬನಶಂಕರಿಯುದ್ದಕ್ಕೂ ಅನಂತ್‌ಕುಮಾರ್, ಅಶೋಕ್ ಮತ್ತು ಯಡ್ಡಿಗಳೇ ಮಿಂಚುತ್ತಿದ್ದ ಬ್ಯಾನರು-ಫ್ಲೆಕ್ಸ್‌ಗಳು ರಾರಾಜಿಸಿದವು. ಕಾಟಾಚಾರಕ್ಕೂ ಸಮ್ಮೇಳಾಧ್ಯಕ್ಷ ವೆಂಕಟಸುಬ್ಬಯ್ಯನವರ ಫೋಟೋ ಹಾಕದೇ ಅನಂತ್‌ಕುಮಾರ್ ಚಿತ್ರವಿದ್ದ ಕಟೌಟು, ಫ್ಲೆಕ್ಸ್‌ಗಳು ಇಡೀ ಸಮ್ಮೇಳನವನ್ನೇ ಅಣಕಿಸುವಂತಿತ್ತು, ಸಾಹಿತ್ಯ ಸಮ್ಮೇಳನಕ್ಕೂ ಅನಂತ್‌ಕುಮಾರ್‌ಗೂ ಏನು ಸಂಬಂಧ? ಸಮ್ಮೇಳನಾಧ್ಯಕ್ಷರಿಗೂ ಮೀರಿ ಮಂತ್ರಿ ಅಶೋಕ್‌ರನ್ನು ಮೆರೆದಾಡಿಸಿದ್ದೇಕೆ? ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಾತ್ರಕ್ಕೆ ಅಶೋಕ್‌ರನ್ನು ಇಷ್ಟೊಂದು ವಿಜೃಂಭಿಸಿದ್ದೇಕೆ?

ಇಂಥ ಚೆಡ್ಡಿ ಷಡ್ಯಂತ್ರಗಳೆಲ್ಲವನ್ನೂ ಒತ್ತಟ್ಟಿಗಿಟ್ಟು ಕನಿಷ್ಠ ಗೋಷ್ಠಿಗಳಾದರೂ ಅರ್ಥಪೂರ್ಣವಾಗಿತ್ತೆ ಎಂದು ಪುಸ್ತಿಸಿಕೊಂಡವರಿಗೆ ಅಲ್ಲೂ ನಿರಾಶೆ ಕಾದಿತ್ತು. ಮೂರು ಕವಿಗೋಷ್ಠಿಗಳ ಪೈಕಿ ಮುಖ್ಯ ವೇದಿಕೆಯಲ್ಲಿ ನಡೆದ ಅನಂತಮೂರ್ತಿ ಅಧ್ಯಕ್ಷತೆಯ ಕವಿಗೋಷ್ಠಿಯೊಂದೇ ಅಷ್ಟಿಷ್ಟು ಅರ್ಥಪೂರ್ಣವೆನಿಸಿದ್ದು ಬಿಟ್ಟರೆ ಕುವೆಂಪು ಕಲಾಕ್ಷೇತ್ರ ಮತ್ತು ಮಹಿಳಾ ಸಮಾಜದಲ್ಲಿ ನಡೆದದ್ದು ನಕಲಿ ಕವಿಗಳ ಡೆಮ್ಮಿ ಗೋಷ್ಠಿ. ಹೊಸದುರ್ಗದ ನಿಸಾರ್ ಅಹ್ಮದ್ ಮತ್ತು ಬಸು ಬೇವಿನಗಿಡದ ಎಂಬಿಬ್ಬರು ಯುವ ಕವಿಗಳು ಕಟ್ಟಿದ ಅದ್ಭುತ ಕಾವ್ಯಗಳನ್ನು ಹೊರತುಪಡಿಸಿದರೆ ಮಿಕ್ಕೆಲ್ಲವೂ ಜೊಳ್ಳು ಕವನಗಳೆ.

ಬಹುಶಃ ಇಂಥ ಕಳಪೆ ಕವಿಗೋಷ್ಠಿಗಳಿಗೆ ಆಪಾಲಜಿಯೋ ಎಂಬಂತೆ ಕಾಯ್ಕಿಣಿ, ಮಾಲತಿಪಟ್ಟಣ ಶೆಟ್ಟಿ, ಜಂಬಣ್ಣ ಅಮರಚಿಂತ, ದೊಡ್ಡರಂಗೇಗೌಡ, ಸಿದ್ದಲಿಂಗಯ್ಯರಿದ್ದ ಸ್ಟಾರ್ ಕಾವ್ಯಗೋಷ್ಠಿಗೆ ಅನಂತಮೂರ್ತಿಯವರನ್ನು ಅಧ್ಯಕ್ಷರನ್ನಾಗಿಸಲಾಗಿತ್ತೆ?

ಹೆಸರಿಗಷ್ಟೇ ಇಲ್ಲಿ ಸ್ಟಾರ್ ಕವಿಗಳಿದ್ದರೇ ಹೊರತು ಕಾವ್ಯ ಮಾತ್ರ ಯಾಕೋ ಸಪ್ಪೆ ಹೊಡೆಯುತ್ತಿತ್ತು! ಮಿಕ್ಕಂತೆ ಯಾವ ಗೋಷ್ಠಿಯಲ್ಲೂ ಗಂಭೀರ ಚರ್ಚೆಗಳೇ ಇರಲಿಲ್ಲ, ಯಾವ ಪುರುಷಾರ್ಥಕ್ಕೆಂದು ಹಾಸ್ಯಗೋಷ್ಠಿಯನ್ನು ತುರುಕಲಾಗಿತ್ತೋ. ಈಗಾಗಲೇ ಕಂಡಕಂಡ ಟೀವಿ ಚಾನಲ್ಲುಗಳಲ್ಲಿ ಕಾಮಿಡಿ ಷೋ ಕೊಟ್ಟ ನಕಲಿ ಚಾಮರನ್ನೇ ಕರೆತಂದು ಸಮ್ಮೇಳನದ ಗಾಂಭೀರ್ಯವನ್ನು ಕುಂದಿಸಿದ್ದೇಕೆಂಬ ಪ್ರಶ್ನೆಗೆ ಯಾರಲ್ಲೂ ಉತ್ತರವಿರಲಿಲ್ಲ. ಚರ್ಚೆಗಳೂ ಕೂಡ ಇಂಥ ಕ್ಲೀಷೆಯ ವಿಷಯಗಳಿಗೇ ಸೀಮಿತಗೊಂಡಿದ್ದು ಮತ್ತೊಂದು ದುರಂತ. ಸಾಫ್ಟ್‌ವೇರ್, ಸೈಬರ್ ಯುಗದಲ್ಲಿ ಹೇಗೆ ಕನ್ನಡವನ್ನು ಮಾರ್ಪಾಡುಗೊಳಿಸಬೇಕೆಂಬ ಬಗ್ಗೆಯಾಗಲಿ, ಎಂಥ ಯೂನಿಕೋಡ್ ಸೃಷ್ಟಿಸಬೇಕೆಂಬುದರ ಕುರಿತಾಗಲಿ ಚರ್ಚೆಯಾಗಲೇ ಇಲ್ಲ.

ಸದ್ಯ ಕನ್ನಡಿಗರು ಎದುರಿಸುತ್ತಿರುವ ಸವಾಲುಗಳ ಕುರಿತಾಗಲಿ, ಗಣಿ ಕಳ್ಳರೇ ಅಧಿಕಾರ ಹಿಡಿದು ರಾಜ್ಯದ ಗಡಿಯನ್ನೇ ತಿದ್ದಿದ್ದಾಗಲಿ, ಪ್ರತಿನಿತ್ಯ ದರೋಡೆಯಾಗುತ್ತಿರುವ ರಾಜ್ಯ ಅದಿರು ಸಂಪತ್ತಿನ ಬಗ್ಗೆಯಾಗಲಿ, ಸಾಹಿತ್ಯಿಕ ಪ್ರಭಾವಳಿಯ ಅವನತಿಯ ಕುರಿತಾಗಲಿ ಅರ್ಥಪೂರ್ಣ ಚರ್ಚೆ ನಡೆಯಲೇ ಇಲ್ಲ. ಬೇರೆ ಸಮ್ಮೇಳನಗಳಲ್ಲಿ ಕಂಡುಬರುತ್ತಿದ್ದ ಸಾಹಿತಿ, ಬರಹಗಾರರ ಗುಂಪು ಬಸವನಗುಡಿಯಲ್ಲಿ ಕಾಣಿಸಲೇ ಇಲ್ಲ. ಖ್ಯಾತ ಸಾಹಿತಿಗಳನೇಕರು ನ್ಯಾಷನಲ್ ಕಾಲೇಜು ಮೈದಾನದತ್ತ ತಲೆಯನ್ನೇ ಹಾಕಲಿಲ್ಲ. ವಿದ್ವಾಂಸರು ಚಿಂತಕರ್‍ಯಾರನ್ನೂ ತೊಡಗಿಸಿಕೊಂಡಿರಲಿಲ್ಲ. ಅರ್ಥಹೀನ ಗೋಷ್ಠಿಗಳು, ರೋಲ್‌ಕಾಲ್ ಹೋರಾಟಗಾರರು, ಎಲ್ಲೆಂದರಲ್ಲಿ ಇಟ್ಟಾಡುತ್ತಿದ್ದ ಆರೆಸ್ಸೆಸ್ ಮಾಣಿಗಳಿಂದಾಗಿ ಬೆಂಗಳೂರು ಸಾಹಿತ್ಯ ಸಮ್ಮೇಳನವಾಗಬೇಕಿದ್ದ ಇಡೀ ಕಾರ್ಯಕ್ರಮ ಬಸವನಗುಡಿಯ ಕಡ್ಲೆಕಾಯಿ ಪರಿಷೆಯಂತಾಯ್ತು.

ಯಾವ ರಾಜ್ಯೋತ್ಸವ ಪ್ರಶಸ್ತಿಯ ಮೇಳಕ್ಕೂ ಕಮ್ಮಿಯಿಲ್ಲದಂತೆ ಒಂದೇ ವೇದಿಕೆಯಲ್ಲಿ ನೂರಿಪ್ಪತ್ತು ಮಂದಿಯನ್ನು ಸನ್ಮಾನಿಸಿದ್ದೇ ನಗೆಪಾಟಲಿಗೀಡಾಗಿತ್ತು. ಸನ್ಮಾನ್ಯಕ್ಕೀಡಾದವರ ಹಿನ್ನೆಲೆ ಮತ್ತು ಸಾಧನೆ ಗಮನಿಸಿದರೆ ಅಲ್ಲೂ ಜಾತಿ ಮತ್ತು ರಾಜಕೀಯದ ಕೈಯೇ ಮೇಲಾಗಿತ್ತು. ಸಾಹಿತಿಗಳೇ ಅಲ್ಲದ ಸಾಹಿತ್ಯಕ್ಕೆ ಸಂಬಂಧವೇ ಇಲ್ಲದವರನ್ನು ಯಾರ್‍ಯಾರದೋ ಹಿತಾಸಕ್ತಿಗಾಗಿ ಸನ್ಮಾನಿಸಲಾಗಿತ್ತು. ಸಂಬಂಧವೇ ಇಲ್ಲದ ಸಿನಿಮಾ ಬಗ್ಗೆ ಗೋಷ್ಠಿ ನಡೆಸಿದ್ದು, ಕಾಟಾಚಾರಕ್ಕೂ ಸಿನಿಮಾ ಮಂದಿ ತಲೆಹಾಕದ್ದು, ಮುಖ್ಯಮಂತ್ರಿ ಚಂದ್ರು ಬೇಷ್ಟಗಿಳಿದದ್ದು, ಬೆಂಗಳೂರು ನಗರದ ಬಹುತೇಕ ಕಸಾಪ ಘಟಕಗಳೆಲ್ಲ ಸಮ್ಮೇಳನವನ್ನು ಬಹಿಷ್ಕರಿಸಿದ್ದು ಅಧ್ವಾನದ ಕೆಲ ಉದಾಹರಣೆಗಳಷ್ಟೆ.

ಬೆಂಗಳೂರಿನ ಬಹುತೇಕ ಕನ್ನಡ ಸಂಘಟನೆಗಳಿಗೂ ಸಮ್ಮೇಳನಕ್ಕೂ ಸಂಬಂಧವೇ ಇರಲಿಲ್ಲ. ಹೆಚ್ಚೂಕಮ್ಮಿ ಎರಡು ತಿಂಗಳುಗಳಿಂದ ತಯಾರಿ ನಡೆಸಲಾಗಿತ್ತಲ್ಲ; ಗಲ್ಲಿಗಲ್ಲಿಗೂ ಕನ್ನಡ ಬಾವುಟ ನೆಟ್ಟು ರಾಜ್ಯೋತ್ಸವ ನಡೆಸುವ ಅಸಂಖ್ಯಾತ ತಂಡಗಳಿದ್ದವು. ಆಯಾ ಬಡಾವಣೆಗಳಿಗೆ ಸಂಬಂಧಪಟ್ಟಂತೆ ತಲೆ ಎತ್ತಿದ ಕನ್ನಡ ಸಂಘಟನೆಗಳಿದ್ದವು. ಇಂಥ ಬಹುತೇಕ ಕನ್ನಡ ಪರ ತಂಡಗಳಿಗೆ ಕಾಟಾಚಾರಕ್ಕೂ ಆಹ್ವಾನ ನೀಡಲಿಲ್ಲ. ಇಂಥ ಕನ್ನಡ ಪರ ಗುಂಪುಗಳ ಮೂಲಕ ಸಮ್ಮೇಳನವನ್ನು ಜನಸಾಮಾನ್ಯರತ್ತ ಕೊಂಡೊಯ್ಯುವ ಯಾವ ಪ್ರಯತ್ನವನ್ನೂ ಯಾರೂ ಮಾಡಲಿಲ್ಲ. ಆಟೋ ಚಾಲಕರು ಕನಿಷ್ಠ ಕನ್ನಡ ಬಾವುಟ ಕಟ್ಟಿಕೊಂಡು ಬೀದಿಗಿಳಿದಿದ್ದರೆ, ಆಯಾ ಬಡಾವಣೆಯ ರಾಜ್ಯೋತ್ಸವದ ಗುಂಪುಗಳು ಮೆರವಣಿಗೆಯಲ್ಲಿ ಬಂದು ಭಾಗವಹಿಸುವಂತಾಗಿದ್ದರೆ, ಕನಿಷ್ಠ ಶುಭಾಶಯ ಕೋರಿ ಗಲ್ಲಿಗಲ್ಲಿಗಳಲ್ಲಿ ಬ್ಯಾನರ್-ಬಾವುಟಗಳು ಕಂಗೊಳಿಸಿದ್ದರೆ ಸಮ್ಮೇಳನಕ್ಕೊಂದು ಅರ್ಥವಿರುತ್ತಿತ್ತು.

ಬೆಂಗಳೂರಿನ ಮುಸ್ಲಿಮರನ್ನಾಗಲಿ ಕ್ರೈಸ್ತರನ್ನಾಗಲಿ, ವಲಸೆ ಬಂದ ತೆಲುಗು, ತಮಿಳು, ಮಲೆಯಾಳಿಗಳನ್ನಾಗಲಿ ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಕನ್ನಡವನ್ನು ವಿಸ್ತರಿಸಬಹುದೆಂಬ ಪರಿಕಲ್ಪನೆಯೇ ಸಂಘಟಕರಿಗಿರಲಿಲ್ಲ. ರೋಲ್‌ಕಾಲ್ ವೀರರು, ನಮುಗುನ್ನಿ ಚೆಡ್ಡಿಗಳು, ಮಡಿವಂತ ಸಾಹಿತಿಗಳು ಮತ್ತು ಜಾತಿ ಬುದ್ಧಿಯ ಪುಢಾರಿಗಳೆಲ್ಲ ಸೇರಿ ಹೇಗೆ ಸಾಂಸ್ಕೃತಿಕ ಅನಾಚಾರವೊಂದಕ್ಕೆ ಕಾರಣರಾಗುತ್ತಾರೆಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

• ರಾ. ಸೋಮನಾಥ್

ದಕ್ಷಿಣ ಕನ್ನಡ

ಭಜರಂಗಿ ಸಂಸದ ನಳಿನ್ ಚೆಡ್ಡಿ ಶಾಸಕಿ ಮಲ್ಲಿಕಾರ ಮಧ್ಯರಾತ್ರಿ ಮಸಲತ್ತು!

ಪರಿವಾರದ ಪ್ರಯೋಗಶಾಲೆಯಂತಿರುವ ದಕ್ಷಿಣ ಎಂತೆಂಥ ಅಸಮಾನ್ಯ ಅನಾಹುತಕಾರಿ ಎಂ.ಪಿ.-ಗಳ ಆವಿಷ್ಕಾರವಾಗಿದೆ ಗೊತ್ತಾ? ಮಂಗಳೂರಿನ ಸಂಸದ ನಳಿನ್‌ಕುಮಾರ್ ಕಟೀಲು ಮತ್ತು ಚೆಡ್ಡಿ ಶಾಸಕಿ ಮಲ್ಲಿಕಾ ಪ್ರಸಾದ್ ಎಂಬಿಬ್ಬರನ್ನೇ ಸಾಕು; ಕರಾವಳಿಯ ಅಷ್ಟೂ ಬಿಜೆಪಿ ಸಂಸದ-ಮಂತ್ರಿಗಳ ಗುಣ-ಧರ್ಮ-ಚಾರಿತ್ರ್ಯ-ಚಹರೆ ಮುತ್ತದೆ! ಕೋಮು ಕಿತಾಪತಿಯನ್ನೇ ಗಂಡಾಗುಂಡಿ ಸುಕ್ಕೆ ಬಂಡವಾಳ ಮಾಡಿಕೊಂಡಿರುವ ಈ ತ್ತರಿಗೆ ಶಾಸಕ-ಸಂಸದಗಿರಿಯ ಕರ್ತವ್ಯ-ಕೆ ಏನೆಂಬುದೇ ಗೊತ್ತಿರಲು ಸಾಧ್ಯವಿಲ್ಲ ಬಿಡಿ. ನಿಷ್ಠ ಮಾನ-ಮರ್ಯಾದೆ-ಮನುಷ್ಯತ್ವವೂ ವುದು ದಕ್ಷಿಣ ಕನ್ನಡಕ್ಕೆ ಕೇಡುಗಾಲವೇ ಸರಿ!!

ಳಿಯ ಅಷ್ಟೂ ಬಿಜೆಪಿ ಶಾಸಕ-ಸಂಸದ-ಮಂತ್ರಿಗಳ ಸ್ಟರ್ ಆರೆಸ್ಸೆಸ್ ಡಾನ್ ಡಾ.ಕಲ್ಲಡ್ಕ ಭಟ್ಟ ಎಂಬ ವೈದಿಕವಾದಿ. ಈ ಮನೆಹಾಳರ ಗುರು ಕಲ್ಲಡ್ಕ ಭಟ್ಟನ ದ ಅಸಲಿ ಅವತಾರ ತೀರಾ ನ್ನೆ ಆತನ ಅಡ್ಡೆ ಬಂಟ್ವಾಳದಲ್ಲೇ ವಾಗಿತ್ತು. ಈಗ ಆತನ ಭಾನ್ಗಡಿ ಷ್ಯ-ಶಿಷ್ಯೆಯರಾದ ಸಂಸದ ನಳಿನ್ ಶಾಸಕಿ ಮಲ್ಲಿಕಾಳ ಕ್ರಿಮಿನಲ್ ಸಂಸ್ಕೃತಿ ವಾಗಿ ಹೋಗಿದೆ! ಕೋಮು ರರ ಕರ್ಮಭೂಮಿಯಂತಾಗಿರುವ ಪುತ್ತೂರು ಏರಿಯಾದಲ್ಲಿ ತಮ್ಮ ನಡೆಸುವ ಕಮ್ಯುನಲ್ ಚರಣೆಗೆ ಕಡಿವಾಣ ಹಾಕುತ್ತಿರುವ ಖಡಕ್ ಅಮಿತ್‌ಕುಮಾರ್ ಸಿಂಗ್ ಮೇಲೆ ಈ ಕ್ ನಳಿನ್ ಹಾಗೂ ಮಳ್ಳಿ ಮಲ್ಲಿಕಾ ಯೇ ಮುರಕೊಂಡು ಬಿದ್ದಿದ್ದಾರೆ! ಅಷ್ಟೇ ಅಲ್ಲ, ಮಡದಿ ಒಬ್ಬರೇ ಮನೆಯಲ್ಲಿದ್ದಾಗ ಆಕೆಗೆ ದರಿಸಿ ಹಿಂದೂತ್ವದ ತೀಟೆ ತೀರಿಸಿಕೊಂಡಿದ್ದಾರೆ!!



ಆಗಿದ್ದೇನು?

ಜನವರಿ 22ರ ಶನಿವಾರ. ಭ್ರಷ್ಟ ಸಿಎಂ ಯಡ್ಡಿ ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡಿದ್ದ ರ ಕ್ರಮ ಪ್ರತಿಭಟಿಸಿ ಬಿಜೆಪಿ ಕರ್ನಾಟಕ ಬಂದ್‌ಗೆ ದ್ದ ಕೆಟ್ಟದಿನ. ಅಂದು ಕರಾವಳಿಯ ವಿವಿಧೆಡೆ ವಾರದ ಮಂಗ ಸಂಸ್ಥೆಗಳು ಪುಂಡಾಟಿಕೆ ನಡೆಸಿದ್ದರು. ಕ್ರಿಶ್ಚಿಯನ್ ಹೆಂಗಸೊಬ್ಬಳ ಮಾನಭಂಗಕ್ಕೆ ದಿ ಗ್ಯಾಂಗ್ ಪ್ರಯತ್ನಿಸಿತ್ತು; ಬಂಟ್ವಾಳದ ಮಸೀದಿ ನಾಕಾರಣ ಕಲ್ಲು ತೂರಿ ಕ್ಯಾತೆ ತೆಗೆದಿತ್ತು. ಈ ೋರರ ಖಚಿತ ಮಾಹಿತಿ ಪಡೆದುಕೊಂಡು ಉಪವಿಭಾಗದ ಎಎಸ್‌ಪಿ ಅಮಿತ್ ಸಿಂಗ್ ಬಲೆ ಬೀಸಿದ್ದರು. ಈ ಅನಾಚಾರಿ ದೊಂಬಿ ಕಲ್ಲಡ್ಕ ಭಟ್ಟನ ಹಿಂದೂತ್ವದ ಗರಡಿಯಲ್ಲಿ ಗುದು ಕಲಿತವರು. ಇವರಿಗೆಲ್ಲಾ ಸಂಸದ ನಳಿನ್ ಬಲಗೈ ಬಂಟ, ಬಂಟ್ವಾಳ ನಗರಾಭಿವೃದ್ಧಿ (ಬುಡಾ)ದ ಅಧ್ಯಕ್ಷ ಗೋವಿಂದ ಪ್ರಭು ಎಂಬ ಪಾತಕಿಯೇ ಲೀಡರ್!

ನಳಿನ್, ಶಾಸಕಿ ಮಲ್ಲಿಕಾ ಬುಡಾ ಅಧ್ಯಕ್ಷ ಪ್ರಭು ಮತ್ತವರ ಪರಮೋಚ್ಛ ಬಾಸ್ ಕಲ್ಲಡ್ಕ ತಕಿಗಳ ಬಂಧಿಸದಂತೆ ಪೊಲೀಸರಿಗೆ ಪ್ರೆಶರ್ ರು. ಇದಕ್ಕೆ ಎಎಸ್‌ಪಿ ಅಮಿತ್ ಬಗ್ಗುವಂತೆ ಆಗ "ನಾವೇ ಆರೋಪಿಗಳ ತಂದು ಡಿಸುತ್ತೇವೆ... ಸ್ವಲ್ಪ ಕಾಲ ತಡೆಯಿರಿ..." ಎಂದು ವಿನಂತಿಸಿಕೊಂಡರು. ಆದರೆ ಪುಂಡರನ್ನು ಣೆಗೆ ತಂದೊಪ್ಪಿಸಲೇ ಇಲ್ಲ. ಇದು ಬಂಧನಕ್ಕೆ ವ ತಂತ್ರವೆಂದು ಅಮಿತ್‌ಗೆ ಗೊತ್ತಾಗಿಹೋಯ್ತು. ಆರೋಪಿಗಳ ಬಂಧಿಸಲು ಹೋಗದೆ ಕಾದ ಳಿದ ಜನವರಿ 30 ಮತ್ತು 31ರಂದು ಇಬ್ಬರಂತೆ ಪಾತಕಗಳ ಅರೆಸ್ಟ್ ಮಾಡಿಬಿಟ್ಟರು!!

ಬುಡಾ... ಗೋ...ವಿಂ...ದಾ!!

ಅಧ್ಯಕ್ಷ ಗೋವಿಂದ ಪ್ರಭು, ಸಂಸದ ನಳಿನ್‌ನ ಳಿದೇ ಸೀದಾ ಬಂಟ್ವಾಳ ಠಾಣೆಗೆ ಹೋಗಿದ್ದಾನೆ. ಪಾಲಕರನ್ನು ಬಿಡುವಂತೆ ಪೊಲೀಸರ ಮೇಲೆ ೇರಿಸಿದ್ದಾನೆ. ಆ ಹೊತ್ತಲ್ಲಿ ಎಎಸ್‌ಪಿ ಅಮಿತ್ ಠಾಣೆಯಲ್ಲೇ ಇದ್ದರು. ಆತನೊಂದಿಗೆ ಗೋವಿಂದ ಪ್ರಭು ಮತ್ತವ ಹಿಂದೂ ಮಿತ್ರ ಹರೀಶ ಆಚಾರ್ಯ ಜಗಳಕ್ಕೆ ನಿಂತಿದ್ದಾರೆ. ಎಷ್ಟೇ ಒತ್ತಡ ಹೇರಿದರೂ ಅಮಿತ್ ಬಂಧಿತ ಆರೋಪಿಗಳ ಬಿಡಲು ರೆಡಿಯಾಗಲಿಲ್ಲ.

ಅಷ್ಟಕ್ಕೆ ಸುಮ್ಮನಾಗದ ಗೋವಿಂದ ಪ್ರಭು ಬಿಡದಿದ್ದರೂ ಪರವಾಗಿಲ್ಲ ತಕ್ಷಣ ನ್ಯಾಯಾಲಯಕ್ಕಾದರೂ ಹಾಜರುಪಡಿಸು ವಂತೆ ಎಎಸ್‌ಪಿಗೆ ವಿನಂತಿ ಮಾಡಿದ್ದಾನೆ. ಬಂಧಿತರನ್ನು ವಿಚಾರಣೆಗೊಳಪಡಿಸಿದರೆ ತನ್ನ ಮತ್ತು ಸಂಸದ ನಳಿನ್ ಚಿತಾವಣೆ ಹೂರಣ ಹೊರಬೀಳುತ್ತದೆಂಬ ಅಂತರಂಗದ ಆತಂಕ ಪ್ರಭುವಿನದಾಗಿತ್ತು. ವಿಚಾರಣೆಗೆ ಒಳಪಡಿಸಬೇಡಿ ಎಂದು ಹೇಳಲು ನೀನ್ಯಾರು? ಇಲ್ಲಿಂದ ತೊಲಗು ಎಂದು ಪ್ರಭುನ ಕ್ರಿಮಿನಲ್-ಕಮ್ಯುನಲ್ ಪುರಾಣ ಗೊತ್ತಿದ್ದ ಎಎಸ್‌ಪಿ ಅಮಿತ್ ಗುಟುರು ಹಾಕಿದ್ದಾರೆ.

ಗೋವಿಂದ ಪ್ರಭು ಎಂಬ ಉಂಡಾಡಿ ಗುಂಡಣ್ಣ

ಮತೋನ್ಮತ್ತ ಪ್ರತಿಭಟನೆ




ಅಮಿತ್ ಪುಡಿ ಪುಢಾರಿ ಪ್ರಭುಗೆ ಮೂರು ಕಾಸಿನ ಕಿಮ್ಮತ್ತೂ ಕೊಡದೆ ಠಾಣೆಯಿಂದ ಓಡಿಸಿದ್ದರು. ಇದಿಷ್ಟೇ ಸಾಕಾಯ್ತು. ಆರಂಭದಿಂದಲೂ ಅಮಿತ್ ಸಿಂಗ್‌ರ ಕಂಡರಾಗದ ಬಿಜೆಪಿ-ಆರೆಸ್ಸೆಸ್-ಭಜರಂಗಿ ಕೋಳಿಗೆ! ಈತ ತಮ್ಮ ಮಾತೆಂದೂ ಕೇಳುವುದಿಲ್ಲ. ಹಾಗಾಗಿ ಪುತ್ತೂರಿನಿಂದ ಎತ್ತಂಗಡಿ ಮಾಡಿಸಲೇ ಬೇಕೆಂದು ಆಡಳಿತಾರೂಢ ಬಿಜೆಪಿ ಭೂಪರು ಸಮಯ ಸಾಧಿಸುತ್ತಲೇ ಇದ್ದರು! ಪ್ರಭು ಪ್ರಕರಣದಿಂದ ದೊಡ್ಡ ಅಪಮಾನ ಆತನ ಅನ್‌ಪಡ್ ಮುಖಂಡ-ಸಂಸದ ನಳಿನ್ ಕಟೀಲ್‌ಗೆ ಆಗಿತ್ತು!

ಪ್ರಭು ಠಾಣೆಯಿಂದ ಹೊರಬಂದ ತಕ್ಷಣವೇ ಆರೆಸ್ಸೆಸ್ ಕ್ಯಾಪ್ಟನ್ ಕಲ್ಲಡ್ಕ ಭಟ್-ಸಂಸದ ನಳಿನ್- ಶಾಸಕಿ ಮಲ್ಲಿಕಾ



ಎಎಸ್‌ಪಿ ಅಮಿತ್ ಮನೆ ಮುಂದೆ ಮಧ್ಯರಾತ್ರಿಯ ಮಸಲತ್ತು...

ಠಾಣೆಗೆ ಬಂದು ಕೋಮು ಗಲಭೆ ಆರೋಪಿಗಳ ರಕ್ಷಣೆ ನಿಂತಾಗಲೇ ಎಎಸ್‌ಪಿ ಅಮಿತ್‌ರ ಮೈ ಉರಿದು ಹೋಗಿತ್ತು. ನೈತಿಕತೆ-ಸಾಮಾಜಿಕ ಗೌರವ ಇಲ್ಲದ ಪಕ್ಕಾ ಪೋಕರಿ ಗಿರಾಕಿ ಪ್ರಭು ರೋಪು ಹಾಕಿದಾಗಂತೂ ಪ್ರಭು ಮೇಲೆ ಒಂಚೂರು ಒರಟಾಗೇ ಮಾತಾಡಬೇಕಾಗಿ ಬಂದಿತ್ತು. ಗೋವಿಂದ ಪ್ರಭು ಮೇಲೆ ಬಂಟ್ವಾಳ ಪೊಲೀಸ್ ಸ್ಟೇಷನ್ ಒಂದರಲ್ಲೇ ಬರೋಬ್ಬರಿ ಮೂರೂ ಮುಕ್ಕಾಲು ಡಜನ್ ಕ್ರಿಮಿನಲ್ ಮತ್ತು ಕಮ್ಯುನಲ್ ಕೇಸ್ ದಾಖಲಾಗಿದೆ! ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬನಿಗೆ ಹೊಡೆದ ಆರೋಪವೂ ಈತನ ಮೇಲಿದೆ!! ಇಂಥ ಹಿಂದೂತ್ವದ ರಕ್ಷಣೆಯ 'ಸಾಧನೆ'ಗಾಗೇ ಆತನಿಗೆ ಕಲ್ಲಡ್ಕ ಭಟ್ರು ಇನಾಮಾಗಿ 'ಬುಡಾ' ಕಾರು-ಕುರ್ಚಿ ಕೊಡಿಸಿದ್ದಾರೆ.



ಇಂಥ ಹೀನ ಸುಳಿಯವನು ಠಾಣೆಗೆ ಬಂದು ಆರೋಪಿ ಪರ ವಕಾಲತ್ತಿಗಿಳಿದರೆ ಕಾನೂನು ನಿಷ್ಠ ಐಪಿಎಸ್ ಅಧಿಕಾರಿಗೆ ಸಿಟ್ಟು ನೆತ್ತಿಗೇರದೇ ಇದ್ದೀತಾ? ಹಾಗೊಮ್ಮೆ ಅಮಿತ್ ಹರಾಮಿ ಪ್ರಭುಗೆ ಕಪಾಳಮೋಕ್ಷ ಮಾಡಿದರೂ ತಪ್ಪಿಲ್ಲ ಎಂಬ ಅಭಿಪ್ರಾಯ ಬಂಟ್ವಾಳ-ಪುತ್ತೂರು- ಮಂಗಳೂರು ಏರಿಯಾದಲ್ಲಿದೆ. ಆದರೆ ಅಮಿತ್ ಮಾತ್ರ ಗೋವಿಂದ ಪ್ರಭುಗೆ ಬೈಯದೆ-ಹೊಡೆಯದೆ ತೊಲಗು ಅಂತಷ್ಟೇ ದೊಡ್ಡ ಧ್ವನಿಯಲ್ಲಿ ಹೇಳಿದ್ದಾರೆ.

ಪ್ರಸಾದ್ ಸೇರಿ ಈ ಭಾನ್ಗಡಿಯನ್ನು ಎಎಸ್‌ಪಿ ಎತ್ತಂಗಡಿಗೆ ಬಳಸಿಕೊಳ್ಳಲು ಸ್ಕೆಚ್ ಹಾಕಿದ್ದಾರೆ. 'ಎಎಸ್‌ಪಿ ಅಮಿತ್ ದುರಹಂಕಾರಿ... ಬಿಜೆಪಿ ಲೀಡರ್-ಬುಡಾ ಅಧ್ಯಕ್ಷ ಗೋವಿಂದ ಪ್ರಭುಗೆ ಠಾಣೆಯಲ್ಲಿ ಹೊಡೆದಿದ್ದಾನೆ.. ಆತನ ಅಮಾನತ್ತು ಮಾಡಬೇಕೆಂದು....' ಒಂದೇ ಸಮನೆ ಬೊಬ್ಬೆ ಹೊಡೆಯಲು ಶುರು ಹಚ್ಚಿಕೊಂಡಿದ್ದಾರೆ. 31-01-2011ರ ಸಂಜೆ ಹೊತ್ತಿಗೆ 500ರಷ್ಟು ಹಿಂದೂಗಳನ್ನು ಠಾಣೆಯೆದುರು ಜಮೆ ಮಾಡಿಸಿದ್ದಾರೆ. ನಿಷ್ಠಾವಂತ ಅಧಿಕಾರಿ ಅಮಿತ್ ವಿರುದ್ಧ ಬಾಯಿಗೆ ಬಂದಂತೆ ಈ ಓರಾಟಗಾರರು ಕೂಗಾಡಿದ್ದಾರೆ. ಮಾಜಿ ಮಂತ್ರಿ-ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ದಂಡಪಿಂಡ ಅಧ್ಯಕ್ಷ ನಾಗರಾಜ್ ಶೆಟ್ಟಿ ಪುಂಡ ಪ್ರತಿಭಟನಾಕಾರರ ಜತೆಗಿದ್ದು ಹುರಿದುಂಬಿಸುತ್ತಿದ್ದುದು ಮೋಜಾಗಿತ್ತು.

ಮಧ್ಯರಾತ್ರಿ ಎಎಸ್‌ಪಿ ಮನೆಗೆ ಮುತ್ತಿಗೆ!!

ಬಂಟ್ವಾಳ ಠಾಣೆ ಎದುರು ಇಷ್ಟೆಲ್ಲ ಮತೋನ್ಮತ್ತ ಪ್ರತಿಭಟನಾ ಪ್ರಹಸನ ನಡೆಸಿದರೂ ನಿರ್ಲಜ್ಜ ಸಂಸದ ನಳಿನ್ ಮತ್ತವನ ಬಂಟ ಗೋವಿಂದ ಪ್ರಭು ಪತಾಲಂಗೆ ತೃಪ್ತಿಯಾಗಲೇ ಇಲ್ಲ. ನಳಿನ್ ಮತ್ತು ಪ್ರಭು ತನ್ನ ಕಪಿ ಸೇನೆಯೊಂದಿಗೆ ಪುತ್ತೂರಲ್ಲಿರುವ ಎಎಸ್‌ಪಿಯ ಕ್ವಾಟ್ರರ್ಸ್ ಬಳಿ ಹೋಗಿದ್ದಾರೆ. ಪುತ್ತೂರು ಆಸುಪಾಸಿನ ಸುಳ್ಯ-ಉಪ್ಪಿನಂಗಡಿ ಭಾಗದ ಭಜರಂಗಿಗಳಿಗೆ ಫೋನಾಯಿಸಿ ಕರೆಸಿಕೊಂಡಿದ್ದಾರೆ. ಸ್ಥಳೀಯ ಚೆಡ್ಡಿ ಶಾಸಕಿ ಮಲ್ಲಿಕಾ ಪ್ರಸಾದ್ ಭಂಡಾರಿ ನಳಿನ್ ಜತೆ ... ಸುಮಾರು 200 ಮಂದಿ ಬಜರ್‌ನಾಕ್-ಭಜರಂಗಿಗಳು ಎಎಸ್‌ಪಿ ಬಿಡಾರದೆದುರು ಸೇರಿದ್ದಾರೆ.

ಎಎಸ್‌ಪಿ ಅಮಿತ್ ಬಂಟ್ವಾಳದಲ್ಲಿರುವುದು ... ಆತನ ಹೆಂಡತಿ ಒಬ್ಬರೇ ಪುತ್ತೂರಿನ ಮನೆಯಲ್ಲಿರುವ್ದು ಸಂಸದ ನಳಿನ್ ಮತ್ತು ಶಾಸಕಿ ಮಲ್ಲಿಕಾಗೆ ಗೊತ್ತಿ ಆದರೂ ಒಂಟಿ ಹೆಂಗಸಿನ ಮನೆ ಮುಂದ ಜಮಾಯಿಸಿ ಬೆದರಿಸಿದ್ದಾರೆ. ಓರಾಟಗಾರರಂತೂ ಕಂಠಮಟ್ಟ ಕುಡಿದು ತೂರಾಡುತ್ತಿದ್ದರು. ಅಶ್ಲೀಲ ಪದ ಪ್ರಯೋಗಿಸುತ್ತಿದ್ದರು. ಅಮಿತ್‌ರನ್ನಷ್ಟೇ ಅಲ್ಲ ಆತನ ಮಡದಿಗೂ ಮೂದಲಿಸಿ ಬೈದು ಕೇಕೆ ಹಾಕುತ್ತಿದ್ದರು. ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ಮನೆ ಮೇಲೆಸೆದು ಆ ಅಮಾಯಕ ಹೆಂಗಸು ಜೀವಭಯದಲ್ಲಿ ತತ್ತರಿಸುವಂತೆ ಮಾಡಿದ್ದಾರೆ. ದೇಶಭಕ್ತ ಸಂಘಪರಿವಾರಿಗಳು!

ಆಗ ನಡುರಾತ್ರಿ 12ರ ಸಮಯ ಬೇರೆ! ಬಿಜೆಪಿ-ಭಜರಂಗಿ-ಚೆಡ್ಡಿಗಳ ಭಯೋತ್ಪಾದಕ ಸಂಸ್ಕೃತಿ ಎಎಸ್‌ಪಿ ಅಮಿತ್ ಸಿಂಗ್ ಮನೆ ಮುಂದೆ ಮಧ್ಯರಾತ್ರಿ ಅನಾವರಣಗೊಂಡಿತ್ತು! ಅಲ್ಲಿಗೆ ದಾಂಧಲೆಕೋರರ ನೇತೃತ್ವ ವಹಿಸಿದ ನಳಿನ್ ಮತ್ತು ಮಲ್ಲಿಕಾ ಸಂಸದ-ಶಾಸಕಿಯಾಗಲು ಅನರ್ಹರೆಂಬುದೂ ಸಾಬೀತಾಗಿ ಹೋಗಿದೆ!!

ಶಾಸಕಿ-ಸಂಸದ ಮೇಲೆ ಕಂಪ್ಲೇಂಟು!

ಸಂಸದ ನಳಿನ್-ಶಾಸಕಿ ಮಲ್ಲಿಕಾ ಮತ್ತು ಮಾಜಿ ಮಂತ್ರಿ ಗೋಣಿವಾಗ ತಮ್ಮ ಹಿಂದೂತ್ವದ ಬೇಳೆ ಬೇಯಿಸಿಕೊಳ್ಳಲು ದಕ್ಷ ಪೊಲೀಸ್ ಅಧಿಕಾರಿ ವಿರುದ್ಧ ಮಾಡಿದ ಪ್ರತಿಭಟನೆ ಅನಾಗರಿಕವಷ್ಟೇ ಅಲ್ಲ ಅಮಾನುಷ ಕೂಡ. ಗಂಡಸರು ಮನೆಯಲ್ಲಿಲ್ಲದಿದ್ದಾಗ ನಿಷ್ಪಾಪಿ ಹೆಂಗಸು ಮತ್ತು ಮನೆಯವರನ್ನು ಗ್ಯಾಂಗ್ ಕಟ್ಟಿಕೊಂಡು ಹೋಗಿ ಬೆದರಿಸುವುದು ಹಿಂದೂ ಸಂಸ್ಕೃತಿಯಾ? ಹಾಗಂತ ಪುತ್ತೂರು-ಬಂಟ್ವಾಳದ ಜನರೇ ಬಿಜೆಪಿ ಭೂಪರಿಗೆ ಕ್ಯಾಕರಿಸಿ ಉಗಿಯುತ್ತಿದ್ದಾರೆ.

ಹಿಂದೂ ಹರಾಮಿಗಳ (ಅ)ನೈತಿಕ ಪೊಲೀಸ್‌ಗಿರಿ ಮಟ್ಟಹಾಕಿದ್ದ ಎಎಸ್‌ಪಿ ಅಮಿತ್‌ರನ್ನು ಬೆದರಿಸಿ ಓಡಿಸಲು ಮಾಡಬಾರದ್ದೆಲ್ಲ ಮಾಡಿದ ಸಂಸದ ನಳಿನ್ ಮತ್ತು ಶಾಸಕಿ ಮಲ್ಲಿಕಾ ಮೇಲೀಗ ದೂರು ದಾಖಲಿಸಲಾಗಿದೆ. ಎಎಸ್‌ಪಿ ಅಮಿತ್ ಫೆಬ್ರವರಿ 1ರಂದು ಪುತ್ತೂರು ಠಾಣೆಯಲ್ಲಿ ಅನಾಹುತಕಾರಿ ಜನಪ್ರತಿನಿಧಿಗಳ ಮೇಲೆ ಕಂಪ್ಲೇಂಟ್ ಜಡಿದಿದ್ದಾರೆ. ಆದರೆ ಯಡ್ಡಿಯ ಎಡವಟ್ಟು ಸರ್ಕಾರ ತನಗೆ ಬೇಕಾದಂತೆ ಕುಣಿಸುವ ಕಲ್ಲಡ್ಕ ಭಟ್ಟನ ಆರೆಸ್ ಪಡೆ ಆ ದೂರು ಕೆಲಸಕ್ಕೆ ಬಾರದಂತೆ ಮಾಡಿಬಿಟ್ಟಿದೆ. ದೂರು ಕೊಟ್ಟು ಎಂಟ್ಹತ್ತು ದಿನ ಕಳೆದರೂ ಎಫ್‌ಐಆರ್ ಪೊಲೀಸ್ ಇಲಾಖೆ ಹಾಕಿಲ್ಲ. ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ಬಲಿ ಕೊಟ್ಟಾದರೂ ಹಿಂದೂ ಗೂಂಡಾಗಳ ರಕ್ಷಿಸುವ ಬುರ್ನಾಸ್ ನೀತಿ ನಿಲುವು ಯಡ್ಡಿ ಸರ್ಕಾರದ್ದು!!

ಸಂಸದ ನಳಿನ್-ಶಾಸಕಿ ಮಲ್ಲಿಕಾರ ಭಜರಂಗಿ ಬಣದ ಭಯಾನಕ-ಅನಾಗರಿಕ ಪ್ರತಿಭಟನೆ ಬಿಹಾರ ಮೂಲದ ಎಎಸ್‌ಪಿ ಅಮಿತ್ ಸಿಂಗ್‌ರಲ್ಲಿ ಅಚ್ಚರಿ ಮೂಡಿಸಿದೆ. ಇದು ಬಿಹಾರವಾ? ಕರ್ನಾಟಕವಾ? ಎಂದಾತ ಉದ್ಗರಿಸುತ್ತಿದ್ದಾರೆ. ಹಾಗೊಮ್ಮೆ ಎಎಸ್‌ಪಿ ವಿರುದ್ಧ ಪ್ರತಿಭಟನೆ ಮಾಡಲೇ ಬೇಕೆಂದಿದ್ದರೆ ಎಸ್‌ಪಿ-ಎಎಸ್‌ಪಿ-ಡಿಸಿ ಕಚೇರಿ ಅಥವಾ ಸಾರ್ವಜನಿಕ ಸ್ಥಳ ಯಾವುದೂ ಇರಲಿಲ್ಲವೇ? ಎಎಸ್‌ಪಿ ಮನೆ ಮುಂದೆ, ಅದೂ ನಡುರಾತ್ರಿ ಹೊತ್ತು! ಹೆಂಗಸರಷ್ಟೇ ಮನೆಯಲ್ಲಿರುವಾಗ ಎಂಪಿ ನಳಿನ್-ಎಮ್ಮೆಲ್ಲೆ ಮಲ್ಲಿಕಾ ತಮ್ಮ ಅಮಲುಕೋರ ಸಹಚರರೊಂದಿಗೆ ಎಎಸ್‌ಪಿ ಮನೆಗೆ ಘೇರಾವ್ ಹಾಕಿದ್ದು ಅಕ್ಷಮ್ಯವೇ ಸರಿ! ಇಂಥ ಹೊಣೆಗೇಡಿ ಪಾಪಿಗಳನ್ನು ಶಾಸಕಿ-ಸಂಸದನ ಮಾಡಿಕೊಂಡ ತಪ್ಪಿಗೆ ದಕ್ಷಿಣ ಕನ್ನಡದ 'ಜಾಣರು' ಹಣೆ-ಹಣೆ ಚಚ್ಚಿಕೊಂಡು ಪ್ರಾಯಶ್ಚಿತ್ತ ಅನುಭವಿಸಬೇಕಾಗಿ ಬಂದಿರುವುದು ದುರಂತವೇ ಸರಿ. ಸಾಮಾಜಿಕ-ರಾಜಕೀಯ ಬದ್ಧತೆ-ನೈತಿಕತೆಯಿಲ್ಲದ ಹಿಂದೂತ್ವದ ಹಿಂಸೋನ್ಮಾದವೇ ಕಸುಬಾಗಿಸಿಕೊಂಡಿರುವ ನಳಿನ್ ಮತ್ತು ಮಲ್ಲಿಕಾ ಸಂಸದ-ಶಾಸಕಿಯಾಗುವುದಿರಲಿ ಗ್ರಾಮ ಪಂಚಾಯ್ತಿ ಮೆಂಬರಿಕೆಗೂ ಯೋಗ್ಯತೆಯಿಲ್ಲದ ಅನಾಹುತಕಾರಿಗಳು!

ಹಿಂದೂತ್ವ ದಕ್ಷಿಣ ಕನ್ನಡಕ್ಕೆ ಇನ್ನೆಂಥ ಕೇಡು ಮಾಡಲು ಕಾದಿದೆಯೋ? ಹಾಗಂತ ಕರಾವಳಿಗರೀಗ ಆತಂಕಿತರಾಗಿದ್ದಾರೆ!

• ನಹುಶ

ಪೊಲೀಸರ ಪರದಾಟ!

ಕೋಮು ಗೂಂಡಾಗಳ ಪಟಾಲಂ ಕಟ್ಟಿಕೊಂಡು ಮಂಗಳೂರು ಸಂಸದ ನಳಿನ್‌ಕುಮಾರ್ ಕಟೀಲು, ಪುತ್ತೂರು ಶಾಸಕಿ ಮಲ್ಲಿಕಾ ಪ್ರಸಾದ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗರಾಜ್ ಶೆಟ್ಟಿ, ಪುಂಡುಕರ ಕಟ್ಟಿಕೊಂಡು ಬಂಟ್ವಾಳದ ಪೊಲೀಸ್ ಠಾಣೆ ಮತ್ತು ಪುತ್ತೂರಿನ ಎಎಸ್‌ಪಿಯ ಮನೆ ಎದುರು ನಡೆಸಿದ ಪ್ರತಿಭಟನಾ ನಡೆಯಲ್ಲ, ಅದು ಈ ದೇಶದ ಕಾನೂನು-ಕಟ್ಟಳೆ ಗೇಲಿ ಮಾಡಿ ಹಾರಾಡಿದ ಪ್ರಹಸನ! ಕಾನೂನು ಉಲ್ಲಂಘಿಸಿ ಹಿಂದೂತ್ವದ ಹರಾಮಿತನ ಮಾಡುವುದರಲ್ಲಿ ಕರಾವಳಿಯ ಸಂಘಪರಿವಾರ-ಬಿಜೆಪಿ ಕೋಳಿ ಫೇಮಸ್.

ಸಂಸದ ನಳಿನ್-ಶಾಸಕಿ ಮಲ್ಲಿಕಾ ಬಂಟ್ವಾಳ-ಪುತ್ತೂರಲ್ಲಿ ನಡೆಸಿದ ಹಂಗಾಮಾ ಇಡೀ ರಾಜ್ಯದ ಪೊಲೀಸ್ ವ್ಯವಸ್ಥೆಗೆ ಪಂಥಾಹ್ವಾನ ನೀಡಿದೆ. ಆದರೂ ಪೊಲೀಸ್ ವ್ಯವಸ್ಥೆಯೇಕೋ ನರಸತ್ತಂತೆ ಬಿದ್ದುಕೊಂಡಿದೆ. ಸಾಮಾನ್ಯ ಸಂದರ್ಭದಲ್ಲಾಗಿದ್ದರೆ ಇದೇ ಪೊಲೀಸರು ಪಾಪದವರ ಮೇಲೆ ನಿರ್ದಯವಾಗಿ ಓಂಸೆ-ದೌರ್ಜನ್ಯ ನಡೆಸುತ್ತಿದ್ದರು. ಆದರೆ ನಳಿನ್-ಮಲ್ಲಿಕಾ ಪ್ರಹಸನದಲ್ಲಿ ಪೊಲೀಸರು ತಮ್ಮ ಪ್ರತಿಷ್ಠೆ-ಖಾಕಿ ಗೌರವ ಎರಡೂ ರಕ್ಷಿಸಿಕೊಳ್ಳಲಾಗದೇ ಸಾರ್ವಜನಿಕರೆದುರು ನಗೆ ಪಾಟಲಿಗೀಡಾಗಿದ್ದಾರೆ. ತನ್ನ ಐಪಿಎಸ್ ದರ್ಜೆಯ ಅಧಿಕಾರಿ ಮನೆ ಎದುರು ನಡುರಾತ್ರಿ ಪುಂಡರು-ಕುಡುಕರು ಗದ್ದಲ ಎಬ್ಬಿಸಿದರೂ ಅದನ್ನು ನಿಯಂತ್ರಿಸಲಾಗದ ಘೋರ ಪರಿಸ್ಥಿತಿ ಜಿಲ್ಲಾ ಪೊಲೀಸರದಾಗಿದೆ!! ಮಂಗಳೂರಲ್ಲೇ ಎಸ್‌ಪಿ ಸುಬ್ರಹ್ಮಣ್ಯೇಶ್ವರ ರಾವ್, ಐಜಿಪಿ ಅಲೋಕ್-ಮೋಹನ್ ಇದ್ದರೂ ಬಿಜೆಪಿ-ಭಜರಂಗಿ ಅರ್ಭಟದೆದುರು ಹೇತ್ಲಾಂಡಿಗಳಂತಾಗಿ ಹೋಗಿದ್ದರು.

ದಕ್ಷಿಣ ಕನ್ನಡ ಪೊಲೀಸರು ಹಿಂದೆಲ ಸಂಘ ಪರಿವಾರದ ಕಾನೂನುಬಾಹಿರ ಆಜ್ಞೆಗಳನ್ನೆಲ್ಲ ಶಿರಸಾ ಪಾಲಿಸಿಕೊಂಡಿದ್ದರ ಪರಿಣಾಮವಿದು. ತಮ್ಮ ಮಾನವನ್ನೂ ಕಾಪಾಡಿಕೊಳ್ಳಲಾಗದಂಥ ಆಳುವ ವರ್ಗದ ಗುಲಾಮಗಿರಿ ... ಶ್ರೇಯಸ್ಕರವಲ್ಲ!!

ಪಂಪ ಪ್ರಶಸ್ತಿಯೂ ಲಿಂಗಾಯತ ಸಾಯ್ತಿ ಲಾಬಿಯೂ!



"ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದು ಎದೆ ತುಂಬಿ ಪಂಪ ಮಹಾಕವಿ ಬನವಾಸಿಯನ್ನು ಹಾಡಿ ಹೊಗಳಿದ್ದರು. ಆತನ ಸಾಹಿತ್ಯ ಮತ್ತು ಜೀವ-ಜೀವನದೊಂದಿಗೆ ಕನ್ನಡದ ಮೊದಲ ರಾಜಧಾನಿಯಾದ ಈ ಬನವಾಸಿಗೆ ಅವಿನಾಭಾವಸಂಬಂಧ ವಿತ್ತು. ಪಂಪ ಕವಿ ಹುಟ್ಟಿದ್ದು ಗದಗ ಜಿಲ್ಲೆಯ ಅಣ್ಣಿಗೇರಿಯಲ್ಲೊ ಅಥವಾ ಆತನ ಮೂಲ ಆಂಧ್ರಪ್ರದೇಶವೋ ಎಂಬ ಜಿಜ್ಞಾಸೆ ಇವತ್ತಿಗೂ ಜೋರಾಗೇ ಇದೆ. ಆದರೆ ಪಂಪ ಅಂದು ಬದುಕಿನ ಬಹುಕಾಲ ಕಳೆದದ್ದು ಮಾತ್ರ ಇಂದಿನ ಉತ್ತರ ಕನ್ನಡದ ಬನವಾಸಿ ದೇಶದಲ್ಲೆಂಬುದು ಮಾತ್ರ ನಿರ್ವಿವಾದ!

ಸರ್ಕಾರಿ ಉತ್ಸವ 'ಸಂಸ್ಕೃತಿ' 1990ರ ದಶಕದಲ್ಲಿ ಶುರುವಾದಾಗ ಬನವಾಸಿಯಲ್ಲಿ ಕದಂಬೋತ್ಸವ ಆಚರಿಸುವ ಪರಂಪರೆಯೂ ಆರಂಭವಾಗಿತ್ತು. ಆ ಉತ್ಸವದಲ್ಲಿ ಕನ್ನಡ ಸಾಹಿತ್ಯದ ಪರಮೋಚ್ಛ ಪ್ರಶಸ್ತಿಯನ್ನು ಪಂಪನ ಹೆಸರಲ್ಲಿ ಪ್ರದಾನಮಾಡುತ್ತ ಸರ್ಕಾರವೂ ಬಂದಿತ್ತು. ಇದು ಸರಿಯಾದ ನಿರ್ಧಾರವೆಂದು ಸಾಹಿತ್ಯ ಸಾಂಸ್ಕೃತಿಕ ವಲಯವಷ್ಟೇ ಅಲ್ಲ, ಆಡಳಿತಗಾರರು, ಜನಸಮೂಹವೂ ಎರಡು ಮಾತಿಲ್ಲದೇ ಒಪ್ಪಿಕೊಂಡಿತ್ತು. ಹೀಗೆ ಬನವಾಸಿಯನ್ನೇ ಪಂಪ ಪ್ರಶಸ್ತಿ ಪ್ರದಾನ ಆಯ್ಕೆ ಮಾಡಲು ಸ್ಥಳ ಪುರಾಣವೇ ಪ್ರಮುಖ ಕಾರಣವಾಗಿತ್ತು.

ಬನವಾಸಿ ಅಚ್ಚ ಕನ್ನಡ ದೊರೆಗಳಾದ ಕದಂಬರ ನಾಡಾಗಿತ್ತು! ಕನ್ನಡದ ಮೊದಲ ರಾಜಧಾನಿಯಾಗಿತ್ತು. ಪಂಪ ಕವಿಯ ನಲ್ಮೆಯ ನೆಲೆವೀಡಾಗಿತ್ತು. ತನ್ನ ಬದುಕು-ಬರಹದ ಹೆಚ್ಚು ಹೊತ್ತು ಬನವಾಸಿಯಲ್ಲೇ ಕಳೆದಿದ್ದ ಪಂಪ ಅದೆಷ್ಟು ಈ ಕಾಡು-ಕೊಳ್ಳ-ಶುಕ-ಪಿಕಗಳ ನೆಲವನ್ನು ಹಚ್ಚಿಕೊಂಡಿದ್ದನೆಂದರೆ, ಆತನ ಕಾವ್ಯದಲ್ಲೆಲ್ಲ ಬನವಾಸಿಯೇ ಹಾಸುಹೊಕ್ಕಾಗಿತ್ತು. ಹುಟ್ಟಿದರೆ ಬನವಾಸಿಯಲ್ಲೇ ಹುಟ್ಟಬೇಕೆಂದು ಸಾಹಿತ್ಯದಲ್ಲಿ ಹೇಳಿದ್ದಾರೆ. ಈ ಸಾಹಿತ್ಯಕ-ಸಾಂಸ್ಕೃತಿಕ ರಾಜಕೀಯ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಬನವಾಸಿಯಲ್ಲಿ ಕದಂಬೋತ್ಸವ ಆಚರಿಸುವುದಾಗಲಿ, ಆ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಜ್ಞಾನಪೀಠ ಪ್ರಶಸ್ತಿ ಎಂಬ ಹೆಗ್ಗಳಿಕೆಯ ಪ್ರಶಸ್ತಿ ಕನ್ನಡದ ಮೇರು ಸಾಹಿತಿಯೊಬ್ಬರಿಗೆ ಕೊಡುವುದಾಗಲಿ ಅರ್ಥಪೂರ್ಣವಾಗಿತ್ತು!

ಆದರೆ ಸಾಹಿತ್ಯ-ಸಾಂಸ್ಕೃತಿಕ ಪರಿಸರದಲ್ಲೂ ಜಾತಿ ರಾಜಕೀಯ ಮಾಡಿ ಬೇಳೆ ಬೇಯಿಸಿಕೊಳ್ಳುವ ಒಂದಿಷ್ಟು ಬೂಸಾ 'ಸಾಯ್ತಿ'ಗಳ ಕೆಟ್ಟ ದೃಷ್ಟಿ ಬನವಾಸಿ ಮೇಲೆ ಆರಂಭದಲ್ಲೇ ಬಿದ್ದಿತ್ತು. 1996ರಿಂದ ಪಂಪ ಪ್ರಶಸ್ತಿ ಬನವಾಸಿ ಉತ್ಸವದಲ್ಲಿ ಪ್ರದಾನಮಾಡುತ್ತಾ ಬರಲಾಗಿತ್ತು. ಶುರುವಿನ ಐದಾರು ವರ್ಷ ತೆಪ್ಪಗಿದ್ದ ಈ ಲಿಂಗಾಯತ ಸಾಯ್ತಿಗಳು ಬನವಾಸಿ ಬದಲಿಗೆ ಪಂಪನ ಹುಟ್ಟೂರಾದ ಅಣ್ಣಿಗೇರಿಯಲ್ಲಿ ಪಂಪ ಪ್ರಶಸ್ತಿ ಪ್ರದಾನವಮಾಡಬೇಕೆಂಬ ವರಾತ ಹಚ್ಚಿಕೊಂಡಿದ್ದರು. ಒಂದು ದಶಕದ ಹಿಂದೆಯೇ ಪಂಪ ಪ್ರಶಸ್ತಿ ಪ್ರದಾನಸಮಾರಂಭ ಅಣ್ಣಿಗೇರಿಗೆ ಎತ್ತಂಗಡಿ ಮಾಡಿಸಲು ಸರ್ಕಾರಿ ಮಟ್ಟದಲ್ಲೇ 'ಸಾಹಿತ್ಯ ರಾಜಕೀಯ' ಲಾಬಿ ಬಿರುಸಾಗಿ ನಡೆದಿತ್ತು. ನಾಲ್ಕು ವರ್ಷದ ಹಿಂದಂತೂ ಅಣ್ಣಿಗೇರಿಯಲ್ಲೇ ಪ್ರಶಸ್ತಿ ಫಂಕ್ಷನ್ ಮಾಡು ವಂತೆ ದೊಡ್ಡ ರಂಪ-ರಗಳೆ ಲಿಂಗಧಾರಿ ಸಾಹಿತ್ಯ ಪುಢಾರಿಗಳು ಎಬ್ಬಿಸಿದ್ದರು.



ಉತ್ತರ ಕರ್ನಾಟಕದ ಲಿಂಗಾಯತ ಸಾಹಿತಿಗಳ ಈ ಕಿತಾಪತಿ ವಿರುದ್ಧ ಉತ್ತರ ಕನ್ನಡಿಗರು ತಿರುಗಿ ಬಿದ್ದಿದ್ದರು. ಪ್ರತಿಭಟನೆಗಳೂ ಆದವು. ಬನವಾಸಿ ತಾಲ್ಲೂಕಾಗಿಸಬೇಕು; ಆಳುವವರ-ಸಾರಸ್ವತ ಲೋಕದವರ ತಾತ್ಸಾರದಿಂದ ಹಾಳುಕೊಂಪೆಯಂತಾಗಿರುವ ಬನವಾಸಿ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕೆಂದು ಹೋರಾಡುತ್ತಿರುವ ಶಿರಸಿ ಭಾಗದ ಜನರಂತೂ ಪಂಪ ಪ್ರಶಸ್ತಿ ಪ್ರದಾನ ಸಮಾರಂಭ ಅಣ್ಣಿಗೇರಿಗೆ ಒಯ್ಯುವ ಷಡ್ಯಂತ್ರ ಕೇಳಿ-ಕಂಡು ಕೆಂಡಾಮಂಡಲವಾಗಿದ್ದರು. ಈ ಪ್ರತಿಭಟನೆಯ ಕಾವು ಆಳುವ ಮಂದಿಯನ್ನು ಬೆಚ್ಚಿಬೀಳಿಸಿತ್ತು. ಹೀಗಾಗಿ ಸ್ಥಳಾಂತರದ ಸಂಚು ವಿಫಲವಾಗಿತ್ತು.

ಹೇಗಾದರೂ ಮಾಡಿ ಈ ಮಹತ್ವದ ಪ್ರಶಸ್ತಿ ಸಮಾರಂಭ ಬನವಾಸಿಯಲ್ಲಿ ನಡೆಯದಂತೆ ಮಾಡೇ ತೀರಬೇ... ಬುರ್ನಾಸ್ ಹಠಕ್ಕೆ ಬಿದ್ದಿದ್ದ ಒಂದಿಷ್ಟು ಜಾತಿವಾದಿ ಲಿಂಗಾ... ಒಳಗೊಳಗೇ ಕರಾಮತ್ತು ಮಾಡುತ್ತಲೇ ಇದ್ದರು. ... ಬೆಂಗಳೂರಲ್ಲಿ ಮುಗಿದ 77ನೇ ಅಖಿಲ ಭಾರತ ಸಾ... ಸಮ್ಮೇಳನದಲ್ಲಿ ಪಂಪ ಪ್ರಶಸ್ತಿ ಪ್ರದಾನ ಮಾಡುವ ... ಬನವಾಸಿಯಿಂದ ಅಣ್ಣಿಗೇರಿಗೆ ಬದಲಾಯಿಸುವ ಕು... ನಡೆಯಿತು.. ಪಂಪನ ಜನ್ಮಸ್ಥಳವಾದ ಅಣ್ಣಿಗೇರಿಯ... ಪಂಪ ಪ್ರಶಸ್ತಿ ಪ್ರದಾನ ಮಾಡಬೇಕೆಂಬುದು ಕಸಾ... ನಿರ್ಣಯಗಳಲ್ಲಿ ಒಂದಾಗಿವೆ. ಯಾವ ಚರ್ಚೆಯೂ ... ಏಕಾಏಕಿ ಏಕಪಕ್ಷೀಯ ನಿರ್ಧಾರ ಕೈಗೊಳ್ಳಲಾಗಿದೆ.

ಕಸಾಪದ ಜಾತಿ ರಾಜಕೀಯ ಸಹಜವಾಗೇ ... ಕನ್ನಡಿಗರನ್ನು ಅದರಲ್ಲೂ ಬನವಾಸಿ ... ಮಂದಿಯನ್ನು ಕೆರಳಿಸಿದೆ. ಯಡ್ಡಿ ಸರ್ಕಾ... ಲಿಂಗಾಯ ಲಾಬಿ ತನಗೆ ಬೇಕಾ... ಸಾಧಿಸುತ್ತಿರುವು ದರಿಂದ ಎಲ್ಲಿ ಬನ... ಬದಲು ಅಣ್ಣಿಗೇರಿ ಯಲ್ಲಿ ಪಂಪ ... ಪ್ರದಾನ ಆಗಬೇಕೆಂಬ ಸರ್ಕಾರಿ ಆ... ಬಂದುಬಿಡುತ್ತದೋ ಎಂಬ ಆ... ಜಿಲ್ಲೆಯಲ್ಲಿ ಮೂಡಿದೆ. ಪಂಪನ ಜನ್ಮ... ಆಂಧ್ರವೋ? ಅಣ್ಣಿಗೇರಿಯೋ? ಎಂಬ... ಇನ್ನೂ ಸ್ಪಷ್ಟವಾಗದಿರುವಾಗ ಕಸಾಪ ... ಪ್ರಶಸ್ತಿ ಪ್ರದಾನ ಸ್ಥಳ ಬದಲಾವಣೆ ನಿ... ಕೈಗೊಂಡಿರುವುದು ಅಸಮಂ... ಅನಾಹುತಕಾರಿ-ಅವಾಂತರಕಾರಿ ... ಜಿಲ್ಲೆಯ ಹಿರಿಯ ಸಾಹಿತಿಗಳು ಅಭಿಪ್ರಾಯಪಡುತ್ತಿ... ಈ ಹುಚ್ಚು ನಿರ್ಣಯ ವಿರೋಧಿಸಿ ಕನ್ನಡ ಅಭಿ... ಪ್ರಾಧಿಕಾರಕ್ಕೆ-ಕಸಾಪ ಅಧ್ಯಕ್ಷರಿಗೆ ಪ್ರತಿಭಟನಾಪತ್ರ ಬರೆ... ಸಿದ್ಧತೆಯೂ ನಡೆದಿದೆ. ಇನ್ನೊಂದೆಡೆ ಸರ್ಕಾರದಿಂದೇನಾ... 'ಲಿಂಗಾಯತ ಸಾಹಿತ್ಯ ಪರ' ನಿರ್ಧಾರ ಪ್ರಕಟವಾ... ಉಗ್ರ ಹೋರಾಟಕ್ಕೂ ಜನ ರೆಡಿಯಾಗುತ್ತಿದ್ದಾರೆ!

ಬಳ್ಳಾರಿ ಬೆಟ್ಟಿಂಗ್ ದಂಧೆಗೆ ಬಿತ್ತೊಂದು ಹೆಣ!



ಒಂದು ಅಪಹರಣ ಪ್ರಹಸನ ಹತ್ಯೆಯಲ್ಲಿ ಕೊನೆಗೊಂಡು ಬಿಸಿಲನಾಡು ಬಳ್ಳಾರಿಯಲ್ಲಿ ತಲ್ಲಣದ ವಾತಾವರಣ ಸೃಷ್ಟಿಯಾಗಿದೆ. ಇದರೊಂದಿಗೆ ಬಳ್ಳಾರಿಯೊಡಲ ಬಡ್ಡಿ ಬೆಟ್ಟಿಂಗ್ ಮಾಫಿಯಾದ ಕರಾಳ ಮುಖವೂ ಬಯಲಾಗಿದೆ. ಅದೆಂತಹುದೇ ಗಂಭೀರ ಘಟನೆಯಾದರೂ ಇಲ್ಲಿನ ಪೊಲೀಸರು ವರ್ತಿಸುವ ರೀತಿ, ವಿಳಂಬ ನೀತಿ ಹಾಗೂ ಕಂಡದ್ದರಲ್ಲಿ ಕಾಸು ಹುಡುಕುವ ಭ್ರಷ್ಟತನಗಳೂ ಬೆತ್ತಲಾಗಿವೆ.

ಇಂತಹ ಬೆಳವಣಿಗೆಗಳಿಗೆಲ್ಲ ಕಾರಣವಾದದ್ದು ಇಲ್ಲಿನ ವ್ಯಾಪಾರಿ, ಬಡ್ಡಿ-ಬೆಟ್ಟಿಂಗ್ ದಂಧೆಯ ಕುಳ ಪಂಕಜ್ ಜೈನ್ ಎಂಬಾತನ ಅಮಾನುಷ ಹತ್ಯೆ. ಮೂನ್ ಲೈಟ್ ಹೆಸರಿನ ಎಲೆಕ್ಟ್ರಿಕಲ್ ಅಂಗಡಿ ಇಟ್ಟುಕೊಂಡಿದ್ದ ಈತನನ್ನು ಈ ತಿಂಗಳ ಆರಂಭದಲ್ಲೇ ಅಪಹರಿಸಲಾಗಿತ್ತು. ಅದಾದ ಬಳಿಕ ಅಪಹರಣಕಾರರು ಮತ್ತು ಪಂಕಜ್‌ನ ಸಂಬಂಧಿಕರ ನಡುವೆ ನಡೆದ ಸಂಧಾನದಲ್ಲಿ ಲಕ್ಷಾಂತರ ರೂಪಾಯಿ ಕೈ ಬದಲಾಯಿತು. ಆದರೆ ಹಂತಕರು ದುಡ್ಡು ತೆಗೆದುಕೊಂಡೂ ಒತ್ತೆಯಾಳು ಪಂಕಜ್‌ನನ್ನು ಕೊಲೆ ಮಾಡಿದ್ದಾರೆ. ಇದರ ವಿರುದ್ಧ ಬಳ್ಳಾರಿಯ ಗಲ್ಲಿಗಲ್ಲಿಗಳಲ್ಲಿ ಮಾರ್ವಾಡಿಗಳು ದಿನಕ್ಕೊಂದೊಂದು ಟೀಮಿನಂತೆ ಬೀದಿಗಿಳಿಯಹತ್ತಿದ್ದಾರೆ. ಇತರೆ ವರ್ತಕರೂ ಅದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇವರೆಲ್ಲರ ಪ್ರಕಾರ ಪಂಕಜ್ ಒಬ್ಬ ಸಾಮಾನ್ಯ ವ್ಯಾಪಾರಿ.

ಆದರೆ ಪಂಕಜ್ ಜೈನ್ ತೀರಾ ಮಾಮೂಲಿ ವ್ಯಾಪಾರಿಯಲ್ಲ. ಮೂನ್‌ಲೈಟ್ ಎಲೆಕ್ಟ್ರಿಕಲ್ ಅಂಗಡಿಯೊಳಗೆ ಈತ ತರಹೇವಾರಿ ದಂಧೆ ನಡೆಸಹತ್ತಿದ್ದ. ಅದರಲ್ಲಿ ಬಡ್ಡಿ ಮತ್ತು ಬೆಟ್ಟಿಂಗ್ ದಂಧೆ ಪ್ರಮುಖವಾದುದು. ಇಂಥಾ ಪಂಕಜ್‌ನನ್ನು ಅಪಹರಿಸಿ ಕೊಂದು ಕಂಬಿ ಎಣಿಸುತ್ತಿರುವವರ ಇತಿಹಾಸ, ಅವರಿಗೂ ಆತನಿಗೂ ನಡುವಿನ ನಂಟುಗಳನ್ನು ಜಾಲಾಡಿದರೆ ಬಳ್ಳಾರಿ ಸೀಮೆಯಲ್ಲಿ ಗರಿಗೆದರಿರುವ ಬೆಟ್ಟಿಂಗ್ ದಂಧೆಯ ವಿರಾಟ್ ದರ್ಶನವಾಗುತ್ತದೆ. ಪಂಕಜ್ ಕೊಲೆಯಾಗುವುದಕ್ಕೂ ಬೆಟ್ಟಿಂಗ್ ದಂಧೆಯೇ ಮೂಲಕಾರಣ ಎಂಬುದೂ ಮನದಟ್ಟಾಗುತ್ತದೆ.

ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಾ ಅದಕ್ಕೆ ಬಡ್ಡಿ ಲೆಕ್ಕದಲ್ಲಿ ದುಡ್ಡನ್ನೂ ಸರಬರಾಜು ಮಾಡುತ್ತಿದ್ದ ಪಂಕಜ್ ಅದರಿಂದಲೇ ಆರ್ಥಿಕವಾಗಿ ಬೆಳೆದಿದ್ದ. ಈ ಭಾಗದಲ್ಲಿ ಹಲವಾರು ಕ್ರಿಮಿನಲ್ ಚಟುವಟಿಕೆ ನಡೆಸಿ ಕುಖ್ಯಾತವಾಗಿದ್ದ ಮಹಮದ್ ಇದ್ರೀಸ್ ಮತ್ತವನ ಗುಂಪೂ ಸಹ ಪಂಕಜ್‌ನ ಬೆಟ್ಟಿಂಗ್ ದಂಧೆಯಲ್ಲಿ ಭಾಗಿಯಾಗಿತ್ತು. ಒಂದಷ್ಟು ಕಾಲ ಪಂಕಜ್ ಹಾಗೂ ಇದ್ರೀಸ್ ಗುಂಪುಗಳ ನಡುವೆ ಬೆಟ್ಟಿಂಗ್ ಸಂಬಂಧಿ ಹಣಕಾಸಿನ ವ್ಯವಹಾರ ಭಂಗವಿಲ್ಲದೆ ನಡೆದಿತ್ತು. ಆದರೆ ಇತ್ತೀಚೆಗೊಂದು ಬೆಟ್ಟಿಂಗ್ ನಡೆದು ಅದರಲ್ಲಿ ಇದ್ರೀಸ್ ಸೋತಿದ್ದ ಜೊತೆಗೆ ಪಂಕಜ್‌ನೊಂದಿಗೆ ಐವತ್ತು ಸಾವಿರದಷ್ಟು ಸಾಲವನ್ನೂ ಪಡೆದುಕೊಂಡಿದ್ದ.

ಇದಾಗಿ ತಿಂಗಳುಗಳು ಕಳೆದರೂ ಇದ್ರೀಸ್ ಕಡೆಯಿಂದ ಹಣ ವಾಪಾಸಾಗದಿದ್ದರಿಂದ ಪಂಕಜ್ ವಿಚಾರಿಸಿಕೊಂಡಿದ್ದಾನೆ. ಅದಕ್ಕೂ ಕಿಮ್ಮತ್ತು ಸಿಗದಿದ್ದಾಗ ಕೊಡಬೇಕಾದ 50 ಸಾವಿರವನ್ನು ಕೂಡಲೇ ಕೊಡುವಂತೆ ಒತ್ತಾಯಿಸಲು ಶುರುವಿಟ್ಟದ್ದಾನೆ. ಆದರೆ ಇದ್ರೀಸ್ ಅದೆಲ್ಲವನ್ನು ಬದಿಗೊತ್ತಿ ಆರಾಮಾಗಿ ಓಡಾಡಿಕೊಂಡಿದ್ದ. ಯಾವಾಗ ಪಂಕಜ್ ಹಣವನ್ನು ವಾಪಾಸು ಕೊಟ್ಟೇ ಕೊಡಬೇಕೆಂದು ಗಡುವು ನಿಗದಿ ಮಾಡಹತ್ತಿದನೋ ಆಗ ಇದ್ರೀಸ್‌ನ ವಂಚಕ ಪಡೆ ಬೇರೆಯದೇ ರೂಟಿಗಾಗಿ ತಲಾಶು ಆರಂಭಿಸಿದೆ.



ಅಷ್ಟಕ್ಕೂ ಮಹಮದ್ ಇದ್ರೀಸ್ ಹಾಗೂ ಆತನ ಪಟಾಲಂಗೆ ಬಳ್ಳಾರಿ ಸೀಮೆಯಲ್ಲಿ ಒಳ್ಳೆ ಹೆಸರಿಲ್ಲ. ಈ ಟೀಮಿನಲ್ಲಿರುವ ಹುಡುಗರೆಲ್ಲರ ಹಿಂದೆಯೂ ಒಂದಲ್ಲಾ ಒಂದು ಕ್ರಿಮಿನಲ್ ಹಿನ್ನೆಲೆಗಳಿವೆ. ಇದೇ ಟೀಮು ಆರು ತಿಂಗಳುಗಳ ಹಿಂದೆ ಅಪಹರಣವೊಂದಕ್ಕೆ ಕೈ ಹಾಕಿತ್ತು. ಉದ್ಯಮಿ ಪವನ್ ಕುಮಾರ್ ಎಂಬಾತನ ಮಗಳನ್ನು ಅಪಹರಿಸುವುದಾಗಿ ಬೆದರಿಸಿ 1.60 ಲಕ್ಷ ಕಿತ್ತುಕೊಂಡಿತ್ತು. ಜೈನ್‌ನ ಒತ್ತಡದಿಂದ ತಪ್ಪಿಸಿಕೊಳ್ಳುವುದಕ್ಕೂ ಸಹ ಇದ್ರೀಸ್‌ನ ಕ್ರಿಮಿನಲ್ ಮೈಂಡು ಅಪಹರಣದ ಹಾದಿಯನ್ನೇ ಆಯ್ದುಕೊಂಡಿತ್ತು.

ಇದಕ್ಕೆ ಸರಿಯಾಗಿ ಪಂಕಜ್ ಕಡೆಯಿಂದ ಹಣ ವಾಪಾಸು ಕೊಡುವ ಬಗ್ಗೆ ಒತ್ತಾಯ ಅತಿಯಾಯಿತಲ್ಲಾ? ಈ ತಿಂಗಳ ಮೊದಲ ದಿನದಂದು ಇದ್ರೀಸ್ ದುಡ್ಡು ಕೊಡುವುದಾಗಿ ಹೇಳಿದ್ದಾನೆ. ಇದಕ್ಕಾಗಿ ಎಂಜಿ ಆಟೋಮೊಬೈಲ್ ಹಿಂಭಾಗಕ್ಕೆ ಬರಬೇಕೆಂದೂ ತಿಳಿಸಿದ್ದಾನೆ. ಐವತ್ತು ಸಾವಿರ ಪಡೆದೇ ತೀರುವ ಉತ್ಸಾಹದೊಂದಿಗೆ ಪಂಕಜ್ ಬೈಕ್‌ನಲ್ಲಿ ಸ್ಥಳಕ್ಕಾಗಮಿಸಿದ್ದಾನೆ. ಹಾಗೆ ಬಂದವನನ್ನು ಇದ್ರೀಸ್ ಗ್ಯಾಂಗು ಏಕಾಏಕಿ ಇಂಡಿಕಾ ಕಾರಿಗೆ ತುಂಬಿಕೊಂಡು ಊರೆಲ್ಲಾ ರೌಂಡು ಹೊಡೆಸಲು ಶುರುವಿಟ್ಟಿತು.

ಅದೇ ಆಟೋಮೊಬೈಲ್ ಅಂಗಡಿ ಹಿಂಭಾಗದ ಮನೆಯೊಂದರಲ್ಲಿ ಪಂಕಜ್‌ನನ್ನು ಕೂಡಿ ಹಾಕಿ ವಿಪರೀತ ಹಿಂಸೆ ಕೊಡಲಾಯ್ತು. ತದನಂತರ ಪಕ್ಕಾ ದಂಧೆಗಿಳಿದ ಇದ್ರೀಸ್ ಪಂಕಜ್ ಮನೆಯವರಿಗೆ ಕರೆ ಮಾಡಿ ಅಖಂಡ ಏಳು ಲಕ್ಷ ಕೊಡುವಂತೆ ಬೇಡಿಕೆಯಿಟ್ಟದ್ದಾನೆ. ಪೊಲೀಸರಿಗೇನಾದರೂ ಮಾಹಿತಿ ನೀಡಿದರೆ ಪಂಕಜ್‌ನನ್ನು ಕೊಂದೇ ಹಾಕುವ ಬೆದರಿಕೆಯೊಂದಿಗೆ ಗುಗ್ಗರಹಳ್ಳಿ ಕ್ಯಾನಲ್ ಹತ್ತಿರ ಹಣ ತಂದು ಕೊಡುವಂತೆಯೂ ತಾಕೀತು ಮಾಡಿದ್ದಾನೆ.

ಆದರೆ ಬುದ್ಧಿವಂತಿಕೆ ಪ್ರದರ್ಶಿಸಿದ ಪಂಕಜ್ ಮನೆಯವರು ಈ ವಿಚಾರವನ್ನು ಪೊಲೀಸರಿಗೆ ತಿಳಿ... ಪಂಕಜ್ ಸಂಬಂಧಿಯೊಬ್ಬನಿಗೆ ವಾಯ್ಸ್ ರೆಕಾರ್ಡರ್ ... 7 ಲಕ್ಷದೊಂದಿಗೆ ಕ್ಯಾನಲ್ ಹತ್ತಿರ ಕಳಿಸಲಾಯಿತು. ಅಲ್ಲಿ ಕಾಯುತ್ತಿದ್ದ ಅಪಹರಣಕಾರರು 7 ... ತೆಗೆದುಕೊಂಡರೇ ವಿನಃ ಪಂಕಜ್‌ನನ್ನು ಬಿಟ್ಟು ಕಳಿ... ಈ ಬಗ್ಗೆ ವಿಚಾರಿಸಿದರೆ ಇನ್ನೆರಡು ಗಂಟೆ ... ಕಳಿಸುವುದಾಗಿ ಹೇಳಿದರು.

ಆದರೆ ಈ ಅಪಹರಣದ ಬಗ್ಗೆ ಪೊಲೀಸರಿಗೆ ತಿ... ವಿಚಾರ ಅದು ಹೇಗೋ ಇದ್ರೀಸ್ ಗುಂಪಿಗೂ ತಲು... ಇಂಥಾ ಸಮಯದಲ್ಲಿ ಪಂಕಜ್‌ನನ್ನು ಬಿಟ್ಟು ಕಳ... ತಮ್ಮ ವಿಚಾರ ಹ್ಯಾಗಾದರೂ ಲೀಕ್ ಆಗೇ ಆಗುತ್ತ... ಹೆದರಿದ ಇದ್ರೀಸ್ ಪಡೆ ಆತನನ್ನು ಕೊಲ್ಲುವುದೇ ... ವಾಗೋ ದಾರಿ ಅಂತ ನಿರ್ಧರಿಸಿದೆ. ಪಂಕಜ್ ಬಂಧ... ಪೊಲೀಸರ ಮೊರೆ ಹೋಗಿರುವ ವಿಚಾರ ಇದ್ರೀಸ್ ಗ... ತಿಳಿದದ್ದು ಪೊಲೀಸರು-ಅಪಹರಣಕಾರರ ನಡು... ಲಿಂಕಿನಿಂದಲೇ ಅಂತೊಂದು ಆರೋಪವೂ ಹುಟ್ಟಿಕೊ... ಭ್ರಷ್ಟ ಅಧಿಕಾರಿಯೊಬ್ಬ 'ಐದು ಲಕ್ಷ ಕೊಡಿ, ಪಂಕಜ... ಬಿಡ್ಸಿ ತರ್ತೀನಿ' ಅಂತ ಪಂಕಜ್ ಸಂಬಂಧಿ... ಡಿಮ್ಯಾಂಡಿಟ್ಟದ್ದು ಅದು ನಿರಾಕರಿಸಲ್ಪ... ಆರೋಪವನ್ನು ಪುಷ್ಟೀಕರಿಸುವಂತಿದೆ. ತದ... ಪೊಲೀಸರು ನಡೆದುಕೊಂಡ ರೀತಿಯೂ ... ಪೂರಕವಾಗಿದೆ.




ಯಾಕೆಂದರೆ ದುಡ್ಡು ಇಸಿದುಕೆ... ಅಪಹರಣಕಾರರು ಒತ್ತೆಯಾಳನ್ನು ಬಿಟ್ಟು ... ದ್ದರೂ ಪೊಲೀಸರು ಈ ಬಗ್ಗೆ ವಿಶೇಷ ... ಹರಿಸಲಿಲ್ಲ. ಪಂಕಜ್ ಸಂಬಂಧಿಕರಿಂದ ... ಕೇಳಿದರೆನ್ನಲಾದ ಅಧಿಕಾರಿಯೂ ಈ ... ಕೈಬಿಟ್ಟು ಹೊಸ ಪ್ರಕರಣದ ತಲಾಷಿ ಸ... ಇದೆಲ್ಲದರಿಂದಾಗಿ ಇದ್ರೀಸ್‌ನ ಗ...

ದ ಮೊದಲ ರಾಜಧಾನಿ ಬನವಾಸಿ ಎಂಬ ಬೆಂಗಳೂರಿನ ಬದಲು ಕರ್ನಾಟಕದ ರಾಜಧಾನಿ ಬನವಾಸಿ ಮಾಡಲು ಸಾಧ್ಯವೇ ಎಂಬ ತರ್ಕವೂ ಎದಿದೆ. ಕದಂಬರ ಉದ್ದಾಮ ಸಾಹಿತಿಗಳಿಗೆ ಪಂಪ 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ದೇಶಮಂ' ಎಂದು ಹಾಡಿದ್ದು ಅರ್ಥವಾಗದಿರು ಾಚಿಕೆಗೇಡು. ಯಡವಟ್ಟುಗಳನ್ನೇ ಮಾಡುತ್ತಾ ರ ಯಡ್ಡಿ ಸರ್ಕಾರ ಬನವಾಸಿ-ಉತ್ತರ ಕನ್ನಡದಲ್ಲಿ ುಟ್ಟುಹಾಕದಿದ್ದರೆ ಸಾಕು... ಹಾಗಂತ ಪ್ರಜ್ಞಾವಂತ ಲೋಕ ನೋವಿನಿಂದ ಹೇಳುತ್ತಿದೆ.

ಸದ ಕಿರಿಕಿರಿ ಒಂದೆಡೆಯಾದರೆ, ಮತ್ತೊಂದೆಡೆ ುದ್ದಿಜಿಯ ಸ್ವಜಾತಿ ಪ್ರೀತಿ ಪಂಪ ಪ್ರಶಸ್ತಿ ಾಡುವ ಐತಿಹಾಸಿಕ ಖ್ಯಾತಿಯ ಬನವಾಸಿ ೇತ್ಸವಕ್ಕೆ ಗಂಡಾಂತರ ಪರಿಣಮಿಸಿದೆ. ಖುದ್ದು ದ್ದಿಯೇ ಕದಂಬೋತ್ಸವಕ್ಕೆ ಹಾಕಿ ಕ್ಕುತಿದ್ದಾರೆಂಬ ಹಿತ್ಯ ಮತ್ತು ಸಾಂಸ್ಕೃತಿಕ ೃ ಎದ್ದಿದೆ! ಉತ್ತರ ಕನ್ನಡ ಕ ಮತ್ತು ಕನ್ನಡ-ಸಂಸ್ಕೃತಿ ಘೋಷಿಸಿರುವಂತೆ ಫೆಬ್ರ ುತ್ತು 15ರಂದು ಕದಂಬೋತ್ಸವ ನಡೆಯಬೇಕು. ಧಿಕಾರಿಗಳ ನಿರಾಳತೆ-ಉದಾಸೀನ ಕಂಡರೆ ತ್ಸವ ಮುಂದೂಡಲ್ಪಡುವ ಅಥವಾ ಅಂತಿಮವಾಗಿ ಿ ವರ್ಗಾವಣೆಯಾಗುವ ಕೆಟ್ಟ ಸೂಚನೆಗಳೇ ುತ್ತಿವೆ...

ಬೋತ್ಸವದ ಪೂರ್ವ ಸಿದ್ಧತೆಯ ಪ್ರಮುಖ ಪಂಪ ಪ್ರಶಸ್ತಿಗೆ ಸಾಹಿತಿಯ ಆಯ್ಕೆಯೇ ನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಗೊಂದಲಕ್ಕೆ ಬಿದ್ದಿದ್ದಾರೆ. ಅರ್ಹರ ಆಯ್ಕೆಗೆ ಟ್ಟಿದ್ದ ಸಮಿತಿ ಶಿಫಾರಸು ಮಾಡಿದ ಮೂರೂ ಸಿಎಂ ಯಡ್ಡಿಗೇಕೋ ಸಮ್ಮತಿಯಾಗಿಲ್ಲ. ಒಂದು ಪ್ರಕಾರ ಈ ಮೂವರ ಪಟ್ಟಿಯಲ್ಲಿ ಚೆನ್ನವೀರ ಕಣವಿ, ನಿಸಾರ್ ಅಹ್ಮದ್‌ರಂಥವರೂ ಇದ್ದಾರಂತೆ. 'ನಿಯಮ'ದಂತೆ ಆಯ್ಕೆ ಸಮಿತಿ ಆರಿಸಿರುವ ಮೂವರು ಸಾಹಿತಿಗಳಲ್ಲಿ ಒಬ್ಬನನ್ನು ಪ್ರಶಸ್ತಿಗೆ ಅಂತಿಮಗೊಳಿಸುವಾಗ ಮುಖ್ಯಮಂತ್ರಿಯ ಒಪ್ಪಿಗೆ ಪಡೆಯಬೇಕು. ಈ ಮೂವರಲ್ಲಿ ಸಿಎಂಗೆ ಯಾರೂ ಹಿತವಾಗಿ ಕಾಣಿಸಲಿಲ್ಲ, ಹೀಗಾಗಿ ಆತ ಬೇರೆ ಮೂರು ಹೆಸರು ಸೂಚಿಸುವಂತೆ ಹೇಳಿದ್ದಾರಂತೆ.

ಪಕ್ಕಾ ಜಾತಿವಾದಿ ಯಡ್ಡಿಯ ಒಳಉದ್ದೇಶವೇ ಬೇರೆ. ತನಗೆ 'ಸಹ್ಯವಾದ' ಸ್ವಜಾತಿ ಸಾಹಿತಿಯೊಬ್ಬನಿಗೆ ಪಂಪ ಪ್ರಶಸ್ತಿಯ ಕಿರೀಟ ತೊಡಿಸಿ ಧನ್ಯನಾಗುವ ಯೋಚನೆ ಯಡ್ಡಿಯದು. ಹೀಗೆ ಮಾಡುವ ಮೂಲಕ ಮತ್ತೆ ಲಿಂಗಾಯತ ಮಠಾಧೀಶರ ಮತ್ತು ಲಿಂಗಾಯತ ಓಟ್ ಬ್ಯಾಂಕ್ ಒಲಿಸಿಕೊಳ್ಳುವ ಹುನ್ನಾರ ಈ ಧೂರ್ತ ಸಿಎಂ ನಡೆಸುತ್ತಿದ್ದಾರೆ. ಹೀಗಾಗಿ ಆತ ಕದಂಬೋತ್ಸವ ಕಾರ್ಯಕ್ರಮ ನಿಗದಿಸಲು ಹಿಂದೆ-ಮುಂದೆ ನೋಡುತ್ತಿದ್ದಾರೆಂಬುದು ಸಾಹಿತ್ಯ-ರಾಜಕೀಯ ಮತ್ತು ಲಿಂಗಾಯತ ಲಾಬಿಯಲ್ಲಿ ಬಹಿರಂಗ ರಹಸ್ಯದಂತಾಗಿ ಹೋಗಿದೆ. ಜಿಲ್ಲೆಯ ಆಗುಹೋಗುಗಳ ಬಗ್ಗೆ ನಿಸ್ಸೀಮ ನಿರ್ಲಕ್ಷ್ಯದಲ್ಲಿರುವ ಹೇತ್ಲಾಂಡಿ ಜಿಲ್ಲಾ ಮಂತ್ರಿ ಕಾಗೇರಿ ಮಾಣಿಗೆ ಇದೆಲ್ಲ ಸಿಎಂ ಬಳಿ ಪ್ರಶ್ನಿಸಿ ತನ್ನ ಜನರಿಗೆ ನ್ಯಾಯ ಕೊಡಿಸುವ ದಮ್- ಧೋರಣೆ ಎರಡೂ ಇಲ್ಲ. ಸಿಎಂ ಸಾಹೇಬರ ಮನದಿಚ್ಛೆಯಂತೆ ಹೆಜ್ಜೆ ಹಾಕುತ್ತಾ ಸಿಕ್ಕಷ್ಟು ಮೇದು ದುಂಡಗಾಗುವುದೇ ಮಂತ್ರಿಗಿರಿ ಡ್ಯೂಟಿ ಎಂದು ನಂಬಿರುವ ನಾಲಾಯಕ್ ಈ ಕಾಗೇರಿ!



ಮಹಾಕವಿ ಪಂಪನ ಕಾರ್ಯಕ್ಷೇತ್ರವಾಗಿದ್ದ ಬನವಾಸಿಯಿಂದ ಪಂಪ ಪ್ರಶಸ್ತಿ ಪ್ರದಾನ ಅಣ್ಣಿಗೇರಿಗೆ ಬದಲಾಯಿಸುವ ಜಾತಿವಾದಿ ಸಾಹಿತಿಗಳ ಮಸಲತ್ತು ಒಂದೆಡೆಯಾದರೆ, ಸಾಕ್ಷಾತ್ ಸಿಎಂ ಸಾಹೇಬರೇ ಉತ್ತರ ಕನ್ನಡದ ಸಾಹಿತ್ಯ-ಸಾಂಸ್ಕೃತಿಕ ವೈಭವದ ಕದಂಬೋತ್ಸವಕ್ಕೆ ಕಲ್ಲುಹಾಕುತ್ತಿರುವ ಖತರ್‌ನಾಕ್-ಕರಾಮತ್ತು ಮತ್ತೊಂದೆಡೆ. ಚೆಡ್ಡಿ ಪರ್ವದಲ್ಲಿ ಉತ್ತರ ಕನ್ನಡ ದಿಕ್ಕು-ದೆಸೆಯಿಲ್ಲದೆ ಹೈರಾಣಾಗುತ್ತಿರುವುದು ಘೋರ ದುರಂತವೇ ಸರಿ!

• ನಹುಶ

ಹಿಂದುಳಿದ ಜಿಲ್ಲೆ ಚಾಮರಾಜನಗರಕ್ಕೆ ಬಂದು ಬರುತ್ತಾಗಿರುವ ಸರ್ಕಾರಿ ಅಧಿಕಾರಿಗಳ ಲಿಸ್ಟು ದೊಡ್ಡದಿದೆ. ಇಂಥ ಖದೀಮರುಗಳಿಂದಲೇ ಜಿಲ್ಲೆಯ ಹೆಸರಿನ ಹಿಂದೆ ಇಂದಿಗೂ 'ಹಿಂದುಳಿದ' ಬಿರುದು ಹೆಟ್ಟಿಕೊಂಡೇ ಇರುವುದು ಸುಳ್ಳಲ್ಲ. ಇಂತಹುದೊಂದು ಪಾರಂಪರಿಕ ಇತಿಹಾಸವನ್ನು ಕಾಯ್ದುಕೊಳ್ಳಲು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (CEO) ಸುಂದರ್ ನಾಯಕ್ ಹಗಲಿರುಳೆನ್ನದೆ ಶ್ರಮಿಸುತ್ತಿದ್ದಾರೆ!

ಈ ಆಸಾಮಿ CEO ಆಗಿ ಅವತರಿಸಿ ಎರಡು ವರ್ಷ ಕಳೆಯುತ್ತಾ ಬಂದಿದೆ. ಅದ್ಯಾಕೋ ಆಳದಿಂದ ದಲಿತ ವಿರೋಧಿತನವನ್ನೇ ಉಸಿರಾಡಿಕೊಂಡಿರುವ ಈತ ಸಮಯ ಸಿಕ್ಕಾಗಲೆಲ್ಲಾ ದಲಿತ ಅಧಿಕಾರಿಗಳಿಗೆ ಕಿರುಕುಳ ನೀಡುವುದಕ್ಕಾಗೇ ಮೀಸಲಿರಿಸುತ್ತಾನೆ. ಇಂಥಾ ಸುಂದರ್ ನಾಯಕ್ ಚಾಮರಾಜನಗರಕ್ಕೆ ಅಟಕಾಯಿಸಿಕೊಳ್ಳುವ ಮುಂಚೆ ಚಿಕ್ಕಮಗಳೂರಿನಲ್ಲಿ ಸಿಇಓ ಆಗಿದ್ದವನು. ಆ ಅವಧಿಯಲ್ಲಿ ಈತ ನಡೆಸಿದ 'ಸೇವೆ'ಗಳು ಒಂದೆರಡಲ್ಲ. ಸರ್ಕಾರದ ಅನುಮತಿಯಿಲ್ಲದೆ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನಿಯೋಜಿಸಿಕೊಂಡಿದ್ದು ಆ ಬಡಪಾಯಿಗಳಿಗೆ ಸೇರಬೇಕಾದ ಸಂಬಳವನ್ನೂ ತಾನೇ ಜೇಬಿಗಿಳಿಸಿಕೊಂಡಿದ್ದು ಸುಂದರನ ಸೇವೆಗೊಂದು ಸ್ಯಾಂಪಲ್ ಅಷ್ಟೆ!

ಚಾಮರಾಜನಗರ ದಲಿತ ವಿರೋಧಿ ಸಿಇಓ ಸುಂದರ್ ಧನದಾಹಿಯೂ ಹೌದು!

ಮೇಲ್ಕಂಡ ವಂಚನೆಯ ಸಂಬಂಧ ನೌಕರರೆಲ್ಲಾ ಸುಂದರನ ವಿರುದ್ಧ ಪ್ರತಿಭಟನೆಗಿಳಿದರು. ಪವಾಡಸದೃಶವಾಗಿ ಎಚ್ಚೆತ್ತುಕೊಂಡ ಸರ್ಕಾರ ಸುಂದರ್ ನಾಯಕನ ಅವ್ಯವಹಾರದ ತನಿಖೆ ನಡೆಸಲು ವಿಚಾರಣಾ ತಂಡವೊಂದನ್ನು ನೇಮಿಸಿತು. ತದನಂತರ ಅವ್ಯವಹಾರಗಳು ನಿಜವೆಂದೂ ಸಾಬೀತಾಯಿತು. ಈ ಹಿನ್ನೆಲೆಯಲ್ಲಿ ಸುಂದರನನ್ನು ಎತ್ತಿ ಬಿಸಾಡಿದ್ದೇ ಈತ ಚಾಮರಾಜನಗರ ಜಿಲ್ಲಾ ಪಂಚಾಯ್ತಿಗೆ ನೇತುಬಿದ್ದ!

ಹಾಗೆ ಚಾಮರಾಜನಗರ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಅವತರಿಸಿದ ಸುಂದರ್ ಆರಂಭದಲ್ಲಿ ಅತ್ಯಂತ ಪ್ರಾಮಾಣಿಕನಂತೆ ನಟಿಸ ಹತ್ತಿದ. ಅಡಿಗಡಿಗೆ ನುಂಗುಬಾಕರನ್ನೇ ಕಂಡು ಕಂಗಾಲಾಗಿದ್ದ ಜನರು 'ಕಡೆಗೂ ಒಳ್ಳೆ ಮನುಷ್ಯ ಸಿಕ್ಕಿದ' ಅಂತ ಹಿರಿಹಿರಿ ಹಿಗ್ಗಿದರು. ಈತನ ಬಲದಿಂದಲಾದರೂ 'ಹಿಂದುಳಿದ' ಹಣೆಪಟ್ಟಿಯಿಂದ ಮುಕ್ತಿ ಸಿಗಬಹುದೆಂತಲೂ ಕನಲಿದರು. ಆದರೆ ತಿಂಗಳು ಕಳೆಯುವಷ್ಟರಲ್ಲೇ ಸುಂದರ್ ಅಸಲೀ ಬುದ್ಧಿ ಕಕ್ಕತೊಡಗಿದ. ಎಲ್ಲೆಲ್ಲಿ ದಲಿತ ಅಧಿಕಾರಿಗಳಿದ್ದಾರೆಂದು ಹುಡುಕಾಡಿ ಕಾಟ ಕೊಡತೊಡಗಿದ. ಅವರ ಕೈ ಕೆಳಗಿನ ನೌಕರರೇ ತಿರುಗಿ ಬೀಳುವಂತೆ ಪಿತೂರಿ ನಡೆಸಿದ. ಇದರ ವಿರುದ್ಧ ಎದ್ದ ದನಿಯನ್ನೆಲ್ಲಾ ತಣ್ಣಗೆ ಅಡಗಿಸಿದ ಸುಂದರನ ದಲಿತ ವಿರೋಧಿ ಪಿತ್ಥ ಯಾವ ಪರಿ ಕೆರಳಿತೆಂದರೆ, ಪ್ರಮುಖ ಕಡತಗಳಿಗೆ ಸಹಿ ಮಾಡೋ ಅಧಿಕಾರವನ್ನೇ ಸಿಇಓಗಳಿಂದ ಕಿತ್ತುಕೊಂಡ!

ಇನ್ನು ಹಣ ಹೊಡೆಯುವ ಸಲುವಾಗಿ ಸುಂದರ್ ಅತ್ಯಂತ ನೀಚ ಮಟ್ಟಕ್ಕಿಳಿದು ಇಓಗಳಿಂದ ಮನಸಾರೆ ಹಣ ಗುಂಜತೊಡಗಿದ. ಜಲಾನಯನ ಇಲಾಖೆಯನ್ನೂ ಬಿಡದೆ, ಗ್ರಾ.ಪಂ. ಕಾರ್ಯದರ್ಶಿಗಳಿಂದಲೂ ಪರ್ಸೆಂಟೇಜ್ ಪಡೆಯಹತ್ತಿದ. ಇದಕ್ಕೆ ವಿರೋಧ ತೋರಿಸಿದವರನ್ನು ಮುಲಾಜಿಲ್ಲದೆ ಎತ್ತಂಗಡಿ ಮಾಡಿದ. ಹೀಗೆ ಎತ್ತಂಗಡಿಯಾಗಿರುವವರಲ್ಲಿ ಬಹುತೇಕರು ದಲಿತರು.

ಸುಂದರನ ಧನದಾಹ ಪ್ರವೃತ್ತಿ ಇಲ್ಲಿಗೇ ನಿಲ್ಲುವಂತಹುದಲ್ಲ, ಕೀರಾ ಕುಡಿಯುವ ನೀರಿನ ವ್ಯವಸ್ಥೆಯನ್ನು ಎಕ್ಕುಟ್ಟಿಸಿ ಒಂದೇ ಕಾಮಗಾರಿಗೆ ಎರಡೆರಡು ಸಲ ಬಿಲ್ ಮಾಡಿ ಪವಾಡ ಸೃಷ್ಟಿಸಿದ. ಕರ್ನಾಟಕದ ಕಳ್ಳಕಾಕರರ ಕಲ್ಪವೃಕ್ಷದಂತಾಗಿರುವ ಉದ್ಯೋಗ ಖಾತ್ರಿ ಯೋಜನೆಯೂ ಸುಂದರನ ಹೊಡೆತಕ್ಕೆ ಸಿಲುಕಿದೆ. ಕಾರ್ಮಿಕರಿಗೆ 100 ದಿನದ ಕೆಲಸ ಕೊಡಬೇಕೆಂಬುದು ನಿಯಮ. ಅದಕ್ಕೆ ಕಿಮ್ಮತ್ತು ಕೊಡದ ಈತ ಕಾರ್ಮಿಕರ ಹಣವನ್ನು ಎಂಡಿಎಸ್‌ಗೆ ಅಳವಡಿಸಿ ಗುತ್ತಿಗೆದಾರರಿಗೆ ವಹಿಸಿ ಪರ್ಸೆಂಟೇಜ್ ಗುಂಜುತ್ತಿದ್ದಾನೆ. ಗ್ರಾಮ ಪಂಚಾಯ್ತಿಗಳಿಗೆ ಬಿಡುಗಡೆಯಾಗುವ ಶೇ. 25ರ ಅನುದಾನದಲ್ಲೂ ಒಂದಷ್ಟು ಸುಂದರನ ತಿಜೋರಿ ಸೇರುತ್ತಿದೆ. ಪಂಚಾಯತ್ ರಾಜ್ ಕೈಪಿಡಿ ಪುಸ್ತಕ ಖರೀದಿ ಗುತ್ತಿಗೆಯನ್ನು ತನ್ನ ಸಂಬಂಧಿಕರಿಗೆ ಕೊಟ್ಟು ತಾಪಂ ಹಾಗೂ ಗ್ರಾಪಂಗಳ ಅನುದಾನ ಹಣವನ್ನು ಉಪಯೋಗಿಸಿಕೊಂಡಿರುವುದು ಸುಂದರ್ ನಾಯಕನ ಕಸುಬುದಾರಿಕೆಗೆ ಸ್ಪಷ್ಟ ಸಾಕ್ಷಿ.

ಜಿಲ್ಲೆಯಾದ್ಯಂತ ಇಂಗುಗುಂಡಿ ತೋಡಿ ಅಂತರ್ಜಲ ಉಕ್ಕಿಸುತ್ತೇನೆಂದು ಪೋಸು ಕೊಟ್ಟು ಹೆಚ್ಚುಕಡಿಮೆ 239 ಇಂಗುಗುಂಡಿ ತೋಡಿಸಿದ. ಒಂದು ಗುಂಡಿಗೆ 97 ಸಾವಿರ ಖರ್ಚು ಮಾಡಬೇಕೆಂಬ ನಿಯಮವಿದ್ದರೂ ತಲಾ 1.11 ಲಕ್ಷ ಹಣ ಚೆಲ್ಲಿದ. ಅಂದರೆ, ಒಂದು ಗುಂಡಿಗೆ 14 ಸಾವಿರದಂತೆ ಲೆಕ್ಕ ಹಾಕಿದರೂ ಅಖಂಡ 34.32 ಲಕ್ಷ ರೂಪಾಯಿ ಸುಂದರನ ತಿಜೋರಿಯಲ್ಲಿ ಅಂತರ್ಧಾನವಾಗಿದೆ!

ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಬರೋ ಕೋಟ್ಯಂತರ ರೂಪಾಯಿ ಹಣವನ್ನು ಟ್ರೆಜರಿಯಲ್ಲಿಡದೆ ಲ್ಯಾಂಡ್ ಆರ್ಮಿ ಮತ್ತು ನಿರ್ಮಿತಿ ಕೇಂದ್ರದಲ್ಲಿಟ್ಟು ಅದರಲ್ಲೂ ಪರ್ಸೆಂಟೇಜ್ ಪಡೆಯುವುದು ಸುಂದರನ ವಸೂಲಿ ಸ್ಪೆಷಾಲಿಟಿ. ಎಸ್ಸಿ-ಎಸ್ಟಿ ಮಂದಿ ಬಡತನದ ನಡುವೆ ಕಂಗಾಲಾಗಿದ್ದರೂ ಅವರಿಗೆ ಮೀಸಲಾದ ಹಣವನ್ನು ಬೇರೆ ಕೆಲಸಕ್ಕೆ ಉಪಯೋಗಿಸುವಷ್ಟು ದಲಿತ ದ್ವೇಷದ ವಿಷ ಸುಂದರನನ್ನು ಆವರಿಸಿಕೊಂಡಿದೆ. ಇದರ ವಿರುದ್ಧದ ಪ್ರತಿಭಟನೆಯನ್ನೆಲ್ಲಾ ಹಲವು ಪಿತೂರಿಗಳ ಮೂಲಕ ಮಟ್ಟ ಹಾಕೋ ಕಲೆಯೂ ಈತನಿಗೆ ಕರಗತವಾಗಿದೆ.

ಸುಂದರ್ ನಾಯಕನ ಇಷ್ಟೆಲ್ಲಾ ಭ್ರಷ್ಟಾಚಾರ, ದಲಿತ ದ್ವೇಷದ ವಿರುದ್ಧ ಹಲವು ಸಂಘಟನೆಗಳು ಒಟ್ಟಾಗಿ ಪ್ರತಿಭಟಿಸಿವೆ. ಈತನ ಎಲ್ಲಾ ಹಗರಣಗಳ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕೆಂಬ ಅಹವಾಲೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಕೆಯಾಗಿದೆ. ಆದರೆ ಸಜ್ಜನ ಅಂತಲೇ ಹೆಸರಾಗಿರುವ ಡಿಸಿ ಅಮರನಾರಾಯಣರ ಮೇಲೆ ಅದ್ಯಾವ ಒತ್ತಡ ಅಮರಿಕೊಂಡಿದೆಯೋ, ಅವರೂ ಸುಮ್ಮನಿದ್ದಾರೆ.

ಈ ರೀತಿಯಲ್ಲಿ ಮಾಡಿದ ಅಂದಾಮಂದಿಗಳನ್ನೆಲ್ಲಾ ಕೂಲ್ ಆಗಿ ದಕ್ಕಿಸಿಕೊಳ್ಳುತ್ತಿರುವ ಸುಂದರ್ ನಾಯಕ್ ಆರಾಮಾಗಿ 'ಸೇವೆ' ಮುಂದುವರೆಸಿದ್ದಾನೆ. ಹಡಬೆ ಹಣ ಕರಗಿಸಲು ಥರಥರದ ರೂಟು ಕಂಡುಕೊಂಡಿರುವ ಈತ ವಾರಕ್ಕೊಂದು ಸಾರಿ ಕೆ. ಗುಡಿ ಗುಂಡಾಲ್ ಐಬಿ ಮತ್ತು ಬಂಡಿಪುರದ ಪ್ರವಾಸಿ ಮಂದಿರಗಳಲ್ಲಿ ಆರಾಮಾಸಾನ ಮಾಡುತ್ತಾ ಬಿಂದಾಸಾಗಿದ್ದಾನೆ.

ಇಂಥಾ ಕಡುಭ್ರಷ್ಟರನ್ನೇ ಒಳಗಿಟ್ಟುಕೊಂಡಿರುವ ಚಾಮರಾಜನಗರ ಜಿಲ್ಲೆ ಹಿಂದುಳಿಯದೆ ಇನ್ನೇನಾದೀತು?

• ಕೊಳ್ಳೇಗಾಲ ಚಿಕ್ಕಮಾಳಿಗೆ



ಪಡೆ ಇದು ಅನಾಥ ಶವ ಅಂತ ಷರಾ ಬರೆಯಿತು! ಇದು ಬಳ್ಳಾರಿಯ ಪೊಲೀಸರು ನಡೆಸುವ ಒಗ್ಗಟ್ಟಿಗೆ ಸ್ಪಷ್ಟ ಸಾಕ್ಷಿ! ೧. ಬನವಾಸಿಯ ದೇಗುಲ

ಆದರೆ ಶವ ಪಂಕಜ್‌ನದ್ದೇ ಅನ್ನುವುದು ಖಚಿತವಾಯಿತು. ತರಹೇವಾರಿ ವಿಚಾರಣೆಯ್ಕು ಬಳಿಕ ಇದು ಇದ್ರೀಸ್ ಗುಂಪಿನದೇ ಕೆಲಸ ಅಂತ ಮನವರಿಕೆಯಾಗಿ ಪೊಲೀಸರು ಇಡೀ ತಂಡವನ್ನು ಅರೆಸ್ಟು ಮಾಡಿದ್ದೂ ನಡೆಯಿತು. ಆದರೆ ಒತ್ತೆಸೆರೆಯಾಗಿದ್ದ ಪಂಕಜ್‌ನ ಜೀವ ಇನ್ನಿಲ್ಲವಾಗಿದೆ.

ಈ ಇಡೀ ಘಟನೆಯಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುವಂತಿದೆ. ಇದನ್ನೇ ಮುಂದಿಟ್ಟುಕೊಂಡು ಮಾರ್ವಾಡಿಗಳು, ವ್ಯಾಪಾರಿಗಳು ಪ್ರತಿಭಟನೆಗಳನ್ನೂ ನಡೆಸಿದ್ದಾರೆ. ಆದರೆ ಪೊಲೀಸರು ಮಾತ್ರ 'ಆಧುನಿಕ ತಂತ್ರ ಬಳಸಿ ಆರೋಪಿಗಳನ್ನು ಹಿಡಿದುದಾಗಿಯೂ, ಈ ಅಪ್ರತಿಮ ಸಾಹಸ ಕಂಡು ಐ.ಜಿ. ಸತ್ಯನಾರಾಯಣ ರಾವ್ ಶಹಬ್ಬಾಸ್ ಅಂದಿದ್ದಾರೆಂತಲೂ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳಲಾರಂಭಿಸಿದ್ದಾರೆ.

ಆದರೆ ಪೊಲೀಸರ ವಿರುದ್ಧ ನಡೆದಿರುವ ವ್ಯಾಪಕ ಪ್ರತಿಭಟನೆಗಳಿಗೆ ಮಣಿದ ಜನಾರ್ದನ ರೆಡ್ಡಿ ಸ್ವತಃ ಸ್ಥಳಗಾಗಮಿಸಿ 'ಪೊಲೀಸ್ ಇಲಾಖೆಗೆ ಸರ್ಜರಿ ಮಾಡಿಸ್ತೀನಿ' ಅಂತ ಅಬ್ಬರಿಸಿದ. ಜೊತೆಗೆ ಈ ಬಗ್ಗೆ ತನಿಖೆ ನಡೆಸಲು ನಾಲ್ಕು ಮಂದಿ ವಿಶೇಷಾಧಿಕಾರಿಗಳ ತಂಡವನ್ನು ನೇಮಿಸಿದ್ದಾನೆ. ಇದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿರುವ ಪೊಲೀಸರು ಬೆವರುವಂತೆ ಮಾಡಿದೆ.

ಒಟ್ಟಾರೆಯಾಗಿ ಪಂಕಜ್ ಜೈನ್‌ನ ಕೊಲೆ ಬಳ್ಳಾರಿ ನೆಲದಲ್ಲಿ ಗರಿ ಬಿಚ್ಚಿರುವ ಕರಾಳ ದಂಧೆಗಳಿಗೆ, ಆ ಬಗ್ಗೆ ಪೊಲೀಸರ ವೈಫಲ್ಯಕ್ಕೆ ಸ್ಪಷ್ಟ ನಿದರ್ಶನದಂತಿದೆ.

ೞ ಉಸಿರುಗಟ್ಟಿಸಿ ಕೊಂದು ಶವಕ್ಕೆ ಕಲ್ಲು ಕಟ್ಟಿ ಕ್ಯಾನಲ್‌ಗೆ ಎಸೆಯಿತು. ವಿಪರ್ಯಾಸವೆಂದರೆ ಒಂದು ಅಮಾನುಷ ಹತ್ಯೆ ಮಾಡಿದ ಇದ್ರೀಸ್ ಳ್ಳಾರಿ ತುಂಬಾ ಆರಾಮಾಗಿ ಓಡಾಡಿಕೊಂಡಿತ್ತು! ಂತಕರು ಮೃತ ದೇಹಕ್ಕೆ ಕಲ್ಲು ಕಟ್ಟಿ ುದರಿಂದ ಈ ಬಗ್ಗೆ ಸುಳಿವು ಸಿಗಲಾರದು ಾವಿಸಿದ್ದರು. ಆದರೆ ಅದು ಹೇಗೋ ಪಂಕಜ್‌ನ ಂಡು ಹೋಗಿ ಸಮೀಪದ ತೂಬೊಂದಕ್ಕೆ ಂಡಿತ್ತು. ಈ ವಿಚಾರ ಸಿದ್ದನಾಳ ಭಾಗದ ೂ ತಿಳಿಯಿತು. ಆದರ ಆ ಮಹಾತ್ಮ ಖಾಕಿ

ಎಚ್ಚೆತ್ತುಕೊಳ್ಳಬೇಕಿದೆ ಖಾಕಿ ಜಗತ್ತು

ಂಗ್ ಕುಳ ಪಂಕಜ್ ಜೈನ್‌ನ ಹೆಣ ಬಿದ್ದಿದೆ. ಅದಕ್ಕೆ ಕಾರಣವಾದ ಇದ್ರೀಸ್‌ನ ರಾಕ್ಷಸ ಗ್ಯಾಂಗೂ ಜೈಲು ಪಾಲಾಗಿದೆ. ಬೆಟ್ಟಿಂಗ್ ಮಾಫಿಯಾ ಕೊನೆಗೊಂಡಿತೆಂದುಕೊಂಡರೆ ಅದಕ್ಕಿಂತ ಮೂರ್ಖತನ ಬೇರೊಂದಿಲ್ಲ. ಮುಂಬರುವ ದಿನಗಳಲ್ಲಿ ಪೊಲೀಸ್ ಇಲಾಖೆಗೆ ಬೆಟ್ಟಿಂಗ್ ದಂಧೆಯೇ ಬಹುದೊಡ್ಡ ಸವಾಲಾಗಿ ಕೊಳ್ಳಲಿದೆ.

ಯ ನೆಲದಲ್ಲಿ ವ್ಯಾಪಾರದ ಸೋಗು ಹಾಕಿರುವ ಬಹುತೇಕ ಮಾರ್ವಾಡಿಗಳು, ಉದ್ಯಮಿಗಳು ದಂಧೆಯನ್ನ ಅವ್ಯಾಹತವಾಗಿ ನಡೆಸುತ್ತಿದ್ದಾರೆ. ಇದು ಬಹು ವಿಸ್ತಾರವಾದ ಜಗತ್ತು. ಇದರಲ್ಲಿ ಪಂಕಜ್ ಗವನ್ನೇ. ಇದನ್ನೇ ಬಂಡವಾಳವಾಗಿಸಿಕೊಳ್ಳುವ ಇದ್ರೀಸ್‌ನಂಥ ಘಾತಕಿಗಳಿಗೂ ಇಲ್ಲಿ ಬರವಿಲ್ಲ.

ಸಮಿಯಾಗಿ ವರ್ಲ್ಡ್ ಕಪ್ ಕ್ರಿಕೆಟ್ ಬೇರೆ ಆರಂಭಗೊಳ್ಳಲಿದೆ. ಈ ಭೂಮಿಕೆಯಲ್ಲೇ ಬೆಟ್ಟಿಂಗ್ ದಂಧೆ ಹೆಚ್ಚೊಂದಷ್ಟು ಘಾತಕಗಳು ನಡೆಯುವ ಸಾಧ್ಯತೆಗಳೂ ಇವೆ. ಪೊಲೀಸರು ಈಗಿನಿಂದಲೇ ಅಖಾಡಕ್ಕಿಳಿದು ದಂಧೆಕೋರರನ್ನು ಮಟ್ಟ ಹಾಕಿದರೆ ಸಂಭಾವ್ಯ ಅನಾಹುತಗಳನ್ನು ತಪ್ಪಿಸಿದಂತಾಗುತ್ತದೆ.

ಪೊಲೀಸರು ಈ ಬಗ್ಗೆ ಗಮನ ಹರಿಸಬೇಕಿದೆ.

▶▶ 2 ಡಾಕ್ಟರೇಟ್ ಮತ್ತು ಗೌರವ ಡಾಕ್ಟರೇಟ್

ರಾಜ್ಯಪಾಲರಾಗಲೀ ಅಥವಾ ಸರ್ಕಾರವಾಗಲೀ, ಖಂಡಿತಾ ಚಿಮೂರಂಥವರಿಗೆ ಸಾಮಾಜಿಕ ಮನ್ನಣೆ ಕೊಡಬಾರದು. ಇದನ್ನು ಹೇಳುವಲ್ಲಿ ಆರೋಗ್ಯಕರ ಸಮಾಜಕ್ಕೂ ಮತ್ತು ನೈಜ ಬೌದ್ಧಿಕತೆಗೆ ಬದ್ಧರಾಗಿರುವ ಯಾರಿಗೇ ಆದರೂ ಹಿಂಜರಿಕೆಯಿರಬಾರದು.

ನಮ್ಮ ಸಾಹಿತಿಗಳು ಡಾಕ್ಟರೇಟ್ ಮತ್ತು ಗೌರವ ಡಾಕ್ಟರೇಟ್‌ಗಳಿಗಿರುವ ವ್ಯತ್ಯಾಸವನ್ನು ಪರಿಗಣಿಸದೆ, ಗೌರವ ಡಾಕ್ಟರೇಟ್ ಪಡೆಯಲು ಒಬ್ಬ ವ್ಯಕ್ತಿ ಕನಿಷ್ಠ ಪಕ್ಷ ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧವಾಗಿರಬೇಕಾಗಿರುತ್ತದೆ ಎಂಬುದನ್ನೂ ಪರಿಗಣಿಸದೆ ಇಡೀ ಕನ್ನಡ ಜನತೆಯನ್ನು ದಾರಿ ತಪ್ಪಿಸಿದ್ದಾರೆ. ಇದು ಸರಿಯಲ್ಲ.

ವಿದ್ವತ್ತನ್ನು ಗೌರವಿಸಬೇಕು. ಅಪಾಯಕಾರಿ ವಿದ್ವತ್ತನ್ನು ವಿರೋಧಿಸಬೇಕು. ಜನವಿರೋಧಿ ಸಿದ್ಧಾಂತಕ್ಕೆ ಸಲ್ಲುವ ಗೌರವ ಜನತೆಗೆ ಮಾಡುವ ಅಗೌರವ.

ಇಷ್ಟೆಲ್ಲಾ ಹೇಳಿದ ಮೇಲೆ ರಾಜ್ಯಪಾಲರು ಸಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಈ ಕ್ರಮ ತೆಗೆದುಕೊಂಡಿದ್ದಾರೆ ಎಂದುಕೊಳ್ಳುವುದು ಸಹ ಭೋಳೇತನವೇ ಆಗುತ್ತದೆ. ಈ ರಾಜ್ಯಪಾಲರ ಕ್ರಮಗಳ ಹಿಂದಿನ ಉದ್ದೇಶ ಸಂವಿಧಾನಕ್ಕಿಂತ ಹೆಚ್ಚಾಗಿ ಬಿಜೆಪಿ ಪರವಾದವರಿಗೆ ಪಾಠ ಕಲಿಸುವುದೇ ಆಗಿರಬಹುದು. ಅದು ಬೇರೆಯೇ ಚರ್ಚೆ.


ಆದರೆ ಅದು ಸಹ ಒಬ್ಬ ವ್ಯಕ್ತಿಯ ಇಚ್ಛಾನಿಚ್ಛೆ ಬಿಟ್ಟುಬಿಡುವುದು ಅಪಾಯಕಾರಿ ಎನ್ನುವುದೂ ನಿಜ. ಅದನ್ನು ತಡೆಯುವಂಥ ಸಾಂಸ್ಥಿಕ ಏರ್ಪಾಡುಗಳ ಬಗ್ಗೆಯೂ ಯೋಚಿಸಬಹುದು. ಅದೇನೇ ಇದ್ದರೂ ಕೇವಲ ಕ್ರಮಬದ್ಧತೆಯ ದೃಷ್ಟಿಯಿಂದ ಮಾತ್ರ ನೋಡಿದರೆ ರಾಜ್ಯಪಾಲರ ಕ್ರಮದಲ್ಲಿ ಏನೂ ತಪ್ಪಿಲ್ಲ.

ಎಲ್ಲಕ್ಕಿಂತ ಅಪಾಯಕಾರಿಯಾದದ್ದು ಚಿದಾನಂದ ಮೂರ್ತಿಗಳನ್ನು ಬೆಂಬಲಿಸಿ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು ಮತ್ತು ಅದಕ್ಕೆ ಕಾರಣವಾದ ನಮ್ಮ ಉದಾರವಾದಿ ಬುದ್ಧಿಜೀವಿಗಳ ಭೋಳೇಬೋಳೇ ಪುಗಸಿನ ನಿಲುವುಗಳು.

ಸೋಮಶೇಖರ್ ಆಯೋಗದ ವಿಕಟ ನ್ಯಾಯ; ಚಿ.ಮೂ. ಅವರ ವಿದ್ವತ್ ವಿಕಾರ

ಪ್ರಿಯರೆ,

ಸೋಮಶೇಖರ್ ಆಯೋಗ ತನ್ನ ವರದಿಯಲ್ಲಿ ಚರ್ಚ್ ದಾಳಿಗಳ ಕುರಿತು ಹೇಳಿದ ಸುಳ್ಳುಗಳನ್ನು ಪತ್ರಿಕೆಯು ಕಳೆದ ವಾರದ ಸಂಚಿಕೆಯಲ್ಲಿ ಪಾರ್ವತೀಶ. ಬಯಲು ಮಾಡಿದ್ದಾರೆ. ಅವರ ಬರಹಕ್ಕೆ ಪೂರಕವಾಗಿ, ಆಯೋಗದ ವಿಚಾರಣೆಯ ಸಂದರ್ಭದಲ್ಲಿ ನನಗೆ ಆದ ಅನುಭವವನ್ನು ಹೇಳವುದು ಪ್ರಸ್ತುತವೆನ್ನಿಸುತ್ತದೆ. 2008 ರ ಚರ್ಚ್ ದಾಳಿ ನಡೆದ ಊರುಗಳಲ್ಲಿ ಉಡುಪಿಯೂ ಒಂದು. ಹಾಗಾಗಿ ಸೋಮಶೇಖರ ಆಯೋಗ ತನ್ನ ವಿಚಾರಣೆಯ ಬೈಠಕನ್ನು ಇಲ್ಲಿಯೂ ನಡೆಸಿತ್ತು, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಉಡುಪಿ ಘಟಕ ಆಯೋಗಕ್ಕೆ ಇಲ್ಲಿನ ನ್ಯೂ ಲೈಫ್ ಪ್ರಾರ್ಥನಾ ಮಂದಿರದ ಮೇಲೆ ನಡೆದ ದಾಳಿ ಕುರಿತು ಒಂದು ಅಫಿಡವಿಟ್ ಸಲ್ಲಿಸಿತು. ಪ್ರಾಟೆಸ್ಟಂಟ್ ಪಂಥದ ಆ ಪ್ರಾರ್ಥನಾಮಂದಿರದ ಮೇಲೆ ಮತಾಂತರ ಆರೋಪ ಹೊರಿಸಿ ಈ ಹಿಂದೆಯೂ ಒಮ್ಮೆ ದಾಳಿ ನಡೆದಿತ್ತು, ಈ ಎರಡು ದಾಳಿಗಳೂ ಸಂಘಟಿತ ಗುಂಪು ನಡೆಸಿದ ಪೂರ್ವಯೋಜಿತ ಕೃತ್ಯಗಳಾಗಿದ್ದವು. ಆದರೆ ಉಡುಪಿಯ ನ್ಯೂ ಲೈಫ್ ಪ್ರಾರ್ಥನಾಮಂದಿರ ಮತಾಂತರದಲ್ಲಿ ತೊಡಗಿದಕ್ಕಾಗಲಿ, ಅಥವಾ ಆ ಉದ್ದೇಶದಿಂದ ಜನರಿಗೆ ಒತ್ತಡ ಪ್ರಲೋಭನೆ ಅಥವಾ ಬಲಾತ್ಕಾರ ಹೇರಿದ್ದರ ಬಗ್ಗೆಯಾಗಲಿ ಯಾವುದೇ ಸಾಕ್ಷ್ಯಾಧಾರವಿರಲಿಲ್ಲ, ಉಡುಪಿ ಆಸುಪಾಸಿನಲ್ಲಿ ಕ್ರೈಸ್ತ ಸಮುದಾಯ ಕಳೆದ ಮೂರು ಶತಮಾನಗಳಿಂದಲೂ ನೆಲೆಸಿದ್ದರೂ, ಇದುವರೆಗೆ ಆ ಸಮುದಾಯದ ಯಾವುದೇ ಸಂಸ್ಥೆ ಅಥವಾ ಮಂದಿರದ ವಿರುದ್ಧ ಸಾರ್ವಜನಿಕರು ಪ್ರತಿಭಟಿಸಿದ ವಿದ್ಯಮಾನವೂ ಸಂಭವಿಸಿಲ್ಲ,




ಚಿಮೂ

ಚರ್ಚ್ ದಾಳಿ ನಡೆದ ದಿನ ಉಡುಪಿಯ ನ್ಯೂ ಲೈಫ್ ಪ್ರಾರ್ಥನಾ ಮಂದಿರದಲ್ಲಿ ಹಾಜರಿದ್ದ ಹಲವು ಗಂಡಸರು ಮತ್ತು ಹೆಂಗಸರು ಹಾಗೂ ಆಸ್ಪತ್ರೆಗೆ ದಾಖಲಾದ ಐದಾರು ಗಾಯಾಳುಗಳನ್ನು ನಾವು ಮಾತಾಡಿಸಿದ್ದೆವು. ಅವರೆಲ್ಲರೂ ಆ ದಾಳಿ ರಾಜಕೀಯ ಉದ್ದೇಶದಿಂದ ನಡೆಸಿದ ಸಂಘಟಿತ ಕೃತ್ಯ ಎಂಬ ತಮ್ಮ ಅನ್ನಿಸಿಕೆಯನ್ನು ನಮಗೆ ಹೇಳಿಕೊಂಡಿದ್ದರು.

ಸೋಮಶೇಖರ್ ಆಯೋಗಕ್ಕೆ ನಾವು ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಸಂಗತಿಗಳನ್ನು ಯಥಾವತ್ತಾಗಿ ನಮೂದಿಸಿದ್ದೆವು. ಆದರೆ ಆಯೋಗ, ನಮ್ಮ ಈ ಹೇಳಿಕೆಯನ್ನು ಸಾಕ್ಷ್ಯ ಎಂದು ಪರಿಗಣಿಸಲು ನಿರಾಕರಿಸಿತು. ಆಯೋಗದ ಎದುರು ವೇದಿಕೆಯ ಪರವಾಗಿ ಹಾಜರಾದ ನನಗೆ ಅಧ್ಯಕ್ಷರು, "ನಿಮ್ಮ ಹೇಳಿಕೆಯನ್ನು ಒಂದು ಅಭಿಪ್ರಾಯ ಎಂದು ಭಾವಿಸಬಹುದೇ ಹೊರತು ಸಾಕ್ಷಿ ಎಂದಲ್ಲ" ಎಂದು ಹೇಳಿದರು. ನಮ್ಮ ಅಫಿಡವಿಟ್‌ನಲ್ಲಿ ಹೇಳಲಾದ ಸಂಗತಿಗಳು ಹಾಗೂ ಉಡುಪಿಯ ಕ್ರೈಸ್ತ ಸಮುದಾಯದ ಬಗ್ಗೆ ಆಯೋಗದ ಎದುರು ನನಗೆ ತುಂಬ ಹೇಳುವುದಿತ್ತು, ಆದರೆ ಆಯೋಗದ ಅಧ್ಯಕ್ಷರು ನನಗೆ ಈ ಅವಕಾಶವನ್ನೇ ಕೊಡಲಿಲ್ಲ, ಆಯೋಗದ ವಿಚಾರಣಾ ವೈಖರಿಯನ್ನು ನಾನು ಪ್ರತಿಭಟಿಸಲೇಬೇಕಾಯಿತು.

ಕ್ರೈಸ್ತ ಸಂಸ್ಥೆಗಳ 'ಮತಾಂತರ' ಮತ್ತು ಇನ್ನಿತರ 'ಅಕೃತ್ಯ'ಗಳ ಬಗ್ಗೆ ನಿರಾಧಾರ ಆರೋಪಗಳನ್ನೂ, ಕಟ್ಟುಕತೆಗಳನ್ನೂ ಸಾಕ್ಷಿ ಎಂಬಂತೆ ಹಿಂದೂತ್ವ ಸಂಘಟನೆಗಳವರು ಹೇಳುತ್ತಿದ್ದಾಗ ಆಯೋಗದ ಅಧ್ಯಕ್ಷರು ಅದನ್ನು ತಾಳ್ಮೆಯಿಂದ-ಯಾಕೆ-ಗೌರವಪೂರ್ವಕವಾಗಿಯೇ ಆಲಿಸುತ್ತಿದ್ದದನ್ನು ನಾನು ಕಣ್ಣಾರೆ ಕಂಡಿದ್ದೆ. ಹಾಗೆಯೇ ತಮ್ಮ ಮೇಲೆ ನಡೆದ ದಾಳಿ ಕುರಿತು ಸಾಕ್ಷ್ಯ ನೀಡಲು ಬಂದಿದ್ದ ಸ್ಥಳೀಯ ಕ್ರೈಸ್ತರನ್ನು, ಅದರಲ್ಲೂ ವಿಶೇಷವಾಗಿ ನ್ಯೂ ಲೈಫ್ ಪ್ರಾರ್ಥನಾ ಮಂದಿರದ ಪಾಸ್ಟರ್ ಗೋಪಿನಾಥ್ ಅವರನ್ನು ಕ್ರಿಮಿನಲ್ ಎಂಬಂತೆ ಹಿಂದೂತ್ವ ಸಂಘಟನೆಗಳ ವಕೀಲರು. ಪಾಟೀಸವಾಲು ನಡೆಸುತ್ತಿದ್ದುದನ್ನು ಅಧ್ಯಕ್ಷರು ಮೌನವಾಗಿ, ಸಮ್ಮತಿ ಪೂರ್ವಕವಾಗಿ ಆಲಿಸಿದ್ದನ್ನೂ ನಾನು ನೋಡಿದ್ದೆ. ಆದರೆ ಕೋಮು ಸೌಹಾರ್ದ ವೇದಿಕೆಯ ಅಫಿಡವಿಟ್ ಬಗ್ಗೆ ನನ್ನ ವಿವರಣೆಯನ್ನು ಕೇಳಲು ಅವರು ಸಿದ್ಧರಿರಲಿಲ್ಲ. ನಾನು ಅವರ ಪಕ್ಷಪಾತಿ ನಿಲುವನ್ನು ಪ್ರತಿಭಟಿಸಿ, ಆಯೋಗದ ಉದ್ದೇಶದ ಬಗ್ಗೆಯೇ ನನಗೆ ಸಂದೇಹವಿದೆ ಎಂದು ಏರು ಧ್ವನಿಯಲ್ಲಿ ಹೇಳಿದೆ. ಆಯೋಗದ ಅಧ್ಯಕ್ಷರು, "ಈಗ ನಿಮ್ಮ ವಿವರಣೆ ಕೇಳಲು ನನಗೆ ಸಮಯವಿಲ್ಲ; ಇನ್ನೂ ತುಂಬ ಸಾಕ್ಷಿಧಾರರನ್ನು ನಾನು ಆಲಿಸಬೇಕಾಗಿದೆ. ಇನ್ನೊಮ್ಮೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ" ಎಂದು ಹೇಳಿ ನಾನು ಕಟಕಟೆಯಿಂದ ಹೊರಹೋಗಲು ಸೂಚಿಸಿದರು. ನಾನು ಅವರ ಮಾತನ್ನು ಪಾಲಿಸಿದೆ; ಆದರೆ ಅವರು ಮಾತ್ರ ತಮ್ಮ ಮಾತನ್ನು ಉಳಿಸಿಕೊಳ್ಳಲಿಲ್ಲ.

ನ್ಯಾಯ ನಿರ್ಣಯದಲ್ಲಿ ಪ್ರತಿವಾದಿಯ ವಕ್ತವ್ಯವನ್ನು ನ್ಯಾಯಮೂರ್ತಿಗಳು ಅಗತ್ಯ ಆಲಿಸಲೇಬೇಕು. ಆದರೆ ಸೋಮಶೇಖರ್ ಆಯೋಗ ಮಾತ್ರ ಈ ಆಲಿಸುವಿಕೆ(ಹಿಯರಿಂಗ್)ಯ ಅವಕಾಶವನ್ನು ಕೋಮು ಸೌಹಾರ್ದ ವೇದಿಕೆಗೂ ಕೊಡಲಿಲ್ಲ; ಸಂತ್ರಸ್ತ ಕ್ರೈಸ್ತರಿಗೂ ಕೊಡಲಿಲ್ಲ, ಆಯೋಗದ ಏಕಪಕ್ಷೀಯ ಹಾಗೂ ಮನಸ್ವೀ ವಿಚಾರಣೆಯ ವೈಖರಿ ಕುರಿತು ನಾನು ಹಾಗೂ ದಾವಣಗೆರೆಯ ಚಂದ್ರಶೇಖರ ತೋರಣಘಟ್ಟ ಲೇಖನ ಬರೆದೆವು. ಆ ಬಗ್ಗೆ ದೂರು ದಾಖಲಿಸಿಕೊಂಡು ನಮಗೆ ಮತ್ತು ಲೇಖನ ಪ್ರಕಟಿಸಿದ ಪತ್ರಿಕೆಯ ಸಂಪಾದಕರಿಗೆ ಆಯೋಗ ನೋಟಿಸು ಜಾರಿ ಮಾಡಿ ತನ್ನೆದುರು ವಿಚಾರಣೆಗೆ ಹಾಜರಾಗುವಂತೆ ಒತ್ತಾಯಿಸಿತು. ಆಯೋಗದ ನೈಜ ಉದ್ದೇಶದ ಬಗ್ಗೆ ಲೇಖನಗಳಲ್ಲಿ ನಾವು ವ್ಯಕ್ತಪಡಿಸಿದ ಅನುಮಾನಗಳು ಈಗ ಅದರ ವರದಿಯಿಂದ ದೃಢಪಟ್ಟಿವೆ.



'ಕೋಮು ಗಲಭೆ' ಅರ್ಥಾತ್ ಅಲ್ಪಸಂಖ್ಯಾತರ ಮೇಲೆ ಹಿಂದೂತ್ವದ ಗುಂಪು ಹಲ್ಲೆಗಳು ನಡೆಯುವ ಹೆಚ್ಚಿನ ಸಂದರ್ಭಗಳಲ್ಲಿ ಪೊಲೀಸರು ತಯಾರಿಸುವ ಪ್ರಥಮ ಮಾಹಿತಿ (ಎಫ್‌ಐಆರ್) "ಘಟನೆ ನಡೆದಿರುವುದು ನಿಜ; ಆದರೆ ಆರೋಪಿಗಳು ಪತ್ತೆಯಾಗಿಲ್ಲ" ಎಂಬ ಒಕ್ಕಣೆಯನ್ನು ಒಳಗೊಂಡಿರುತ್ತದೆ. ಕರ್ನಾಟಕದ ಚರ್ಚ್ ದಾಳಿಗಳ ಕುರಿತ ಸೋಮಶೇಖರ್ ಆಯೋಗ ವರದಿ ಥೇಟು ಪೊಲೀಸ್ ಎಫ್‌ಐಆರ್‌ನಂತೆಯೇ ಇದೆ. ಚರ್ಚುಗಳ ಮೇಲೆ ದಾಳಿ ನಡೆದಿರುವುದು ನಿಜ ಎಂದು ಆಯೋಗ ಒಪ್ಪಿಕೊಳ್ಳುತ್ತದೆ. ಆದರೆ ಆ ದಾಳಿಗಳ ಹಿಂದೆ ಹಿಂದೂತ್ವ ಸಂಘಟನೆಗಳು ಇವೆ ಎಂದು ಹೇಳಲು ಸೂಕ್ತ ಸಾಕ್ಷ್ಯಾಧಾರಗಳಿಲ್ಲ ಎಂದು ಸಹ ಆಯೋಗದ ವರದಿ ಹೇಳುತ್ತದೆ. ಹಾಗೆ ಹೇಳುತ್ತಲೇ, ಕರ್ನಾಟಕದಲ್ಲಿ ಮತಾಂತರ ನಡೆಯುತ್ತಿದ್ದು ಸರ್ಕಾರ ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಆಯೋಗ ಶಿಫಾರಸ್ಸು ಮಾಡುತ್ತದೆ. ಕರ್ನಾಟಕದ ಜನಸಂಖ್ಯೆಯ ಕೇವಲ 2 ಪ್ರತಿಶತದಷ್ಟಿರುವ [illegible] ಸಮುದಾಯವನ್ನು ಈ ಸಮಾಜಕ್ಕೆ ಅನ್ಯ [illegible] ಅಪಾಯಕಾರಿ ಎಂದು ಆಯೋಗ ಭಾವಿಸಿರುವುದು [illegible] ವರದಿಯಿಂದ ಸ್ಪಷ್ಟವಾಗಿದೆ. ಬಿಜೆಪಿಯ ಫ್ಯಾಸಿಸ್ಟ್ ಅಜೆಂಡಾ[illegible] ಸರಿಹೊಂದುವಂತೆ ಸಿದ್ಧಪಡಿಸಲಾಗಿರುವ ವರದಿ [illegible] ಈಗ ಈ ವರದಿಯಿಂದ ಚಿದಾನಂದ ಮೂರ್ತಿಗಳಂ[illegible] ವಿದ್ವಾಂಸರಿಗೆ ತಮ್ಮ ದ್ವೇಷಪೂರಿತ ಸಿದ್ಧಾಂತಗಳ[illegible] ಪ್ರತಿಪಾದಿಸಲು ಅಧಿಕೃತ ಸಾಕ್ಷ್ಯಾಧಾರವೂ ದೊರೆತಂತಾ[illegible]

ಚಿದಾನಂದ ಮೂರ್ತಿಯವರಿಗೆ ಖಂಡಿತ ಅಭಿಪ್ರಾಯ ಸ್ವಾತಂತ್ರ್ಯವಿದೆ; ಅಭಿವ್ಯಕ್ತಿ ಸ್ವಾತಂತ್ರ್ಯವೂ ಇದೆ. ಆದರೆ ಅವರು ಬೆಂಬಲಿಸುವ ಬಿಜೆಪಿ ತಾನೊಲ್ಲದ ಅಭಿಪ್ರಾಯಗಳನ್ನು ಅಪರಾಧ ಎಂದು ಪರಿಗಣಿಸುತ್ತದೆ ಎಂಬುದ[illegible] ಪರಿವೆ ಮಾತ್ರ ಅವರಿಗೆ ಇಲ್ಲ. ಒಂದಾನೊಂದು ಕಾಲದಲ್ಲಿ ಅವರು ನಾಡ ನುಡಿಗಳ ಮಹತ್ವದ ಸಂಶೋಧಕರಾಗಿದ್ದರು ಎಂಬುದು ನಿಜ. ಆದರೆ ಇತ್ತೀಚಿಗಿನ ದಿನಗಳಲ್ಲಿ ಚಿದಾನಂದ ಮೂರ್ತಿ ತ[illegible] ವಿದ್ವತ್ತನ್ನು ಈ ನಾಡಿನ ಮುಸ್ಲಿಮರು ಮತ್ತು ಕ್ರೈಸ್ತ[illegible] ವಿರುದ್ಧ ಒಂದು ಹತ್ಯಾರ[illegible] ಬಳಸುತ್ತಿದ್ದಾರೆ. ಅದು ಯ[illegible] ಮಟ್ಟಕ್ಕೆ ಹೋಗಿದೆ ಎಂದ[illegible] ತಮ್ಮ ಪ್ರತಿಪಾದನೆಗಳಿಗೆ ವಿರುದ್ಧವಾಗಿರುವ ಸಾಕ್ಷ್ಯಾಧಾರಗಳನ್ನು ಮರೆಮಾಚಲು ಅಥವಾ ಅಲ್ಲಗಳೆಯ[illegible] ಸಹ ಈಗ ಅವರು ಹಿಂಜರಿಯುವುದಿಲ್ಲ, ಉದಾ: ಹಂ[illegible] ಸ್ಮಾರಕಗಳ ಬಗ್ಗೆ ಅವರು ಪತ್ರಿಕೆಗಳಲ್ಲಿ ಬರೆದಿರುವುದ[illegible] ಆ ಸ್ಥಳದ ಎಷ್ಟು ಸಾಕ್ಷ್ಯಾಧಾರಗಳನ್ನು ಅ[illegible] ಉದ್ದೇಶಪೂರ್ವಕವಾಗಿ ಓದುಗರಿಂದ ಮುಚ್ಚಿಟ್ಟ[illegible] ಎಂಬುದರ ಬಗ್ಗೆಯೇ ಒಂದು ಲೇಖನ ಬರೆಯಬಹು[illegible] ಮತಾಂತರಗಳ ಬಗ್ಗೆಯೂ ಅವರು ಹೊಸೆಯುತ್ತಿರುವ[illegible] ಇಂತಹದ್ದೇ ಹುಸಿ ವಿದ್ವತ್ತಿನ ಕಟ್ಟುಕತೆಗಳನ್ನು. ಹೀಗಿ[illegible] ಚಿದಾನಂದ ಮೂರ್ತಿಯವರಿಗೆ ಗೌರವ ಡಾಕ್ಟರೆ[illegible] ನಿರಾಕರಿಸಿದ್ದರ ಬಗ್ಗೆ ಅನಂತಮೂರ್ತಿ ಮೊದಲಾದ[illegible] ವ್ಯಕ್ತಪಡಿಸಿದ ಅಭಿಪ್ರಾಯ ಸರಳ ಮನಸ್ಸ ಎನ್ನಿಸು[illegible] ಫ್ಯಾಸಿಸ್ಟ್ ಸಿದ್ಧಾಂತದ ಬೌದ್ಧಿಕ ಒಳ ಹೆಣಿಗೆಗಳ ಕು[illegible] ಅಲಕ್ಷ್ಯದ ಧೋರಣೆ ಅದು. "ಒಳ್ಳೆತನ ಸಹಜವೇನ[illegible] ಒಳ್ಳೆತನ ಅಸಹಜವೂ ಅಲ್ಲ" ಎಂದು ಅಡಿಗರು [illegible] ಒಂದು ಕವಿತೆಯಲ್ಲಿ ಹೇಳಿದ್ದರು. ಆ ಮಾತನ್ನೇ [illegible] ಬದಲಾಯಿಸಿ ಹೇಳುವುದಾದರೆ ಕರ್ನಾಟಕದಲ್ಲಿ [illegible] ನ್ಯಾಯಪರರಾಗಿರುವುದು ಎಷ್ಟು ಸುಲಭ! ನ್ಯಾ[illegible] ಪರರಾಗಿರುವುದು ಎಷ್ಟು ಕಷ್ಟ!

• ಜಿ. ರಾಜಶೇಖ[illegible]

ದಲಿತ ಕೇರಿಗಳಲ್ಲಿ ಪಾದಯಾತ್ರೆಯ ಮರ್ಮವೇನು?

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗಸಂಸ್ಥೆಯಾದ ವಿಶ್ವ ಹಿಂದೂ ಪರಿಷತ್ತಿನ ಹಿರಿಯ ಪದಾಧಿಕಾರಿ ಆಗಿರುವ ಸ್ವಾಮೀಜಿಯೊಬ್ಬರು ದಲಿತ ಕೇರಿಗಳಿಗೆ ಭೇಟಿ ನೀಡಲಾರಂಭಿಸಿದ್ದನ್ನು ಒಂದು ಮಹತ್ವದ ಕ್ರಾಂತಿಕಾರಿ ಹೆಜ್ಜೆಯೆಂದು ಬಿಂಬಿಸಿ ಹಾಡಿಹೊಗಳಲಾಗುತ್ತಿದೆ. ಇದನ್ನೆಲ್ಲ ಕಂಡು ಇನ್ನೇನು ದಲಿತರ ಉದ್ಧಾರ ಆಗಿಯೇಬಿಟ್ಟಿತೆಂದು ಜನ ಭಾವಿಸಿದರೆ ಅದು ಅವರ ತಪ್ಪಲ್ಲ. ಏಕೆಂದರೆ ಪ್ರಚಾರದ ವೈಖರಿಯೂ ಅದರ ಅಬ್ಬರದ ಮಟ್ಟವೂ ಹಾಗಿದೆ. ದಲಿತರು ಮತಾಂತರಗೊಳ್ಳುವುದು ಪಾಪಕೃತ್ಯ ಹಿರಿಯರು ಶಪಿಸುವರೆನ್ನುತ್ತಾ ಭಗವದ್ಗೀತೆಯ ಪ್ರತಿಗಳನ್ನು ಹಂಚುತ್ತಿರುವ ಈ ಪ್ರಚಾರಪ್ರಿಯ ಕಾವಿಧಾರಿಗೆ ಈಗ ಇದ್ದಕ್ಕಿದ್ದಂತೆ ದಲಿತರ ಮೇಲೇಕೆ ಉಕ್ಕಿ ಹರಿಯುವ ಪ್ರೇಮ!!?? ವಿಶ್ವದ ಅತ್ಯಂತ ಶಕ್ತಿಯುತ ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಹುಡುಕಾಡಿದರೂ ಇದರಲ್ಲಿ ಲವಲೇಶದಷ್ಟಾದರೂ ದಲಿತ ಉದ್ಧಾರದ ನೈಜ ಕಾಳಜಿ ಕಂಡೀತೇ!!??



ವಾಸ್ತವದಲ್ಲಿ ಇದರ ಮೂಲವನ್ನು ಕೆದಕುತ್ತಾ ಹೋದಂತೆ ಅದು ತಲುಪುವುದೇ ಹಿಂದೂತ್ವ ಸಿದ್ಧಾಂತದ ಜನಕನೂ, ಹಿಂದೂ ಧರ್ಮ ದಲಿತರನ್ನು ಸದಾ ತನ್ನ ತೆಕ್ಕೆಯಲ್ಲಿಟ್ಟುಕೊಳ್ಳಬೇಕೆಂದು ಆದೇಶಿಸಿದಾತನೂ ಆದ ವಿ.ಡಿ.ಸಾವರ್ಕರ್‌ರ ಕಾಲಬುಡಕ್ಕೆ, ರಾಷ್ಟ್ರವ್ಯಾಪಿ ಭಯೋತ್ಪಾದನೆಯ ಜಾಲ ಬೆತ್ತಲಾಗುತ್ತಿರುವ ಇಂದಿನ ಸನ್ನಿವೇಶದಲ್ಲಿ 'ದಲಿತ ಜನ ಎಲ್ಲಾದರೂ ತಮ್ಮನ್ನು ನಡುನೀರಲ್ಲಿ ಕೈಬಿಟ್ಟರೆ?' ಎಂಬ ಆತಂಕಕ್ಕೊಳಗಾಗಿರುವ ಹಿಂದೂತ್ವವಾದಿಗಳ ಕನಸಲ್ಲಿ ಅವರ ಆರಾಧ್ಯದೈವ ಸಾವರ್ಕರ್ ಪ್ರತ್ಯಕ್ಷರಾಗಿರಬೇಕು. ತೋರು ಬೆರಳನ್ನು ಕುಣಿಸುತ್ತಾ 'ಎಚ್ಚರಿಕೆ, ಎಚ್ಚರಿಕೆ' ಎಂದಿರಬೇಕು. ಅಲ್ಪಸಂಖ್ಯಾತರ ವಿರುದ್ಧದ ಕಾರ್ಯಾಚರಣೆಗಳಿಗೆ ದಲಿತರನ್ನು ಪದಾತಿದಳವಾಗಿ ಉಳಿಸಿಕೊಳ್ಳಬೇಕಾದ ಅವಶ್ಯಕತೆಯ ಮಹತ್ವವನ್ನು ಮತ್ತೊಮ್ಮೆ ನೆನಪಿಸಿರಬೇಕು. ಅಸ್ಪೃಶ್ಯರನ್ನು ಹಿಂದೂ ಧರ್ಮದ ತೆಕ್ಕೆಯೊಳಗೆ ಇರಿಸಿಕೊಳ್ಳದಿದ್ದಲ್ಲಿ ಮೇಲ್ಜಾತಿ ಹಿಂದೂಗಳಿಗೆ ಇನ್ನಷ್ಟು ದುರಂತ ಕಾದಿದೆ ಅಲ್ಲದೆ "ಅವರಿಂದ ನಮಗೆ ಸಿಗುವ ಪ್ರಯೋಜನಗಳು ಇಲ್ಲವಾಗಲಿವೆ. ನಮ್ಮ ಸಮಾಜ ಒಡೆದು ಅಪಾರ ನಷ್ಟ ಅನುಭವಿಸಲಿದೆ" ಎಂದು ಮತ್ತೊಮ್ಮೆ ಎಚ್ಚರಿಸಿರಬೇಕು.

ಸಾವರ್ಕರ್ ಮಟ್ಟಿಗೆ ವೇದಗಳ ನಂತರ ಅತ್ಯಂತ ಪೂಜನೀಯ ಗ್ರಂಥವಾಗಿದ್ದುದು ಮನುಸ್ಮೃತಿ. ಆರ್ಯಾವರ್ತವು ಪ್ರಧಾನವಾಗಿ ಜಾತಿ ಪದ್ಧತಿಯನ್ನು ಆಧರಿಸಿರುವುದರಿಂದಲೇ ಹಿಂದೂ ಜನಾಂಗ ಪರಿಶುದ್ಧವಾಗಿ ಉಳಿದಿದೆಯೆಂದು ಮನಬಿಚ್ಚಿ ಹೇಳಿಕೊಂಡಿದ್ದಾರೆ. ಒಂದು ಬಲಿಷ್ಠ ರಾಷ್ಟ್ರವನ್ನು ಕಟ್ಟಲು ವರ್ಣಾಶ್ರಮ ಧರ್ಮದಂತಹ ನೈಸರ್ಗಿಕ ನಿಯಮದ ಅವಶ್ಯಕತೆ ಇದೆಯೆಂದು ವಾದಿಸಿದ್ದಾರೆ. ಜಾತಿ ಪದ್ಧತಿಯನ್ನು "ನಮ್ಮ ರಾಷ್ಟ್ರದ ಒಂದು ವಿಶಿಷ್ಟ ಗುರುತು" ಎಂದಿದ್ದ ಆತ, ಜಾತಿ ವ್ಯವಸ್ಥೆಯಿಲ್ಲದ ದೇಶವನ್ನು ಮ್ಲೇಚ್ಛ ದೇಶವೆಂದು ಕರೆದಿದ್ದಾರೆ. ಹಿಂದೆ ಬೌದ್ಧ ಧರ್ಮೀಯರು ಜಾತಿ ಪದ್ಧತಿಯನ್ನು ತೊಡೆದುಹಾಕಲು ಯತ್ನಿಸಿದಾಗ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಅಪಾಯ ಬಂದೊದಗಿತ್ತು; ಆದರೆ ಅದನ್ನು ಮರುಸ್ಥಾಪಿಸುವುದು ತಮ್ಮ ಪವಿತ್ರ ಕರ್ತವ್ಯವೆಂದು ಭಾವಿಸಿದ ರಾಜಮಹಾರಾಜರುಗಳಿಂದಾಗಿ ಕೊನೆಯಲ್ಲಿ ಚಾತುರ್ವರ್ಣ್ಯ ಪದ್ಧತಿಯೇ ಗೆದ್ದಿತೆಂದು ಅಭಿಪ್ರಾಯಿಸುತ್ತಾರೆ. ಇದನ್ನೆಲ್ಲ ತನ್ನ 'ಹಿಂದೂತ್ವ' ಪ್ರಬಂಧದಲ್ಲಿ ವಿವರಿಸಿದ್ದಾರೆ. "ಮನುಸ್ಮೃತಿಯೇ ಹಿಂದೂಗಳ ಮೂಲ ಕಾನೂನು. ಅದನ್ನು ಅಳವಡಿಸಿದರೆ ಹಿಂದೂ ರಾಷ್ಟ್ರವು ಅಜೇಯವಾಗುವುದು ಮತ್ತು ವಿಜಯಿಯಾಗಲು ಶಕ್ತವಾಗುವುದು" ಎಂದು 1940ರಲ್ಲಿ ಹಿಂದೂ ಮಹಾಸಭಾದ ಮಧುರೆಯ ಅಧಿವೇಶನದ ವೇಳೆ ಬೋಧಿಸಿದ್ದರು. ಹಿಂದೂತ್ವವಾದಿಗಳು ಇದನ್ನು ಅಕ್ಷರಶಃ ಪಾಲಿಸುತ್ತಾ ಬಂದಿದ್ದಾರೆ.

ಇಂತಹ ಕಟ್ಟರ್ ಜಾತಿವಾದಿ ಸಾವರ್ಕರ್ ಕೂಡಾ ಮೇಲ್ನೋಟಕ್ಕೆ ವಿರೋಧಾಭಾಸದಂತೆ ತೋರುವ ಕೆಲವು ಕಾರ್ಯಕ್ರಮಗಳನ್ನು ಅಂದು ನಡೆಸಿದ್ದ[illegible] ಹೇಳಿಕೆಗಳನ್ನು ನೀಡಿದ್ದರು. ಇಂದಿನ ದಲಿತ ಕೇರಿಯ ಪಾದಯಾತ್ರೆಗಳ[illegible] ಉದಾಹರಣೆಗೆ, ಹಿಂದೂಗಳು ಅಸ್ಪೃಶ್ಯರನ್ನು ಸಾಮಾಜಿಕವಾಗಿ ಮೇಲಕ್ಕೆತ್ತಬೇಕೆಂ[illegible] ಹೇಳುತ್ತಿದ್ದರು. ಅಸ್ಪೃಶ್ಯತೆಯ ವಿರುದ್ಧ ಕಾರ್ಯಕ್ರಮ ಏರ್ಪಡಿಸಿದರು. ಕೆಲವೊ[illegible] ಅವರಿಗೆ ದೇವಸ್ಥಾನಗಳೊಳಗೆ ಮುಕ್ತ ಪ್ರವೇಶ ದೊರೆಯಬೇಕೆಂದರು. ಬಾವಿಗಳ ನೀರನ್ನು ಅವರೊಂದಿಗೆ ಹಂಚಿಕೊಳ್ಳುವಂತೆ ಮೇಲ್ಜಾತಿಯ ಜನ[illegible] ಕರೆ ನೀಡಿದರು. ವಾಸ್ತವವಾಗಿ ಆತ ಇದನ್ನೆಲ್ಲ ಮಾಡಿದ್ದು ಯಾವು[illegible] ಸಮಾನತಾ ಭಾವನೆಯಿಂದಲ್ಲ, ಅದರ ಹಿಂದೆ ಕೆಲವು ನಿರ್ದಿಷ್ಟ ಲೆಕ್ಕಾಚಾರಗಳಿದ್ದ[illegible] ಹಿಂದೂತ್ವದ ಅಲ್ಪಸಂಖ್ಯಾತ ವಿರೋಧಿ ಕಾರ್ಯಾಚರಣೆಗಳಿಗೆ ದಲಿತರ [illegible] ಕಾಲಾಳುಪಡೆಯ ಭಾರೀ ಅವಶ್ಯಕತೆಯಿದೆ ಎಂಬುದನ್ನು ಮನಗಂಡಿದ್ದ ಸಾವರ್ಕ[illegible] ದಲಿತರು ಇಸ್ಲಾಂ ಮತ್ತು ಕ್ರೈಸ್ತ ಮತಕ್ಕೆ ಮತಾಂತರಗೊಳ್ಳುವುದ[illegible] ತತ್ಪರಿಣಾಮವಾಗಿ ಹಿಂದೂಗಳ ಜನಸಂಖ್ಯೆ ಕಡಿಮೆಯಾಗುವುದ[illegible] ತಡೆಯಲಿಚ್ಛಿಸುತ್ತಿದ್ದರು. "ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ಹೆ[illegible] ಸಾಮಾಜಿಕ ಸಮಾನತೆ ದೊರಕುವ ಭರವಸೆ ಇರುವುದರಿ[illegible] ಅಸ್ಪೃಶ್ಯರು ವಿಕಪ್ರಕಾರವಾಗಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮ[illegible] ಮತಾಂತರ ಹೊಂದುತ್ತಿದ್ದಾರೆ. ಮತಾಂತರದ ಪರಿಣಾಮ[illegible] ಹಿಂದೂಗಳ ಜನಸಂಖ್ಯೆ ಕ್ಷೀಣಿಸುತ್ತಿದೆ" ಎನ್ನುತ್ತ ದಲಿತರ[illegible] ಹಿಂದೂ ಧರ್ಮದೊಳಗೆ ಬಂಧಿಸಿಡಲೆಂದು ಮತಾಂತ[illegible] ಗುಮ್ಮವನ್ನು ಸೃಷ್ಟಿಸಿದ್ದೇ ಸಾವರ್ಕರ್. ಆ ಗುಮ್ಮವು ಇಂದಿ[illegible] ವ್ಯಾಪಕವಾಗಿ ಬಳಕೆಯಾಗುತ್ತಿರುವುದಲ್ಲದೆ ನ್ಯಾಯಾಂಗದ ಕೆ[illegible] ಮಂದಿಯನ್ನೂ, ಚಿಮೂರಂತಹ ಸಂಶೋಧಕರನ್ನೂ ಪ್ರಭಾವಿಸಿರುವ ಕ[illegible] ವಾಸ್ತವವನ್ನು ನಾವೆಲ್ಲರೂ ಕಂಡೇ ಇದ್ದೇವೆ.

ಈಗ ಹೇಳಿ ದಲಿತ ಕೇರಿಗಳಲ್ಲಿ ಪಾದಯಾತ್ರೆ ನಡೆಸುವುದರ ಮರ್ಮವೇ[illegible]

- ಸುರೇಶ್ ಭಟ್, ಬಕ್ರಬೈ[illegible]

(ಆಧಾರ: ಸಂಚುಲ್ ಇಸ್ಲಾಂ ಅವರು ಬರೆದ[illegible] 'ಸಾವರ್ಕರ್-ಸತ್ಯ ಮತ್ತು ಮಿ[illegible]

ಒಂದು ಪತ್ರ



ಮಂಗನ ಬ್ಯಾಟೆ

...ರೆಸ್ಟ್ ಇಲಾಖೆಯವರು ಮತ್ತು ಮುನ್ಸಿಪಾಲಿಟಿ ... ಏನೇನು ಉಪಚಾರ ಮಾಡಿದರೂ ಮಂಗಗಳನ್ನ ...ವ ಕೆಲಸ ಸುಲಭವಲ್ಲ ಅಂತ ಸಿದ್ದನಿಗೆ ಗೊತ್ತಿದ್ದರಿಂದ ...ದಲು ಅವನು ಮಂಗಗಳನ್ನು ಹಿಡಿಯಲು ...ರ್ ಒಪ್ಪಲಿಲ್ಲ. ಮೊದಲೇ ಸಿದ್ದನಿಗೆ ಫಾರೆಸ್ಟ್‌ನವರು ... ಅಲರ್ಜಿ. 'ಖಾಕಿ ಬಟ್ಟೆಯವರನ್ನು ಜನ್ಮದಾಗ ...ದರದು' ಎಂಬುದು ಅವನ ಅನುಭವದಿಂದ ಹುಟ್ಟಿ...ದ್ದ ಸಿದ್ಧಾಂತ. ಸಿದ್ದ ಹಿಂದೇಟು ಹಾಕುತ್ತಿರುವುದನ್ನು ...ದ ರೇಂಜ್ ಫಾರೆಸ್ಟರ್ ಸಿದ್ದ ಬಾಯಿ ಮಾತಿಗೆ ...ವನಲ್ಲ ಎಂದು ನಿರ್ಧರಿಸಿ ಆತನನ್ನ ಹತ್ತಿರ ಕರೆದು ...ತವಾಗಿ ಆತನ ಜೇಬಿನೊಳಗೆ ಎರಡು ದೊಡ್ಡ ...ಗಳನ್ನು ತುರುಕಿದರು.

...ಗಾದರು ಮಾಡಿ ಇವರಿಂದ ತಪ್ಪಿಸಿಕೊಳ್ಳಬೇಕಲ್ಲ ...ಸಿದ್ದ ಕೊನೆಗೆ "ನಾಲ್ಕು ದಿನ ಪುರುಸೊತ್ತು ಕೊಡಿ..." ಅಂದ.

...ಯ್ಯೋ ಮಾರಾಯ, ಮೇಲಿನ ಅಧಿಕಾರಿಗಳೆಲ್ಲ ಬಂದು ...ರೆ. ನಾವು ಅವರಿಗೆ ಮುಖ ತೋರಿಸಬೇಕಾ... ಏನಾದರು ಮಾಡಿ ಜೀವಂತವಾಗಿ ಮಠದ ...ಗಳನ್ನು ಹಿಡಿಯೋಕ್ಕೆ ಒಂದು ಪ್ಲಾನ್ ಮಾಡು. ...ವಸ್ಥೆಯನ್ನ ನಾವು ಮಾಡ್ತಿವಿ. ನಮ್ಮ ಇಡೀ ಸ್ಟಾಫು ...ಜೊತೆ ಇರ್ತೀವಿ" ಅಂದ್ರು ಸಾಹೇಬ್ರು.

"...ಗಲಿ, ನಾಳೆ ಬರ್ತೀನಿ ಸಾರ್" ಎಂದ ಸಿದ್ದ ಪೇಟೆ... ...ರಟ.


... ಬ್ರ್ಯಾಂಡಿ ಶಾಪಿನ ಹತ್ತಿರ ಹೋಗುತ್ತಿದ್ದಾಗ ವಡೇರ ... ಎದುರುಗಡೆಯಿಂದ ಬಂತು. 'ಕೆಲ್ಸ ಕೆಡ್ತು' ಅಂತ ...ಕ್ಕದಲ್ಲೇ ಇದ್ದ ಗೂಡಂಗಡಿಯಲ್ಲಿ ನೇತು ಹಾಕಿದ್ದ ...ಚಿಪ್ಸ್ ಪ್ಯಾಕೆಟ್‌ಗಳ ಸರದ ಹಿಂದೆ ಅವಿತು ನಿಂತ. ...ವಡೇರ ಕಾರ್ ಇವನನ್ನೇ ಹುಡುಕಿ ಬಂದಿದ್ದರಿಂದ ... ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳುವಂತಿರಲಿಲ್ಲ. ...ಬಲಗೈ ಬಂಟ ಗೋವಿಂದ ಕಾರಿನಿಂದ ಇಳಿದು ...ದ್ದಲ್ಲಿಗೆ ಬಂದ.

...ಟ್ಟ ಹೊತ್ತಿಗಾಗಲೇ ಸಿದ್ದ ಕಾಡು ... ಪೇಟೆ ಸೇರಿದ್ದರಿಂದ ಆತನನ್ನು ...ಕೊಂಡು ಗೋವಿಂದ ಪೇಟೆಗೇ ... ಏನಾಗಿತ್ತೆಂದರೆ ಹೊಸ ಕಾನೂನು ...ಗಿ ಸಿದ್ದ ಕಾಡಿಗೆ ಹೋಗಿ ಬೇಟೆ ...ತಿರಲಿಲ್ಲ. ಹಾಗೊಮ್ಮೆ ಆತ ಧೈರ್ಯ ...ಹೋದರೂ ಆ ಕೆಟ್ಟ ಮುಖದ ಗಾರ್ಡು ...ಳಿ ತರ ಎಲ್ಲೋ ಬಚ್ಚಿಟ್ಟುಕೊಂಡಿದ್ದು ...ಎದುರಾಗಿ ಸಿದ್ದನನ್ನು ಹಿಡಿದು ಹಿಂಸಿಸುತ್ತಿದ್ದ. ...ಹೊತ್ತಿಗೆ ಮಂಗನ ಬ್ಯಾಟೆಯೂ ನಿಂತಿದ್ದು ...ಂದಿಗೆ ಮತ್ತೊಂದು ಅಪಾಯಕಾರಿ ಬೆಳವಣಿ... ನಡೆದಿತ್ತು, ಅದೇನೆಂದರೆ ಸರ್ಕಾರ ಬೈಸೆ ಕಳ್ಳು ...ಮಾಡಿ ಸರ್ಕಾರಿ ಸಾರಾಯಿಯನ್ನು ಜಾರಿಗೆ ತಂದಿತ್ತು. ...ನಕ ಬೈಸೆ ಕಳ್ಳನ್ನು ಬೆಳಗ್ಗೆ ಸಂಜೆ ಎಂದೆಲ್ಲ ನೋಡದೆ ... ಆರಾಮಾಗಿದ್ದ ಸಿದ್ದ ಕಂಗಾಲಾದ.

...ಸಿಗೆ ಐವತ್ತು ವರ್ಷವಾಗಿದ್ದರೂ ಆತನನ್ನು ...ರೆ ಹಾಗೆ ಕಾಣುತ್ತಿರಲಿಲ್ಲ, ಅವನು ಎಂದೂ ...ಕ್ಟರ್ ಕೊಡುವ ಗುಳಿಗೆಯನ್ನು ನುಂಗಿದವನಲ್ಲ, ...ಂದ ಚುಚ್ಚಿಸಿಕೊಂಡವನಲ್ಲ, ಇಂತಹ ಸಿದ್ದನಿಗೆ ...ಗಿ ಹಳ್ಳಿಯಲ್ಲಿ ಕಷ್ಟಕರವಾಯಿತು. ಕುಡಿಯುವ ...ತ್ತ, ಹೊಟ್ಟೆಗೆ ಬರುವ ... ಸಿದ್ದ ...ಂಡ. ಕಡೆಗೆ ಪೇಟೆಯಲ್ಲೇ ಉದ್ಯೋಗವನ್ನು ...ರಂಭಿಸಿದ. ಮರ ಹತ್ತುವಲ್ಲಿ ಆತ ನಿಸ್ಸೀಮನಾಗಿದ್ದ ... ...ತೆಗೆಯುವ ಕಸುಬು ಮಾಡಿಕೊಂಡಿದ್ದ. ಜೊತೆಗೆ ...

ಇವೆಲ್ಲದರ ನಡುವೆ ಸಿದ್ದನಿಗೆ ಹಕ್ಕಿಪಿಕ್ಕಿ ಜನರೊಂದಿಗೆ ಸಂಪರ್ಕ ಏರ್ಪಟ್ಟಿತು. ಇವನಂತೆಯೇ ಅರಣ್ಯವನ್ನಾಧರಿಸಿ ಜೀವನ ನಡೆಸುತ್ತಿದ್ದ ಹಕ್ಕಿಪಿಕ್ಕಿಯವರೂ ಫಾರೆಸ್ಟ್ ಇಲಾಖೆಯವರ ನಿರ್ಬಂಧಕ್ಕೆ ಗುರಿಯಾಗಿದ್ದರು. ಪರಿಣಾಮವಾಗಿ ಅವರು ಕಾಡಿನಿಂದ ಹುಲಿಯ ಉಗುರು, ನವಿಲೆಣ್ಣೆ, ಪುಣಿಗನಬೆಕ್ಕಿನ ಬೊಟ್ಟು ಕಸ್ತೂರಿ ಮಾತ್ರೆಯಂಥ ಅಮೂಲ್ಯ ಪದಾರ್ಥಗಳನ್ನು ಪಡೆಯುವುದು ದುಸ್ತರವಾಗಿತ್ತು. ಅದ್ದರಿಂದ ಅವರು ಅವುಗಳನ್ನೆಲ್ಲ ಕೃತಕವಾಗಿ ತಯಾರಿಸಿ ಪೇಟೆಯವರಿಗೆ ಮಾರಲಾರಂಭಿಸಿದ್ದರು. ಭಾಷೆಯೊಂದನ್ನು ಬಿಟ್ಟು ಹಕ್ಕಿಪಿಕ್ಕಿ ಜನರ ಹಿನ್ನೆಲೆ ಮತ್ತು ತನ್ನ ಹಿನ್ನೆಲೆಯೂ ಒಂದೇ ತರಹ ಇದೆ ಎಂದು ಬಾರಿಸಿದ ಸಿದ್ದ ಅವರೊಂದಿಗೆ ಬಹಳಬೇಗ ಹೊಂದಾಣಿಕೆ ಮಾಡಿಕೊಂಡ. ಆ ಸಮುದಾಯದೊಂದಿಗಿನ ಸ್ನೇಹವು ಹಕ್ಕಿಪಿಕ್ಕಿಯವಳೊಬ್ಬಳೊಂದಿಗಿನ ಸಂಬಂಧವಾಗಿ ಮಾರ್ಪಟ್ಟು ಅವಳೊಂದಿಗೆ ಸಿದ್ದನ ಸಂಸಾರವೂ ಶುರುವಾಯಿತು. ಇದೆಲ್ಲ ಜೊತೆಗೂಡಿದ್ದರ ಪರಿಣಾಮ ಸಿದ್ದ ಹಳ್ಳಿ ಬಿಟ್ಟು ಪೇಟೆ ಪಕ್ಕದ ಜನತಾ ಕಾಲೋನಿಯಲ್ಲಿನ ಹೊಸ ಮನೆಯಲ್ಲಿ ಹೊಸ ಹೆಂಡತಿಯೊಂದಿಗೆ ಬದುಕಲಾರಂಭಿಸಿದ್ದ.

ಇದಕ್ಕೂ ಮುನ್ನ ತನ್ನ ಹಳೆ ಹೆಂಡತಿಯನ್ನು ಮತ್ತು ವಯಸ್ಸಿಗೆ ಬಂದಿದ್ದ ಮಕ್ಕಳನ್ನು ಅಪರೂಪಕ್ಕಾದರೂ ನೋಡಲು ಹೋಗುತ್ತಿದ್ದ ಸಿದ್ದ ಇತ್ತೀಚೆಗೆ ಊರಿಗೆ ಹೋಗುವುದನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದ. ಸಿದ್ದನ ಈ ನಡವಳಿಕೆ ಬಗ್ಗೆ ಹಳ್ಳಿಯಲ್ಲಿ ಪುಕಾರೆದ್ದು ಅದು ವಡೇರ ತನಕ ಹೋಗಿತ್ತು. ಪೇಟೆಯಲ್ಲಿ ಗೋವಿಂದ ಕಂಡಕೂಡಲೇ ತನ್ನ ವಿಚಾರಣೆ ನಡೆಸಲೆಂದು ವಡೇರು ಆತನನ್ನು ಕಳುಹಿಸಿರಬೇಕು ಎಂದು ಸಿದ್ದ ಭಾವಿಸಿದ. ಆದ್ದರಿಂದ "ಏನು ಗೋವಿಂದಯ್ಯರು ಇಲ್ಲಿ?" ಅಂತ ಹೇಳಿ "ನಾನು ಯಾರನ್ನೋ ತುರ್ತಾಗಿ ನೋಡಬೇಕು" ಅಂತ ಹೇಳಿ ಅಲ್ಲಿಂದ ತಪ್ಪಿಸಿಕೊಳ್ಳಲು ಅನುವಾದ.



ಸಿದ್ದನಿಗೆ ವಡೇರರಿಗಿಂತ ಗೋವಿಂದ ಅಂದರೆ ಹೆಚ್ಚು ಭಯ ಭಕ್ತಿ. ಅದಕ್ಕೆ ಕಾರಣ ಗೋವಿಂದ ವಡೇರರಿಗಿಂತಲೂ ಹೆಚ್ಚು ಗತ್ತಿನವನಾಗಿದ್ದದ್ದು. ಸಿದ್ದ ಹಳ್ಳಿಯಲ್ಲಿದ್ದಾಗ ಗೋವಿಂದನೇ ಅವನ ಶಿಕಾರಿ ಗುರುವಾಗಿದ್ದ. ಬಂದೂಕಿನ ಶಿಕಾರಿಯಲ್ಲಿ ಗೋವಿಂದ ಎತ್ತಿದ ಕೈ. ಆತ ಬ್ರಾಹ್ಮಣರ ಮನೆಯಲ್ಲಿ ಇದ್ದುದ್ದರಿಂದ ಆತ ಮಾಂಸ ತಿನ್ನುತ್ತಿರಲಿಲ್ಲ. ಆದರೂ ಕಾಡು ಶಿಕಾರಿ ಅವನ ವಿಶೇಷ ಚಟಗಳಲ್ಲಿ ಒಂದಾಗಿತ್ತು. ಆತ ಕಾಡು ಹೊಡೆದ ಅಂದರೆ ಶಿಕಾರಿ ಬೀಳುವುದು ನೂರಕ್ಕೆ ನೂರು ಗ್ಯಾರಂಟಿ. ಒಮ್ಮೆ ಗೋವಿಂದ ಹುಲಿಯೊಂದನ್ನು ಹೊಡೆದ ಮೇಲೆ ಅವನ ಖ್ಯಾತಿ ಇಮ್ಮಡಿಯಾಗಿತ್ತು.

ಸಿದ್ದ ಹೊರಡಲು ಬಿಡದ ಗೋವಿಂದ "ಏನು ಸಿದ್ದ ಊರು ಕಡೆ ಹತ್ತೇನೆ ಇಲ್ಲಾ, ಪ್ಯಟೇಲೆ ಬಾರಿ ದುಡಿಮೆ ಮಾಡ್ತಿದ್ದೀಯಂತೆ, ಹಕ್ಕಿಪಿಕ್ಕಿಯವರ ಜಾತಿಗೆ ಸೇರಿದ್ದೀಯಂತೆ" ಎಂದು ಪೀಠಿಕೆ ಹಾಕಿದ.

"ಎಂಥಾ ಮಾಡೋದು ಮಾರಾಯ್ರು. ದುಡ್ಡುಯಂತ ಮಣ್ಣು ಪೇಟೇಲಿ ಒಂದಕ್ಕೆ ನಾಕು. ಎಲ್ಲದ್ಕೂ ದುಡ್ಡು ತೆತ್ತಬೇಕು" ಅಂತ ಹೇಳಿದ ಸಿದ್ದ ಅಲ್ಲಿಂದ ಹೊರಡಲು ಅವಸರ ಮಾಡಿದ.

"ನಿಲ್ಲು ಮಾರಾಯ. ನಿನ್ನಿಂದ ಒಂದು ದೊಡ್ಡ ಉಪಕಾರ ಆಗಬೇಕು. ವಡೇರೆ ಕೂಡ್ಲೆ ನಿನ್ನ ಕರಕೊಂಬಾ ಅಂಥಾ ಕಾರ್ ಕಳಿಸಿದಾರೆ" ಅಂದ ಗೋವಿಂದ.

"ನನಗೆ ಕಾರು ಎಂತಕ್ಕಂತೆ? ನಾನು ಬಂದು ಅವರ್ನ ಕಾಣ್ತೆನಿ" ಅಂದ ಸಿದ್ದ.

"ಅದಲ್ಲ ಮಾರಾಯ. ಮಠದ ಮಂಗಗಳು ಸೊಕ್ಕಿ ಗುರುಗಳ ಮ್ಯಾಲೆ ಹಾರ್ತವೆ. ಅವಕ್ಕೊಂದು ಗತಿ ಕಾಣಿಸ್‌ಬೇಕು. ಅದಕ್ಕೆ ನೀನ್ ಬರಬೇಕಂತೆ."

"ಅದಕ್ಕೆಂತ ಮಾರಾಯರೇ ನೀವು ಹುಲಿ ಹೊಡೆದೋರು. ಕೋವಿ ತಂದು ಹೋರಿ ಮಂಗನ್ನ ಹುಡ್ಕಿ ಎರಡು ತೋಟ (ಗುಂಡು) ಖರ್ಚು ಮಾಡಿದರೆ ಆಯಿತು" ಅಂದ ಸಿದ್ದ.

"ನೀನ್ ಅದೆಂತ ಮಾತಾಡ್ತಿಯಾ. ಅವು ಮಠದ ಮಂಗಗಳು. ಅವುನ್ನ ಹೊಡೆದು ಸಾಯಿಸಂಗಿಲ್ಲ. ಹುಷಾರಾಗಿ ಹಿಡೀಬೇಕು. ಜೀವ ಸಹಿತ ಬೋನಿಗೆ ತುಂಬಿಸಬೇಕು. ಫಾರೆಸ್ಟ್‌ನವರೂ ಬರುತ್ತಾರಂತೆ."

"ಫಾರೆಸ್ಟ್‌ನವ್ರು ಹೇಳ್ತಾರ ಅಂತ ನೀವು ನಂಬ್ತೀರಲ್ಲಾ? ಜೀವಂತ ಬೋನಿಗೆ ತುಂಬಕ್ಕೆ ಆವೇನು ಹುಲಿನಾ? ಮಂಗಗಳು ನೆಲದ ಮ್ಯಾಲೆ ಓಡಾಡ್ತಾವ? ಅದೆಲ್ಲ ಎಲ್ಲಿ ಆತದೆ?" ಎಂದ ಸಿದ್ದ.

"ಅಯ್ಯೋ ಮಾರಾಯ. ಹಂಗಂದ್ರೆ ಹೆಂಗೆ. ಏನಾರು ಮಾಡ್ಬೇಕು. ವಡೇರು ಮಠದಲ್ಲವ್ರೆ. ನೀನ್ ಇಲ್ಲೇ ಇರು. ನಾನು ಮಾತಾಡಿಕೊಂಡು ಬರ್ತಿನಿ" ಎಂದು ಗೋವಿಂದ ಹೊರಟಾಗ ಸಿದ್ದ "ಹಂಗಾರೆ ನಾನು ಸೇತುವೆ ಹತ್ರ ಇರ್ತಿನಿ" ಅಂದ. ಗೋವಿಂದ ಹೋಗುವುದನ್ನೇ ಕಾದು ಒಂದು ಕ್ವಾಟ್ರು ಹಾಕಿಕೊಂಡರೆ ಮಂಗಗಳನ್ನು ಬೋನಿಗೆ ಹಾಕೋದು ಹೇಗೆ ಎಂದು ಒಳ್ಳೆ ಐಡಿಯಾ ಹೊಳೆಯಬಹುದು ಅಂತ ಸಾರಾಯಿ ಅಂಗಡಿಗೆ ಸಿದ್ದ ನುಗ್ಗಿದ. ಅಲ್ಲಿ ಚಕಚಕನೆ ಒಂದು ಕ್ವಾಟ್ರು ಏರಿಸಿ ರೋಯ್ ಅಂತ ಸೇತುವೆ ಕಡೆಗೆ ಸಿದ್ದ ಹೊರಟ.

ಅರ್ಧ ಗಂಟೆಯ ನಂತರ ಹಿಂದಿರುಗಿದ ಗೋವಿಂದ ಸಿದ್ದನನ್ನು ಮಿಲಿಟ್ರಿ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ಅವನಿಗೆ ಊಟ ಕೊಡಿಸಿದ. ಸಿದ್ದ ಹೊಟ್ಟೆ ತುಂಬ ಊಟಮಾಡಿದ ನಂತರ ಅವರಿಬ್ಬರ ನಡುವೆ ಚರ್ಚೆ ಪ್ರಾರಂಭವಾಯಿತು.

"ಮಂಗಗಳನ್ನು ಹಿಡಿಯೋ ಬೋನನ್ನು ತಯಾರಿಸಲು ಅಡಿಕೆ ಮರ ಬೇಕಲ್ಲ" ಅಂದ ಸಿದ್ದ.

"ಅದಕ್ಕೇನು ಮಾರಾಯ. ವಡೇರ ತೋಟಕ್ಕೆ ಹಳದಿ ಎಲೆರೋಗ ಬಂದು ಇಡೀ ತೋಟಕ್ಕೆ ತೋಟಾನೆ ಕೆಂಪಾಗಿ ನಿಂತಿದೆ. ನಿಂಗ್ಯಾವ ಮರಬೇಕು ಹೇಳು, ಅದಕ್ಕೆಲ್ಲ ನಾನು ವ್ಯವಸ್ಥೆ ಮಾಡ್ತಿನಿ" ಎಂದು ಗೋವಿಂದ ಉತ್ತರಿಸಿದ.

"ಮಂಗಗಳು ಮೂರು ಲೋಕದ ಬುದ್ಧಿ ಕಲಿತವು. ಅವಕ್ಕೆ ಬೋನು ಮಾಡಬೇಕಾದರೆ ರಾಘವಾಚಾರ್ಯನೇ ಸೈ" ಅಂದ ಸಿದ್ದ.

ಸಿದ್ದನ ಮಾತು ಕೇಳಿ ಗೋವಿಂದನಿಗೆ ಚಿಂತೆಯಾಯಿತು. ಕಾರಣ ರಾಘವೇಂದ್ರ ಆಚಾರಿಗೂ ವಡೇರ ಮನೆಯವರಿಗೂ ಅಷ್ಟಕ್ಕಷ್ಟೆ ಎಂಬಂತಹ ಪರಿಸ್ಥಿತಿ ಇತ್ತು. ರಾಘವಾಚಾರಿ ಯಾವುದೇ ಕೆಲಸ ಮಾಡಿದರೂ ಅದರ ಬಗ್ಗೆ ಯಾರೂ ಎರಡು ಮಾತು ಆಡುತ್ತಿರಲಿಲ್ಲ. ಅದು ಕಬ್ಬಿಣದ ಕೆಲಸವಾಗಿರಲಿ, ಮರದ ಕೆಲಸವಾಗಿರಲಿ, ವಿಗ್ರಹವನ್ನೇ ಕೆತ್ತಲಿ ಅದೆಲ್ಲವನ್ನು ರಾಘವ ಆಚಾರ್ಯ ಕಟ್ಟುನಿಟ್ಟಾಗಿ ಮಾಡುತ್ತಿದ್ದ.



● ಕಲ್ಕುಳಿ ವಿಠ್ಠಲ ಹೆಗ್ಡೆ

ಆತನೇ ಹೇಳಿಕೊಳ್ಳುವಂತೆ ಬೇಲೂರು ಮತ್ತು ಶೃಂಗೇರಿ ದೇವಸ್ಥಾನಗಳನ್ನು ಕೆತ್ತಿದವನು ಅವನ ಅಜ್ಜನ ಅಜ್ಜನಂತೆ. ಈ ರಾಘವಾಚಾರಿಗೆ ಬ್ರಾಹ್ಮಣರೆಂದರೆ ಆಗುತ್ತಿರಲಿಲ್ಲ. ಬ್ರಾಹ್ಮಣರಿಗೆ ಈತ ಎಂಥ ಕೆಲಸ ಮಾಡಿಕೊಟ್ಟರೂ ಅವರು ಇವನ ಪೂರ್ಣ ಹೆಸರನ್ನು ಹಿಡಿದು ಕರೆಯುತ್ತಿರಲಿಲ್ಲ. ಅದಕ್ಕೆ ಕಾರಣ ಅವನ ಹೆಸರು ಬ್ರಾಹ್ಮಣರ ಹೆಸರಿನಂತಿದ್ದದ್ದು. ಅದಕ್ಕೆ ಅವರು ಆತನನ್ನು 'ರಾಘು ಆಚಾರಿ' ಎಂದು ಕರೆದು ಅವನ ಸ್ವಾಭಿಮಾನಕ್ಕೆ ಅವಮಾನ ಮಾಡುತ್ತಿದ್ದರು. ಹಿಂದೊಮ್ಮೆ ಈ ರಾಘವೇಂದ್ರ ಆಚಾರಿ ವಡೇರ ದೇವಸ್ಥಾನಕ್ಕೆ ಕಾಣಿಕೆ ಹುಂಡಿ ಮಾಡಿಕೊಟ್ಟು ಅದಕ್ಕೆ ಕಳ್ಳ ಕೀಲಿಕೈ ಮಾಡಿಟ್ಟುಕೊಂಡಿದ್ದ. ಇತ್ತೀಚೆಗೆ ಯಾರೋ ಆ ಕಾಣಿಕೆ ಹುಂಡಿಯಿಂದ ಹಣ ದೋಚಿಕೊಂಡು ಹೋಗಿದ್ದಾರೆ. ಇದರ ಹಿಂದೆ ಆಚಾರಿಯ ಕೈವಾಡವಿದೆ ಎಂದೆಲ್ಲ ವಡೇರು ಪುಕಾರು ಹಬ್ಬಿಸಿದ್ದರು. ಈ ಕಾರಣಕ್ಕೇ ವಡೇರರನ್ನು ಕಂಡರೆ ಆಚಾರಿಗೆ ಆಗುತ್ತಿರಲಿಲ್ಲ.

ಗೋವಿಂದ ಇದರ ಬಗ್ಗೆಯೇ ಯೋಚಿಸುತ್ತಿದ್ದಾಗ "ಆಚಾರನ್ನ ನಾನ್ ನೋಡಿಕೊಳ್ತೆ. ನೀವು ಉಳಿದ ವ್ಯವಸ್ಥೆ ಮಾಡಿ" ಎಂದು ಸಿದ್ದ ಹೇಳಿದ. ಅದಕ್ಕೆ ಕಾರಣ ಆಚಾರರ ಒಂದು ವೀಕ್‌ನೆಸ್ ಬಗ್ಗೆ ಸಿದ್ದನಿಗೆ ಗೊತ್ತಿದ್ದದ್ದು. ಆಚಾರರನ್ನು ನೋಡಲು ಹೋಗುವಾಗಲೆಲ್ಲ ಸಿದ್ದ ಪೇಟೆಯಿಂದ ಒಂದೆರಡು ಕ್ವಾಟ್ರು ಬಾಟಲಿಗಳನ್ನು ಮುಚ್ಚಿಟ್ಟುಕೊಂಡು ಹೋಗುತ್ತಿದ್ದ. ಆಚಾರರು ಕದ್ದುಮುಚ್ಚಿ ಕುಡಿಯುವ ವಿಷಯ ಸಿದ್ದನನ್ನು ಬಿಟ್ಟರೆ ಬ್ಯಾರೆ ಯಾರಿಗೂ ಗೊತ್ತಿರಲಿಲ್ಲ. ಹೀಗಾಗಿ ಆಚಾರರು ಸಿದ್ದನ ಪ್ಲಾನಿನಂತೆ ಬೋನು ತಯಾರಿಸಿ ಕೊಡಲು ಒಪ್ಪಿಕೊಳ್ಳುತ್ತಾರೆ ಎಂಬ ಭರವಸೆ ಸಿದ್ದನಿಗಿತ್ತು.

"ತಡ ಆಯ್ತು ಮಾರಾಯಾ. ಮುನ್ಸಿಪಾಲಿಟಿಲಿ ನಿನ್ನ ಕೂರಸ್ಕೊಂಡು ವಡೇರು ಮೀಟಿಂಗ್ ಮಾಡ್ತರಂತೆ. ಬೇಗ ಬರಕ್ಕೆ ಹೇಳ್ಯಾರೆ, ಹೋಗನ ಏಳು" ಎಂದ ಗೋವಿಂದ.

ಪೇಟೆಗೆ ಬಂದಮೇಲೆ ಬದಲಾಗಿದ್ದ ಸಿದ್ದನ ವೇಷ ನೋಡಿ ಅವನ ಅಳತೆದ ಒಂದು ಅಂಗಿ, ಮುಂಡು ಪಂಚೆ, ಹೆಗಲ ಮೇಲೆ ಹಾಕಿಕೊಳ್ಳುವುದಕ್ಕೆ ಒಂದು ಟವಲ್ ಅನ್ನು ಸಿದ್ದನಿಗೆ ಕೊಡಿಸಿದ ಗೋವಿಂದ ಅಂಗಡಿಯಲ್ಲೇ ಸಿದ್ದ ಬಟ್ಟೆ ಬದಲಾಯಿಸಲು ಹೇಳಿದ. ಸಿದ್ದನ ಹಳೆಬಟ್ಟೆಗಳನ್ನು ಅಂಗಡಿಯವರು ಕೊಟ್ಟ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಕೊಂಡು ಮುನ್ಸಿಪಾಲಿಟಿಗೆ ಹೊರಟರು. ಅಲ್ಲಿಯವರೆಗೂ ಸಿದ್ದನಿಗೆ ಮಠದ ಮಂಗಗಳು ಗುರುಗಳ ಮೇಲೆ ದಾಳಿ ಮಾಡಿದ್ದರ ಪರಿಣಾಮವಾಗಲಿ, ತನ್ನ ಅವಶ್ಯಕತೆಯ ಬಗ್ಗೆಯಾಗಲಿ ಗೊತ್ತೇ ಇರಲಿಲ್ಲ. ಮುನ್ಸಿಪಾಲಿಟಿ ತಲುಪಿ ನೋಡಿದರೆ ಅಲ್ಲಿ ಇಡೀ ಸರ್ಕಾರವೇ ಸೇರಿದೆ. ನಾನಾತರದ ಕಾರುಗಳು, ಜೀಪುಗಳು, ಅಧಿಕಾರಿಗಳು, ಪೊಲೀಸರು, ಫಾರೆಸ್ಟ್ ಇಲಾಖೆಯವರೆಲ್ಲ ಅಲ್ಲಿದ್ದಾರೆ. ಅವರನ್ನೆಲ್ಲ ನೋಡಿ ಸಿದ್ದ ಅಂಜಿದ. ಆದರೆ ಗೋವಿಂದ "ಏನೂ ಯೋಚನೆ ಮಾಡಬೇಡ. ಯಾವುದಕ್ಕೂ ಮುಲಾಜು ಮಾಡಬೇಡ. ನೀನ್ ಹೇಳ್ದಂಗೆ ಎಲ್ಲಾ ಆತದೆ. ನೀನ್ ಮಂಗನ್ನೆ ಹೆಂಗೆ ಹಿಡೀತಿ, ನಿನಗೇನು ಬೇಕು ಅದನ್ನು ಹೇಳು" ಅಂದ.

ಮೊದಲಾಗಿದ್ದರೆ ಅಲ್ಲಿದ್ದವರೆಲ್ಲ ಸಿದ್ದನನ್ನು ಕಾಲು ಕಟ್ಟಿ ಹೊತ್ತುಕೊಂಡು ಹೋಗುತ್ತಿದ್ದರು. ಆದರೀಗ ಅವರೆಲ್ಲ ಆತನಿಗಾಗಿ ಕಾದು ಕೂತಿದ್ದಾರೆ. ಆದರೆ ಸಿದ್ದ ಕೂಡ ಈಗ ಸ್ವಲ್ಪ ಬದಲಾಗಿದ್ದ. ಹಕ್ಕಿಪಿಕ್ಕಿಯವರ ಜೊತೆ ಸೇರಿ ಊರೂರು ತಿರುಗಿದ ಮೇಲೆ ಪ್ಯಾಂಟ್ ಹಾಕಿದ ಪ್ಯಾಟೆ ಜನ ಎಂಥವರು ಅಂಥ ಸಿದ್ದ ತಿಳಿದುಕೊಂಡಿದ್ದ. ಅವನ ಪ್ರಕಾರ ಪೇಟೆ ಜನ ದುರಾಶೆಯವರು, ಸುಲಭಕ್ಕೆ ದುಡ್ಡು ಸಿಗುತ್ತದೆ ಅಂತ ಗೊತ್ತಾದರೆ ಹೊಳೆಗೂ ಹಾರುವವರು. ನಾಯಿ ಉಗುರನ್ನು ಹುಲಿ ಉಗುರು ಅಂತ ಹೇಳಿ, ಅದನ್ನು ಕುತ್ತಿಗೆಗೆ ಕಟ್ಟಿಕೊಂಡರೆ ಎಂಥವಳಾದರೂ ದಕ್ಕುತ್ತಾಳೆ ಎಂದು ನಂಬಿಸಿದರೆ ಆ ಉಗುರಿಗೆ ಎರಡು ಸಾವಿರ ರೂಪಾಯಿಗಳನ್ನು ತೆತ್ತಿ, ಅದನ್ನು ಚಿನ್ನದ ಚೈನಿಗೆ ನೇತುಹಾಕಿಕೊಳ್ಳುವ ಜನ ಪ್ಯಾಟೆ ಮಂದಿ. ಹಾಗೆಯೇ ನಾಯಿ ಅಥವಾ ನರಿ ಚರ್ಮ ಸುತ್ತಿ ಅದಕ್ಕೆ ಬಣ್ಣ ಹಚ್ಚಿ ಅದು ಹುಲಿಯ ಚರ್ಮ ಎಂದು ನಂಬಿಸಿದರೆ ಅದಕ್ಕೆ ನಾಲ್ಕು ಸಾವಿರ ರೂಪಾಯಿಗಳನ್ನೂ ಕೊಡುವ ಮಂದಿ ಪ್ಯಾಟೆ ಮಂದಿ ಎಂಬುದನ್ನು ಸಿದ್ದ ಕಂಡುಕೊಂಡಿದ್ದ. ಮುನ್ಸಿಪಾಲಿಟಿ ಅಧ್ಯಕ್ಷರ ಛೇಂಬರ್‌ನಲ್ಲಿ ನಡೆಯಲಿದ್ದ ಸಭೆಗೆ ಸಿದ್ದ ಹೋಗುತ್ತಿದ್ದಂತೆ ಆತನನ್ನು ಅಧ್ಯಕ್ಷರ ಪಕ್ಕದ ಕುರ್ಚಿಯಲ್ಲೇ ಕೂರಿಸಿದರು. ಆತನ ಪಕ್ಕಪಕ್ಕದಲ್ಲಿ ವಡೇಯರು, ಡಿಸಿ, ಎಸಿ, ಅರಣ್ಯ ಸಂರಕ್ಷಣಾಧಿಕಾರಿ.. ಎಲ್ಲಾ ದೊಡ್ಡ ಅಧಿಕಾರಿಗಳು. ಅದು 'ಯು' ಆಕಾರದ ಟೇಬಲ್ ಆಗಿದ್ದು ಕೂತಿದ್ದವರಿಗಿಂತ ಕೆಳಗಿನ ಅಧಿಕಾರಿಗಳಾಗಿದ್ದವರು ಕೈಕಟ್ಟಿಕೊಂಡು ಗೋಡೆಗೆ ಒರಗಿಕೊಂಡು ನಿಂತಿದ್ದರು. ಗೋವಿಂದನಿಗೆ ಕೂರಲು ಹೇಳಿದರೂ ಆತ ಕೂರದೆ ಸಿದ್ದನ ಹಿಂದೆ ನಿಂತ.

ಮುನ್ಸಿಪಾಲ್ಟಿಯ ಅಧ್ಯಕ್ಷ ಸಭೆಗೆ ಬಂದಿದ್ದ ಎಲ್ಲ ಅಧಿಕಾರಿಗಳಿಗೂ, ವಡೇಯರಿಗೂ ಸ್ವಾಗತ ಕೋರಿದ. ಅದರಲ್ಲೂ ಸಿದ್ದನನ್ನು ಸ್ವಾಗತಿಸುವಾಗ "ಸಿದ್ದಯ್ಯನವರು, ಆದಿವಾಸಿ ನಾಯಕರು, ಗಿಡಮೂಲಿಕೆ ಔಷಧ ತಜ್ಞರು, ಮಂಗನ ಬ್ಯಾಟೆ ಪರಿಣಿತರು" ಎಂದೆಲ್ಲ ಪರಿಚಯಿಸಿದ. ಅದಾದನಂತರ ಸಭೆಯ ಉದ್ದೇಶವನ್ನು ಅಧ್ಯಕ್ಷ ವಿವರಿಸಿದ. "ಪ್ರತ್ಯಕ್ಷ ದೇವರೆಂದೇ ಖ್ಯಾತರಾದ ನಮ್ಮ ಜಗದ್ಗುರುಗಳಿಗೆ ಮಠದ ಮಂಗಗಳಿಂದ ಆದ ಅಪತ್ತನ್ನು ಖಂಡಿಸುತ್ತೇವೆ. ಅದರಿಂದ ನಮಗೆ ತುಂಬ ದುಃಖವಾಗಿದೆ. ಜಗದ್ಗುರುಗಳು ಆದಷ್ಟು ಬೇಗ ಗುಣಮುಖವಾಗಿ ನಮಗೆಲ್ಲ ಆಶೀರ್ವಾದ ಮಾಡುವಂತಾಗಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ಸರ್ಕಾರ ಮಂಗನ ನಿಯಂತ್ರಣದ ಬಗ್ಗೆ ಸುಗ್ರೀವಾಜ್ಞೆಯನ್ನು ... ಕಾರ್ಯಾಚರಣೆಗೆ ಆದೇಶಿಸಿದೆ. ಈ ಕಾರ್ಯಾಚರಣೆಗೆ ಸಿದ್ದಯ್ಯನವರೇ ರೂವಾರಿಗಳಾದ್ದರಿಂದ ಅವರು ತಮ್ಮ ಅಮೂಲ್ಯವಾದ ಸಲಹೆ ಮತ್ತು ಸಹಕಾರವನ್ನು ನೀಡಬೇಕೆಂದು ...ತ್ತೇನೆ" ಎಂದು ಸಿದ್ದನಿಗೆ ಹಾರಹಾಕಿದರು.

● ಮುಂದುವರೆಯುವುದು

ನೊಂದವರ ನೋವೇ ಬೇರೆ. ಅದ ಕಂಡು ಮರುಗಿದವರ ಮರುಕವಾಗಲಿ, ಕೆರಳಿದವರ ಸಿಟ್ಟಾಗಲಿ ಆ ವಕೀಲನಿಗಿಲ್ಲ.
ಅವನಲ್ಲಿರುವುದು ನೋಯದವರ ನಿರಂಬಳತೆ ಮಾತ್ರ; ನೋವನ್ನೇ ಇಲ್ಲವೆನ್ನಿಸುವ ಘಾತುಕ ಚತುರತೆ ಮಾತ್ರ.

ನೊಂದವರ ನೋವು ನೋಯದವರ ನಿರಂಬಳತೆ

ತರಕೆ ಮತ್ತು ಹರಾಜಿನ ಬಗ್ಗೆ ಶ್ರೀ ಅಕ್ಷರ ಅವರು ಬರೆದ ಬರಹ ಈಗಾಗಲೇ ಸಾಕಷ್ಟು ಚರ್ಚೆಯಾಗುತ್ತಿದೆ.

ಅವರು ಒಂದು ರೂಪಕವಾಗಿ ಬಳಸಿರುವ ಚಿತ್ರ ನನ್ನನ್ನು ಮತ್ತೆ ಮತ್ತೆ ಕಾಡುತ್ತಿದೆ. ಒಬ್ಬ ಕೂತಿದ್ದಾನೆ, ಒಬ್ಬ ನಿಂತಿದ್ದಾನೆ. ಮತ್ತೊಬ್ಬ ನೋಡುತ್ತಿದ್ದಾನೆ. ನೋಡುವವನು ಮಾನವ ಶಾಸ್ತ್ರಜ್ಞನಾಗಿದ್ದಾನೆ. ಅವನು ಬಹುಶಃ ಪಡುವಣ ನಾಡಿನವನಾಗಿದ್ದಾನೆ. ಕೂತವನು ಮೇಲುಜಾತಿಯವನೆಂತಲೂ ನಿಂತವನು ಕೀಳುಜಾತಿಯವನೆಂತಲೂ ಭಾವಿಸುತ್ತಾನೆ. ಇದು ಎಷ್ಟು ಸರಿ? ನಿಂತವನು ತಾನೇ ಅದನ್ನು ಯಾಕೆ ಆಯ್ಕೆ ಮಾಡಿಕೊಂಡಿರಬಾರದು. ಹಾಗಿದ್ದರೆ ಅದು ಅವನ ವಿಶ್ವಾಸದ ಮಾತು. ಕೇಳುವುದಕ್ಕೆ ನಾವು ಯಾರು?

ಎಂಜಲೆಲೆ ಸೇವೆಯಂಥ ಅವಹೇಳನಕಾರಿಯಾದ ಆಚರಣೆಯನ್ನು ವಿಶ್ಲೇಷಿಸುವುದಕ್ಕೆ ಇದೊಂದು ಅತ್ಯಂತ ಸರಳೀಕೃತವಾದ ರೂಪಕವೆಂಬ ಸತ್ಯವನ್ನು ಬದಿಗೊತ್ತಿ ಶ್ರೀ ಅಕ್ಷರ ಅವರ ದಾರಿಯನ್ನು ಹಿಡಿದು ಇನ್ನಷ್ಟು ಮುಂದೆಹೋಗಿ ಅದು ನಮ್ಮನ್ನು ಎಲ್ಲಿಗೆ ತಲುಪಿಸುತ್ತೆ ನೋಡೋಣ.

ಹೀಗೆಂದು ಭಾವಿಸಿಕೊಳ್ಳಿ:

ಒಬ್ಬ ಹೆಂಗುಸು ಸತಿ ಹೋಗುತ್ತಿದ್ದಾಳೆ. ಅವಳು ಈಗಾಗಲೇ ಚಿತೆಯ ಜ್ವಾಲೆಯೊಳಗೆ ಬಿದ್ದಿದ್ದಾಳೆ. ಸುತ್ತ ಗಂಡಸರು ದೊಣ್ಣೆ ಹಿಡಿದುಕೊಂಡು ನಿಂತಿದ್ದಾರೆ. ಇದನ್ನು ಒಬ್ಬ ನೋಡುತ್ತಿದ್ದಾನೆ. ಅವನು ಒಬ್ಬ ಸಮಾಜಸುಧಾರಕನಾಗಿದ್ದಾನೆ. ಇದು ಮಹಿಳೆಯರ ವಿರುದ್ಧ ಶೋಷಣೆ ಅಂತ ಭಾವಿಸಿದರೆ, ಅದೆಷ್ಟು ಸರಿ? ಸುತ್ತ ನಿಂತಿರುವ ದೊಣ್ಣೆನಾಯಕರು ಅವಳನ್ನು ಹೊರಗೆ ಜಿಗಿಯದಂತೆ ನೋಡಿಕೊಳ್ಳುತ್ತಿದ್ದಾರೆ ಅಂತ ಅವನು ಊಹಿಸಬಹುದು. ನಾವು ಹಾಗೆ ಯೋಚಿಸಬಾರದು. ಸತಿ ಹೋಗುವಾಗ ದೊಣ್ಣೆನಾಯಕರು ಹಾಗೆ ನಿಲ್ಲಬೇಕೆಂಬುದು ಒಂದು ಆಚರಣೆಯಿರಬಹುದು. ಆದರೆ ಆ ಹೆಂಗುಸು ಕಿರುಚುವ ಹಾಗೆ ಕಾಣುತ್ತಿದೆಯಲ್ಲ? ಹಾಗೆ ಭಾವಿಸುವುದೂ ತಪ್ಪಿರಬಹುದು. ಪತಿಪರಮೇಶ್ವರನೊಂದಿಗೆ ಸ್ವರ್ಗಾರೋಹಣ ಸನ್ನಿಹಿತವಾಗುತ್ತಿರುವುದರಿಂದ ಅವಳು ಆನಂದತುಂದಿಲಳಾಗಿ ಹಾಗೆ ಕೂಗುತ್ತಿರಲಿಕ್ಕೂ ಸಾಕು. ಆದ್ದರಿಂದ ಅವಳೇ ಸ್ವಂತ ಇಚ್ಛೆಯಿಂದ ಸತಿ ಹೋಗುತ್ತಿದ್ದಾಳೆ ಅಂತ ಭಾವಿಸುವುದೇ ಸರಿ. ಇದನ್ನು ಶೋಷಣೆ ಎನ್ನುವುದು ಎರವಲು ತಂದ ಬುದ್ಧಿ. ಅವಳು ನಂಬುವುದನ್ನು ಕೇಳಲು ನಾವು ಯಾರು?

ಅಥವಾ ಜೋನ್ಸಟೌನ್ ದುರಂತವನ್ನು ಜ್ಞಾಪಿಸಿಕೊಳ್ಳಿ:

ದಕ್ಷಿಣ ಅಮರಿಕದ ಡೋಂಗಿ ಗುರು ಜಿಮ್ ಜೋನ್ಸನ ಆದೇಶದ ಮೇರೆಗೆ ನೂರಾರು ಜನ ಅನುಯಾಯಿಗಳು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡು ಸತ್ತುಬಿದ್ದಿದ್ದಾರೆ. ಅದರಲ್ಲಿ ಹೆಂಗಸರು, ಮಕ್ಕಳು, ಮುದುಕರೂ ಇದ್ದಾರೆ. ಈ ಚಿತ್ರವನ್ನು ಒಬ್ಬ ನೋಡುತ್ತಿದ್ದಾನೆ. ಅವನು ಒಬ್ಬ ವಿಚಾರವಾದಿ ಎಂದುಕೊಳ್ಳಿ. ಈ ದುರಂತವನ್ನು ಮೂಢನಂಬಿಕೆಯ ಫಲವೆಂದು ಅವನು ಭಾವಿಸಿದರೆ ಅದೆಷ್ಟು ಸರಿ? ಆ ಸಾಮೂಹಿಕ ಆತ್ಮಹತ್ಯೆ ಅವರ ಆಯ್ಕೆ, ಆ ಮಕ್ಕಳು ಕೂಡ ಈ ಭಯಾನಕ ಆತ್ಮಹತ್ಯೆಯನ್ನು ಖುಷಿಯಾಗಿ ಆಯ್ಕೆ ಮಾಡಿಕೊಂಡಿದ್ದರು. ಇದು ದುರಂತವೇನಲ್ಲ, ಒಂದು ಧೀರೋದಾತ್ತ ಆಚರಣೆ. ಅವರೆಲ್ಲರೂ ತಾವಾಗಿಯೇ ಸಾವನ್ನಪ್ಪಿಕೊಂಡಿರುವುದರಿಂದ ಅದನ್ನು ಖಂಡಿಸಲು ನಾವು ಯಾರು?

ಅಥವಾ ಕ್ರಾಂತಿ ಪೂರ್ವ ಚೀಣಾದ ಒಂದು ಆಚರಣೆಯನ್ನು ಚಿತ್ರಿಸಿಕೊಳ್ಳಿ:

ವರ್ಷಕ್ಕೊಂದು ಸಲ ಅಲ್ಲಿನ ಚಕ್ರವರ್ತಿ ಬೀಜಿಂಗ್ ತನ್ನ ಭವ್ಯ ಅರಮನೆಯ ಮುಂದೆ ದೇಶದ ರೈತರಿಗೆ ದಿವ್ಯದರ್ಶನ ಕೊಡುತ್ತಾನೆ. ಆವತ್ತು ನೂರಾರು ಜನ ರೈತರು ತಮ್ಮ ಶಿಶ್ನಗಳನ್ನು ಕಚಕ್ಕನೆ ಕತ್ತರಿಸಿಕೊಂಡು ತಮ್ಮ ನಾಯಕನಿಗೆ ಅರ್ಪಣೆ ಮಾಡುತ್ತಾರೆ. ಈ ಆಚರಣೆಯಿಂದ ನಾಯಕನ ವೀರ್ಯಶಕ್ತಿ ಹೆಚ್ಚಿ ನಾಡಿಗೆ ಒಳಿತಾಗುವುದೆಂದು ಅವರು ನಂಬುತ್ತಾರೆ. ಇದನ್ನು ಅಮಾನವೀಯ ಆಚರಣೆ ಅನ್ನುವದಕ್ಕೆ ನಾವು ಯಾರು? ಇದೂ ಅವರ ನಂಬಿಕೆಯಲ್ಲವೆ?

ಅಥವಾ ಅಕ್ಷರ ಅವರೇ ಖಂಡಿಸಿರುವ ಐಪಿಎಲ್ ಹರಾಜಿನ ಚಿತ್ರವನ್ನು ಹೀಗೆ ಭಾವಿಸಿಕೊಳ್ಳಿ:

ಹರಾಜು ಮಾಡಿಕೊಂಡ ಕ್ರಿಕೆಟಿಗರು ತಮ್ಮ ಕೊರಳಿಗೆ ತಾವು ಪಡೆದ ಬೆಲೆಯ ಫಲಕಗಳನ್ನು ಹಾಕಿಕೊಂಡು, ಟಿವಿ ಕ್ಯಾಮರಾಗಳ ಮುಂದೆ ಪೋಜು ಕೊಡುತ್ತಿದ್ದಾರೆ. ಅಭಿಮಾನಿಗಳು ಅವರನ್ನು ಅಭಿನಂದಿಸುತ್ತಿದ್ದಾರೆ. ಇದನ್ನು ಖಂಡಿಸಲು ನಾವು ಯಾರು? ಆ ಫಲಕಗಳು ಹೆಮ್ಮೆಯ ಸಂಕೇತಗಳೆಂದು ಅವರು ತಿಳಿದಿರಬಹುದಲ್ಲವೆ? ಅವರ ಫ್ಯಾನ್‌ಗಳೂ ಹಾಗೇ ತಿಳಿದಿದ್ದಾರೆ. ಆ ಸಮಾರಂಭದ ಶೋಭೆಯನ್ನು ಹೆಚ್ಚಿಸಲು ಬಂದ ಶಿಲ್ಪಾ ಶೆಟ್ಟಿ, ವಿಜಯಮಲ್ಯ ಅವರೂ ಹಾಗೇ ತಿಳಿದಿದ್ದಾರೆ. ಇದೇನು ಬೈಲಹೊಂಗಲದ ದನದ ಜಾತ್ರೆಯ ಥರದ ಹರಾಜಲ್ಲ. ಸ್ವಂತ ಇಚ್ಛೆಯಿಂದ ಕ್ರಿಕೆಟಿಗರು ತಮ್ಮ ಕ್ರಯವನ್ನು ಪಡೆದುಕೊಂಡಿದ್ದಾರೆ. ಇದು ಮನಮೋಹನ ಯುಗದ, ಯೆಡಿಯೂರಪ್ಪ ಯುಗದ ಎಲ್ಲ ಭಾರತೀಯರು, ವಿಶೇಷವಾಗಿ ಮುಕ್ಕೋಟಿ ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯ.

ಹೀಗಾಗಿ, ಮೇಲ್ಕಾಣಿಸಿದ ಯಾವ ಚಿತ್ರಗಳೂ ಖಂಡನೀಯವಲ್ಲ, ನಾವು ಅಪಮಾನ, ಖಂಡನೀಯ ಅಂತ ತಪ್ಪಾಗಿ ಭಾವಿಸುವುದಕ್ಕೆ ಗುರಿಯಾದ ಆ ಎಲ್ಲರೂ ನಮ್ಮ ಮೆಚ್ಚುಗೆಗೆ ಪಾತ್ರರು.

ಹೀಗೇ ಮುಂದುವರಿಯೋಣ. ದಲಿತರಿಗೆ ಮಲ ತಿನ್ನಿಸಿದ ಘಟನೆಯನ್ನೂ ನಾವು ಖಂಡಿಸಬೇಕಿಲ್ಲ, ಪರಜಾತಿಯ ಹುಡುಗನ ಜೊತೆ ಮದುವೆಯಾದ್ದಕ್ಕೆ ಒಬ್ಬ ಹುಡುಗಿಯನ್ನು ಮನೆಯವರು ಕೊಲೆ ಮಾಡಿದ ಘಟನೆಯನ್ನೂ ಖಂಡಿಸಬಾರದು. ಕೊಂದವರ ನಂಬಿಕೆಗಳನ್ನೂ ನಾವು ಗೌರವಿಸೋಣ. ಎಳೇ ಹುಡುಗಿಯನ್ನು ನರಬಲಿ ಕೊಟ್ಟವರನ್ನೂ ಬೈಯಬಾರದು. ಯಾಕೆಂದರೆ ಹುಡುಗಿ ಸ್ವರ್ಗಕ್ಕೆ ಹೋಗಿ ಸುಖವಾಗಿರುತ್ತಾಳೆ. ಹಳ್ಳಿಯಿಂದ ದಿಲ್ಲಿಯವರೆಗೆ ನಡೆಯುವ ಕೊಲೆಗಳು, ಮಾನಭಂಗಗಳು, ಹಲ್ಲೆಗಳು, ಶೋಷಣೆಯ ನಾನಾ ರೂಪಗಳು, ಎಮ್‌ಎಲ್‌ಎ, ಎಮ್‌ಪಿಗಳ ಹರಾಜು ಎಲ್ಲವೂ ಸಮರ್ಥನೀಯ.

ಕೊನೆಯದಾಗಿ ಇನ್ನೊಂದು ಚಿತ್ರ:

ಹೋತವೊಂದನ್ನು ಯಜ್ಞದಲ್ಲಿ ಬಲಿಕೊಡಲು ಕೊಂಡೊಯ್ಯುತ್ತಿದ್ದಾರೆ. ಅದನ್ನು ಬಸವಣ್ಣ ದೂರದಿಂದ ನೋಡುತ್ತಿದ್ದಾನೆ. ಅದನ್ನು ನೋಡಿ ಮರುಗತೊಡಗುತ್ತಾನೆ. 'ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೆ' ಅನ್ನುತ್ತಿದ್ದಾನೆ. ಹೀಗೆನ್ನಲು ಅವನಿಗೇನು ಅಧಿಕಾರ? ಬಲಿಕೊಡವವರ ನಂಬಿಕೆಗಳನ್ನು ಅವನೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಆ ಕುರಿಗೂ ಬೇಜಾರಿಲ್ಲ, ಅಗೋ ನೋಡಿ, ಅದು ತೋರಣದ ತಳಿರನ್ನು ತಿನ್ನುತ್ತಾ ನಿಂತಿದೆ. ಹೀಗೆ ಬಲಿಯ ಅಗತ್ಯವನ್ನು ಮೌನವಾಗಿ ಒಪ್ಪಿಕೊಂಡಿರುವ ಕುರಿಗೆ ನಾವೇಕೆ ವಕೀಲರಾಗಬೇಕು? ಅಥವಾ ಆ ಬಸವಣ್ಣ ಕೂಡ ಒಬ್ಬ ಮಾನವಶಾಸ್ತ್ರಜ್ಞನಾಗಿರಬಾರದೇಕೆ.

ಹೀಗೆ ಅಕ್ಷರ ಅವರ ದಾರಿಯನ್ನು ಹಿಡಿದು ನಾವು ಇಲ್ಲಿತನಕ ಬಂದ ಮೇಲೆ ಮಾನವಮುಕ್ತಿ ಯಜ್ಞಗಳ ಅಗ್ನಿ ಚರಿತ್ರೆಗಳಿಗೆ ವಿದಾಯ ಹೇಳಿಬಿಡೋಣ. ಕತ್ತಲಿನಿಂದ ಬೆಳಕಿಗೆ, ಪಾರತಂತ್ರದಿಂದ ಸ್ವಾತಂತ್ರ್ಯದ ಕಡೆ ಕೊಂಡೊಯ್ಯುವ ಹಾದಿಗಳನ್ನೇ ಅಳಿಸಿಬಿಡೋಣ.

ಸೂಫಿಗಳ ಒಂದು ಸೂಕ್ತಿ:


ಬೈಯಬೇಕಾದ್ದು ಬಾಣವನ್ನಲ್ಲ, ಬಾಣಬಿಟ್ಟವನನ್ನು. ಆ ಬಾಣ ಬಿಡಿಸಿದವನೂ ಇನ್ನೊಬ್ಬನಿರಬೇಕು.

ಅಕ್ಷರ ಬಾಣವಾಗಿದ್ದಾರೆಯೇ ಹೊರತು ಬಾಣ ಬಿಟ್ಟಿಲ್ಲ ಬಿಡಿಸಿಲ್ಲ.

ಬನ್ನಿ, ಬಾಣವನ್ನು ಬಾಣದ ಹಾದಿಗೆ ಬಿಟ್ಟು ಬಾಣ ಬಿಟ್ಟವರನ್ನು ಮತ್ತು ಬಿಡಿಸಿದವರನ್ನು ತರಾಟೆಗೆ ತೆಗೆದುಕೊಳ್ಳೋಣ.

ಮಾನವಶಾಸ್ತ್ರಜ್ಞರ ಕ್ಯಾಮರಾಕ್ಕೆ ಕಣ್ಣಿದೆ, ಕರುಳಿಲ್ಲ. ಹಾಗೆಯೇ ಕೂತುಕೊಂಡಿರುವವನ ವಕೀಲರಿಗೆ ಬುದ್ಧಿಯಿದೆ, ಹೃದಯವಿಲ್ಲ.

ನೊಂದವರ ನೋವೇ ಬೇರೆ. ಅದ ಕಂಡು ಮರುಗಿದವರ ಮರುಕವಾಗಲಿ, ಕೆರಳಿದವರ ಸಿಟ್ಟಾಗಲಿ ಆ ವಕೀಲನಿಗಿಲ್ಲ. ಅವನಲ್ಲಿರುವುದು ನೋಯದವರ ನಿರಂಬಳತೆ ಮಾತ್ರ; ನೋವನ್ನೇ ಇಲ್ಲವೆನ್ನಿಸುವ ಘಾತುಕ ಚತುರತೆ ಮಾತ್ರ.



• ಎಚ್.ಎಸ್.ಶಿವಪ್ರಕಾಶ್

ಮಡೆ ಸ್ನಾನ ಕುರಿತ ಕೆ.ವಿ.ಅಕ್ಷರ ಅವರ ಲೇಖನ
'ಪ್ರಜಾವಾಣಿ' ಪ್ರಕಟಿಸದ ಒಂದು ಪ್ರತಿಕ್ರಿಯೆ

'ಪ್ರಜಾವಾಣಿ'ಯ 16.1.2011ರ ಸಾಪ್ತಾಹಿಕ ಪುರವಣಿಯಲ್ಲಿ ಕೆ.ವಿ.ಅಕ್ಷರ ಅವರು ಬರೆದಿರುವ 'ಹರಕೆ ಹರಾಜು: ಯಾವುದು ಸಹಜ? ಯಾವುದು ಅವಮಾನ?' ಎಂಬ ಲೇಖನ ಓದುತ್ತಿದ್ದಂತೆ, ಗಾಂಧಿ ಕೊಲೆ ವಿಚಾರಣೆ ಸಂದರ್ಭದಲ್ಲಿ ನಾಥೂರಾಮ ಗೋಡ್ಸೆ ಪ್ರಸ್ತುತಪಡಿಸಿದ ಒಂದು ವಾದ ಸರಣಿ ನೆನಪಿಗೆ ಬಂತು. ಗಾಂಧೀಜಿಯವರ ಕೊಲೆಯ ಹಿಂದೆ ಕೆಲಸ ಮಾಡಿದ ಸಿದ್ಧಾಂತ ಮತ್ತು ಅದರ ಪ್ರಭಾವದಿಂದಾಗಿ ಆಯೋಜಿತವಾದ ಕೊಲೆ ಪಿತೂರಿಯ ಸ್ವರೂಪವನ್ನು ನ್ಯಾಯಾಲಯದ ಮುಂದೆ ಸಾಕ್ಷ್ಯಗಳೊಂದಿಗೆ ಸಾಬೀತುಪಡಿಸುವಲ್ಲಿ ನಿರತರಾಗಿದ್ದ ಸರ್ಕಾರಿ ವಕೀಲ ದಫ್ತರಿಯವರು ತಮ್ಮ ವಾದದ ಸಂದರ್ಭವೊಂದರಲ್ಲಿ ಗಾಂಧೀಜಿ ಕೊಲೆಯನ್ನು ಅನೈತಿಕ ಅಪರಾಧವೆಂದು ಬಣ್ಣಿಸಿದರು. ಆಗ ಗೋಡ್ಸೆ ಅದನ್ನು ತೀವ್ರವಾಗಿ ಪ್ರತಿಭಟಿಸಿ ಈ ರೀತಿ ವಾದ ಮಂಡಿಸಿದನು:

"ಕನಿಷ್ಠ ಪಕ್ಷ ಈ ಪ್ರಕರಣದಲ್ಲಿ ನೀತಿ ಅಥವಾ ಅನೀತಿಯ ಕುರಿತು ಶೋಧಿಸಲು ಸರ್ಕಾರಿ ವಕೀಲರಿಗೆ ಅಧಿಕಾರವಿರುವುದಿಲ್ಲ, ಅಲ್ಲದೇ, ಆ ಪ್ರಶ್ನೆಯ ಬಗೆಗೆ ನಿರ್ಣಯ ಕೊಡುವ ಅಧಿಕಾರವೂ ಈ ನ್ಯಾಯಾಲಯಕ್ಕೆ ಇರುವುದಿಲ್ಲ, ಇದು ಅವರ ಅಧಿಕಾರ ವ್ಯಾಪ್ತಿಯ ಹೊರಗಿನ ವಿಷಯ. ನೈತಿಕತೆಯ ವ್ಯಾಖ್ಯೆಯು ಸಮಾಜ-ಸಮಾಜಗಳಲ್ಲಿ, ದೇಶ-ದೇಶಗಳಲ್ಲಿ ಯಾವಾಗಲೂ ಬೇರೆ ಬೇರೆಯಾಗಿರುತ್ತದೆ. ಒಂದು ಸಮಾಜದಲ್ಲಿ ಮಹಿಳೆಯರು ಬುರ್ಖಾ ಹಾಕಿಕೊಳ್ಳದಿದ್ದರೆ ಅನೈತಿಕವೆಂದು ತಿಳಿಯಲಾಗುತ್ತದೆ. ಕೆಲವು ದೇಶಗಳಲ್ಲಿ ಮದ್ಯಪಾನವನ್ನು ಅನೈತಿಕವೆಂದು ತಿಳಿಯಲಾಗುವುದಿಲ್ಲ, ಒಂದು ಯುಗದಲ್ಲಿ ಬ್ರಾಹ್ಮಣರಲ್ಲದವರಿಗೆ ವೇದವಿದ್ಯೆಯನ್ನು ಕಲಿಸಲಾಗುತ್ತಿರಲಿಲ್ಲ, ಆದರೆ ಕಾಲಕ್ಕನುಗುಣವಾಗಿ ಎಲ್ಲ ಕಡೆಗಳಲ್ಲೂ ಇದೆಲ್ಲವೂ ಬದಲಾಗುತ್ತಾ ಹೋಯಿತು. ಹಾಗಾಗಿ ಇದರ ಆಧಾರದ ಮೇಲೆ ತ್ರಿಕಾಲಾಬಾಧಿತವಾದ ನೀತಿ-ಅನೀತಿಯ ಬಗೆಗಿನ ಸ್ಥಿರವಾದ ನಿಯಮವನ್ನು ನಿರ್ಧರಿಸಲಾಗುವುದಿಲ್ಲ."

ಈ ದೃಷ್ಟಿಯಿಂದ ಗಾಂಧೀಜಿ ಕೊಲೆ ಹೇಗೆ ಅನೈತಿಕವಲ್ಲವೋ, ಮಡೆ ಸ್ನಾನವಾಗಲೀ ಅಥವಾ ಕ್ರಿಕೆಟಿಗರ ಹರಾಜಾಗಲೀ ಅನೈತಿಕವಾಗುವುದಿಲ್ಲ; ಹಾಗಾಗಿ ಅವಮಾನಕಾರಿಯೂ ಅಲ್ಲ; ಮಡೆಸ್ನಾನ ಅವಮಾನಕಾರಿಯಾಗುವುದು ಕ್ರಿಕೆಟಿಗರ ಹರಾಜು ಅವಮಾನಕಾರಿಯಾದಾಗ ಮಾತ್ರ; ಮಾಧ್ಯಮಗಳಲ್ಲಿ ಮಡೆಸ್ನಾನದ ಬಗ್ಗೆ ಬಂದ ವರದಿ ಮತ್ತು ಪತ್ರಗಳ ಹಾಗೆಯೇ, ಕ್ರಿಕೆಟಿಗರ ಹರಾಜಿನ ಬಗ್ಗೆಯೂ ಬಂದಾಗ ಮಾತ್ರ! ಎರಡೂ ಸಮಾನ ತೀವ್ರತೆಯಲ್ಲಿ ಬಹಿರಂಗ ವಾದ ವಿವಾದಗಳಿಗೆ ಸಿಕ್ಕಿದಾಗ ಮಾತ್ರ!! ಆಂತರಿಕವಾದದ್ದು ಎನ್ನುವುದು ಏನೂ ಇಲ್ಲ... ಮೆಚ್ಚಬೇಕಾದ ವಾದಸರಣಿಯೇ. ಎಷ್ಟಾದರೂ, ಗಾಂಧೀಜಿ ಕೊಲೆ ಮೊಕದ್ದಮೆ ನಡೆಸಿದ ನ್ಯಾಯಾಧೀಶ ಖೋಸ್ಲಾ ಅವರೇ ಹೇಳಿದ್ದಾರಲ್ಲಾ, ನ್ಯಾಯಾಲಯದಲ್ಲಿ ಗೋಡ್ಸೆ ಮಂಡಿಸಿದ ಸುದೀರ್ಘ ಹೇಳಿಕೆಗಳನ್ನು ಆಲಿಸಿದ ಜನಕ್ಕೇನಾದರೂ ತೀರ್ಪು ನೀಡುವ ಅಧಿಕಾರವಿದ್ದಿದ್ದರೆ, ಗಾಂಧೀಜಿ ಕೊಲೆ ಸರಿ ಎಂದೇ ತೀರ್ಪು ನೀಡಿ ಗೋಡ್ಸೆಯನ್ನು ಖುಲಾಸೆ ಮಾಡಿ ಅವನಿಗೆ ಜೈಕಾರ ಹಾಕಿ ಕರೆದುಕೊಂಡು ಹೋಗುತ್ತಿದ್ದರು ಎಂದು?

• ಡಿ.ಎಸ್.ನಾಗಭೂಷಣ



ಯಾವನೋ ದಾರಿಹೋಕ

ಅವನ ಮಾತಿನ ಪುಗ್ಗ ಹಿಗ್ಗಿ ಹಿಗ್ಗಿ ಹೊರ
ಹೊಮ್ಮುವುದು
ಮಾತ್ರ ಬರಿ ಬಿಕ್ಕಳಿಕೆ – ಗುಟ್ಟುಗಳ
ಹಂಚಿಕೊಳ್ಳುವ
ಗಂಡ ಇವನಲ್ಲ, ಒಂದರ್ಧ ಚಮಚವ
ಹಂಚಿಕೊಳ್ಳಲೂ
ಒಲ್ಲದ ಗಂಡ – ನಡುಗುವ ರಾತ್ರಿಗಳಲ್ಲಿ
ಕಾಯುವ
ಹೆಂಡತಿಯ ಒಡಲಿಗೆ ಇವನು ಗಾಂಧಿಯಂತೆ.

ಬೇಡ ಅಂದದ್ದೇ ಹುಚ್ಚು ಆಸೆ ಕೆರಳಿ
ಎದೆಯ ಮೇಲೆ ಕಾಮನ ಹೊರಳಾಟ
ಸೊಂಟದ ಮೇಲೆ ಅವನದೇ ಸವಾರಿ

ಹಿಂದಿರುಗಿ ಬರಲಾರನೆಂಬ ನಂಬಿಕೆಯ ಮೇಲೆ
ಹೋಗು ಬಂಗಾರದ ಜಿಂಕೆಯ ಬೀಜ ತಾ,
ಅದರ ಘಮಲು ನಿನ್ನ ಪುರುಷತ್ವ
ಎಬ್ಬಿಸೀತೆಂದು ಹೇಳಿ ಕಳಿಸಿದಳು.

ಮೊದಲ ರಾತ್ರಿಯ ಕೇಳಿಗೆ ಯಾವನೋ
ದಾರಿಹೋಕ. ಇವನಿಗೆ ಮೈಯ್ಯೆಲ್ಲ ಕೈಯ್ಯಿ
ಎಲ್ಲೆಲ್ಲೂ ಗುಮ್ಮುವ ತಲೆ, ಮಾತೆಲ್ಲ
ಪಿಸುದನಿ. ಅವಳ ಭಾಷೆಯ ಪಾಠ ಅವಳಿಗೆ
ಕಲಿಸಿದವನವನು. ಗರ್ಭಕ್ಕೆ ಒಸರುವ ಪೆಲೆಗೆ
ಹೆಸರಿಟ್ಟು ಕರೆದವನು. ಪದಪದಗಳನ್ನು
ಗಬಗಬ ನುಂಗಿದವಳಲ್ಲಿ ಹೊಸದೊಂದು
ಹೆಂಗಸು ಹುಟ್ಟಿದಳು.
ಬಿಸಿ ಮೈಯ್ಯೆಲ್ಲ ಹಸಿವಿನ ಬಾಯಾದವಳು.

ಆ ಅಪರಿಚಿತನ ತೊಡೆ ತೊರೆದು
ಹೊರಡುವ ಹೊತ್ತಿಗೆ ಮೊದಲಿಂದ
ಕೊನೆವರೆಗಿನ ಪ್ರೇಮದ ಪಾಠ ಗಟ್ಟಿಯಾಗಿತ್ತು,
ಮಮುಸೀತಾ.

ಮೂಲ: ಮೀನಾ ಕಂದಸಾ
ಕನ್ನಡಕ್ಕೆ:

ಪ್ರಕಾಶನಂತ ರಾಜಕಾರಣಿ ಇನ್ನುಟ್ಟದಿಲ್ಲ ಬುಡು

...ಗಳೂರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ...ಲ್ಲಾ ಒಟ್ಟಾಗಿ, ಮುಖ್ಯವಾಗಿ ಲಿಂಗಾಯತ ...ವಾಗಿ ಗುರುತಿಸಿಕೊಳ್ಳುವ ಅನೇಕರು ಮತಭೇದ ...ಒಂದಾಗಿ, ರಾಜ್ಯಪಾಲರು ಚಿದಾನಂದಮೂರ್ತಿಗೆ ...ಡಾಕ್ಟರೇಟ್ ನಿರಾಕರಿಸಿದ್ದನ್ನು ಖಂಡಿಸಿದ ಬಗ್ಗೆ ...ಸುತ್ತ ಕುಳಿತಿದ್ದರು. ಇದೆಲ್ಲವು ಅಲ್ಲಿಗೆ ಹೊಸ ...ದಾದ್ದರಿಂದ ವಿವರಿಸಲು ಸುಸ್ತಾದ. ಉಗ್ರಿ ...ವಿತನದಲ್ಲಿ ಮಾತನಾಡುವಾಗ ಕಾಳಮಾವ,

...ಮು ಲು ಸೀ ಮ ಕಟ್ಟೆಪುರಾಣ

▸ಬಿ. ಚಂದ್ರೇಗೌಡ

...ದ್ರ ಹೋಗ್ಲಿ, ಆ ಸುದ್ದಿ ಕಟಿಗಂಡೇನು. ಅದೇನು ...ಬುತ್ತದೊ, ತಿನ್ನಕ್ಕೆ ಬಂದತ್ಲ" ಎಂದ.

...ಡದಲ್ಲ ಕಣಮಾವ. ಈ ದೊಡ್ಡ ಸಾಹಿತಿಗಳು ...ಆಗಿರಂಗೆ ಕೂಗ್ತ ಆವುರಲ್ವಾ, ಕರ್ನಾಟಕದಲ್ಲಿ ...ವ್ಯಲ್ಲ ಆಗುವಾಗ ಏನು ಮಾಡತಿದ್ರೂ?"

... ಮನಿಗಿದ್ರು ಬುಡತ್ತಗೆ."

...ಗೆ ಅನ್ನುಸ್ತಾ ಅದೆ. ಕರ್ನಾಟಕದ ಗಡಿನೆ ...ಮೂದಾಗ ಮಾತಾಡಲಿಲ್ಲ. ಪ್ರವಾಹ ಬಂದು ...ಕ್ಸೀಟ್ ಶೆಡ್ಡಲ್ಲಿ ಮನಿಕತ್ತಾ ಇರದ ನೋಡಿದ್ರು ...ಬಿದ್ದಿಲ್ಲ. ಇಡೀ ದೇಸದಲ್ಲಿ ಲಂಚ ತಗಳದ್ರಲ್ಲಿ ... ನಂಬರ್ ಒಂದು ಅಂತ ಗೊತ್ತಾದಾಗ ...ಲಿಲ್ಲ. ಆ ಎಡೂರಪ್ಪನ ಐಲಾಟ ನೋಡ್ಯೂ ...ಬುದ್ದಿಲ್ಲ. ಇದನ್ನೆಲ್ಲ ನೋಡಿದ್ರೆ ಇವುರು ಸತ್ತ ...ಏ ನಿಜ" ಎಂದು ಉಗ್ರಿ ಹೇಳುತ್ತಿದ್ದಾಗ ದಿಢೀರನೆ ...ಟಾಟಿಸ್ಸೆ,

...ಮ್ಮ ಎಂ.ಪಿ. ಪ್ರಕಾಶ್ ತೀರೋಗದಕಿಂತ ಆ ...ದಮೂರ್ತಿಗೆ ಸಪೋಟು ಮಾಡೊ ಸಾಯಿತಿ ...ತ್ತಿದ್ರೆ ಚನ್ನಾಗಿತ್ತು ಕಣೊ" ಎಂದ.

...ಗರೆ ಎಂ.ಪಿ. ಪ್ರಕಾಶ್ ತೀರೋದ್ರೆ?" ಎಂದಳು ...ಅಚ್ಚರಿಯಿಂದ.

... ಕಣಕ್ಕ, ಈಗ ಸುದ್ದಿ ಬತ್ತು, ಕೂಡ್ಲೆ ನನಿಗನ್ನಿಸಿ ದ್ದೇನವ್ವ ಅಂದ್ರೆ ನಮ್ಮ ಎಂ.ಪಿ. ಪ್ರಕಾಶ್ ಉಳಕಂಡು, ನಮ್ಮ ಗೊಡ್ಡು ಮುದಿ ಸಾಹಿತಿಗಳಲ್ಲಿ ಬೇರೆ ಯಾರಾದ್ರೂ ತೀರಿಹೋಗಿದ್ರೆ ಚೆನ್ನಾಗಿರದು" ಎಂದು ವಾಟಿಸ್ಸೆ ಹೇಳುವಾಗ ಜುಮ್ಮಿ ಕಣ್ಣೊರೆಸಿಕೊಳ್ಳುತ್ತಿದ್ದಳು. ಅದನ್ನು ನೋಡಿದ ಕಾಳಮಾವ,

"ಯಲ್ಲ ಒಂದಿನ ಹೋಗದೆ, ಸುಮ್ಮನಿರ್ಲೆ ಅದ್ಯಾಕಳತಿ" ಎಂದ.

"ಪ್ರಕಾಶು ಜುಮ್ಮಕ್ಕನ್ನ ನೋಡಿ ಭಾಳ ಪ್ರೀತಿಯಾಗಿ ಮಾತಾಡಿಸಿದ್ರು ದ್ವಡಪ್ಪ. ಅದ ನ್ಯನಿಸಿಗಂಡು ಅಳತಾ ಅವ್ಳೆ."

"ನಿನ್ನನ್ಯಾವಾಗ ಮಾತಾಡಿಸಿದ್ನೆ?" ಎಂದ ಸೀರ.

"ಆಗೊಂದು ಸತಿ ಜನತಾದಳದೋರು ಪಂಚಾತಿ ಚುನಾವಣೆಲ್ಲಿ ಗೆದ್ದಾಗ ಸಭೆ ಮಾಡಿದ್ರಲ್ವಾ, ಆಗ ಚಿಗಪ್ಪ, ಇಡೀ ಕರ್ನಾಟಕದಲ್ಲಿ ಗೆದ್ದಿರೊ ಪಂಚಾತಿ ಮೆಂಬ್ರು ಬೆಂಗಳೂರಿಗೆ ಕರಿಸಿದ್ದರು. ಆಗ ನಮ್ಮ ಜುಮ್ಮಕ್ಕನ್ನ ನಾನೇ ಕರಕಂಡೋಗಿ ಪರಿಚಯ ಮಾಡಿದ್ದೆ, ಭಾಳ ದಿನದಿಂದ ಗೊತ್ತೇನೊ ಅನ್ನಂಗೆ ಮಾತಾಡಿಸಿದ್ರು."

"ಹೆಣ್ಣುಮಕ್ಕಳ ಕಂಡ್ರೆ ಬಾಯಿ ತುಂಬ ಮಾತಾಡ ಸೋರು" ಎಂದ ಉಗ್ರಿ.

"ಹೆಣ್ಣುಮಕ್ಕಳೇ ಏನು ನನ್ನ ಕಂಡ್ರು ಚೆನ್ನಾಗಿ ಮಾತಾಡಸೋರು ಕಣೊ ಉಗ್ರಿ. ಹೋಂ ಮಿನಿಸ್ಟ್ರಾಗಿದ್ದಾಗ ಒಂದು ಸತಿ ಅವುರ ಮನಿಗೋಗಿದ್ದೆ, ನೋಡಿದೇಟಿಗೆ ಬಾರಪ ವಾಟ್ಸೆ ಅಂದ್ರು. ಅಲ್ಲಿದ್ದ ಜನಗಳ್ಯಲ್ಲ ನನ್ನ ಕಡಿಕೆ ನೋಡಿದ್ರು. ಅಷ್ಟೇ ಅಲ್ಲ, ಬಂದು ನನ್ನ ಪರಿಚಯ ಮಾಡಿಕಳಕ್ಕೆ ಸುರುಮಾಡಿದ್ರು, ಗೊತ್ತೆ?"

"ಮಕ್ಕಳೇಸಿದ್ದವುಲ ಪ್ರಕಾಸನಿಗೆ?" ಎಂದ ಕಾಳಮಾವ.


"ಮೂರೆಣ್ಣು, ಒಂದು ಗಂಡು ಕಣಮಾವ. ಮಕ್ಕಳ ಚೆನ್ನಾಗಿ ಸಾಕಿದ್ದ. ಮನೆ ಹತ್ರಕೆ ಯಾರೇ ಹೋದ್ರು ಆ ಹುಡುಗ್ರು ಬನ್ನಿ ಅಂತ ಕರದು ಕಾಫಿ ಕೊಟ್ಟು ಮಾತಾಡ್ಸಿ ಕಳುಸ್ತರೆ. ಈ ವಾಟಿಸ್ಸೆ ಅಂಥೋರೋದ್ರೆ ಅವುರ ಮಗ ಹ್ವರಗಡೆ ಕರಕೊಂಡೋಗಿ ಬಾರಲ್ಲಿ ಕುಂಡ್ರಿಸಿ ಬಿಲ್ಲು ಕೊಟ್ಟು ಹೋಯ್ತನೆ" ಎಂದ ಉಗ್ರಿ.

"ಮಗ ಏನು ಮಾಡ್ತ ಅವ್ನೆ?"

"ಅವುನು ರಾಜಕಾರಣಕ್ಕೆ ಬಂದವುನೆ ಕಣಮಾವ. ಎಂ.ಪಿ. ಪ್ರಕಾಶ ಯಲಕ್ಷನ್ನಿಗೆ ನಿಂತು ಮ್ಯರವಣಿಗೆ ಹೋಗದು, ಬಾಸಣ ಮಾಡದ ಬುಟ್ರೆ ಇನ್ನೇನೂ ಮಾಡ್ತಿರಲಿಲ್ಲ, ಎಲ್ಲಾನೂ ಅವುನ ಮಗ ನೋಡಕತಿದ್ದ."

"ಅಂಗರ ಬುಡು ಮತ್ತೆ ಅವುನು ಎಮ್ಮೆಲ್ಲೆ ಆಯ್ತನತ್ತಗೆ."

"ಏನೋ ಆದ್ರುವೆ ಅವುರಪ್ಪನಾಸೆ ಗಾಗಕೆ, ಅವುರ ಪ್ವರಾಣೆ ಆಗದಿಲ್ಲ ಕಣ ದ್ವಡಪ್ಪ ಪ್ರಕಾಶನಂಗೆ ರಾಜಕಾರಣದಲ್ಲಿ ಯಾರೂ ಇರಲಿಲ್ಲ. ನೀನು ಯಾವುದೇ ವಿಷಯ ಕೇಳು ಮಾತಾಡೋನು. ಸಿನುಮದ ಸುದ್ದಿ ಕೇಳಿಯಾ, ರಾಜಕಪೂರನಿಂದ ಹಿಡುದು ದುನಿಯಾ ವಿಜಯನಗಂಟ ಮಾತಾಡ್ತೋನು. ನಾಟಕದ ಸುದ್ದಿ ತಗಿ, ಗುಬ್ಬಿ ವೀರಣ್ಣನಿಂದ ಹಿಡುದು ಹರುಕುಬಾಯಿ ಹಿರಣ್ಣಯ್ಯನಗಂಟ ಮಾತಾಡೋನು. ಇವತ್ತು ಕರ್ನಾಟಕದಲ್ಲಿ ಪ್ರಕಾಶನಂಥ ವಬ್ಬ ರಾಜಕಾರಣಿನೂ ಇಲ್ಲ. ನನಿಗಂತೂ ಏನೇ ಕಷ್ಟ ಬಂದ್ರು ಪ್ರಕಾಶವ್ರರೆ ಅವುರತ್ರಕೋಗಿ ಇಂಪ್ನುಯೆನ್ಸ ಮಾಡ್ಸಬವುದು ಅನ್ನುಸ್ತಿತ್ತು, ಇವತ್ತು ಯಾರತ್ರಕೊಗನ ಅನ್ನಂಗಾಗ್ಯದೆ."



"ಪ್ರಕಾಶ್‌ನಂತ ರಾಜಕಾರಣಿ ಹೋಗಿಬುಟ್ರಲ್ಲ ಅಂತ ಹೇಳದುಬುಟ್ಟು ಇನ್ನುಮುಂದೆ ಯಾರತ್ರಕೋಗ್ಲಿ ಅಂತಿಯಲ್ಲೊ ವಾಟಿಸ್ಸೆ."

"ಮಿಸ್ಟರ್ ಉಗ್ರಿ, ನಾನು ಮಾತಿಗೇಳಿದ್ನೆ ವರತು ಪ್ರಕಾಶಂಥೋರಿಂದ ಯಾವ ಸಹಾಯನೂ ತಗಂಡಿಲ್ಲ. ಇನ್ನು ಒಂದು ವಿಷಯ ಅಂದ್ರೆ.... ಪ್ರಕಾಶ್ ತುಂಬ ವಳ್ಳೆ ಮನುಸಾದ್ರಿಂದ ಸರಕಾರದಲ್ಲಿ ಅಧಿಕಾರಿಗಳು ಅವುರ ಮಾತ ಕೇಳ್ತಿರಲಿಲ್ಲ, ಕಾನೂನಿನ ತೊಡಕೇಳೋರು. ಇವುರು ಕಾನೂನು ಮೀರ್ತಿರಲಿಲ್ಲ. ನಾನು ಪ್ರಕಾಶನ ಗ್ಯಳಿಯಾ ಅಂತ ಹೇಳಿಕಂಡು ಕಾಲ ಹಾಕಿದನೆ ವರತು, ಅವುರಿಂದ ನನಿಗೇನೂ ಆಗಲಿಲ್ಲ."

"ನಿನಿಗೇನೂ ಆಗಲಿಲ್ಲ ನಿನೇನು ಕೇಳ್ಳಿಲ್ಲ. ಆದ್ರೆ ಪ್ರಕಾಶನ್ನ ಬಳಸಿಗಳರು ಸರಿಯಾಗೇ ಬಳಸಿಗಂಡ್ರು ಕಣೊ."

"ಅದು ನಿಜ ಕಣೊ ಉಗ್ರಿ. ಈ ದೇವೇಗೌಡ್ರು, ಕುಮಾರಸ್ವಾಮಿಯಂತೂ ಚನ್ನಾಗೇ ಉಪಯೋಗಿಸಿಗಂಡು ಮೂಲಿಗೆ ಬಿಸಾಕಿದ್ರತ್ತಗೆ. ಪಾಪ ತಮ್ಮ ಇಡೀ ಜೀವನದಲ್ಲಿ ಕಾಂಗ್ರೆಸ್ ವಿರೋಧಿಸಿಗಂಡು ಬಂದ ಪ್ರಕಾಶ್ ಕಾಂಗ್ರೆಸ್ಸಿಗೋಗಿ ಕಾಲವಾಗಂಗೆ ಮಾಡಿದ್ರು ಈ ಅಪ್ಪ ಮಕ್ಕಳು."

"ಆದೋಗ್ಲಿ ಕಣೊ, ಪ್ರಕಾಶ್ ಕಾಂಗ್ರೆಸ್ಸಿಗೋಗಿ ಯಲಕ್ಷನ್ನಿಗೆ ನಿಂತಾಗ ಅವುರೆದ್ರಿಗೆ ದಳದ ಕ್ಯಾಂಡೇಟಾಕದೇನಯ್ಯ? ಪ್ರಕಾಶ ನಂಥೋರು ಗೆದ್ದು ಬರ್ಲಿ ಅಂತ ಒಂದು ಗೌರವ ತೋರ ಬವುದಿತ್ತು ಪಾಪ. ಪ್ರಕಾಶ ವಳಗಡೆ ಎಷ್ಟು ಕೊರಗಿದ್ರೊ ಏನೊ. ಅವುರಿಗೆ ಕ್ಯಾನ್ಸರ್ ಬರದ್ಕು ಅದೇ ಕಾರಣ ಇರಬೇಕು."

"ಅಂಗರೆ ಪ್ರಕಾಸನಿಗೆ ಕ್ಯಾನ್ಸರ್ ಆಗಿತ್ತೆ?" ಎಂದ ಕಾಳಮಾವ.

"ಊ ಕಣ ಮಾವ. ಅದ್ರು ನಗನಗತನೆ ಹೆದ್ರಿಸಿದ್ರಂತೆ. ಸಾಮಾನ್ಯವಾಗಿ ಕ್ಯಾನ್ಸರ್ ಆದೋರು ನಮ್ಮ ಕತೆ ಮುಗಿತು ಅಂತ ಯಾವಾಗ್ಲು ಸಾವಿನ ಮುಖದಲ್ಲಿರತಾರೆ. ಆದ್ರೆ ಪ್ರಕಾಶ್ ಅಂಗಿರಲೇಯಿಲ್ಲವಂತೆ. ಅವುರನ್ನ ನೋಡಕ್ಕೋದೋರು ಅಳಕ್ಕೆ ಸುರು ಮಾಡಿದ್ರೆ ಅವುರೇ ಸಮಾಧಾನ ಮಾಡಿ ಕಳುಸ್ತಿದ್ರಂತೆ."

"ಯಾವಾಗ್ಲು ನಗನಗತನೆ ಮಾತಾಡೋರಲವೆ?" ಎಂದಳು ಜುಮ್ಮಿ.

"ಅವುರು ಹುಟ್ಟಿತನೆ ವಳ್ಳೆ ಮನ್ಸ ಕಣಕ್ಕ, ಆದ್ರಿಂದ ಪ್ರಕಾಶ್‌ನಂಥೋರ ತಯಾರು ಮಾಡಕ್ಯಾಗದಿಲ್ಲ. ಈಗ ಹಾಲಿ ಇರೊ ಲೀಡ್ರುಗಳು, ಎಮ್ಮೆಲ್ಲೆಗಳ ನ್ಯನಿಸಿಗಂಡ್ರೆ ಪ್ರಕಾಶನೆ ಕಡೆ ಪರಸನ್ ಅಂತ ಕಾಣ್ತನೆ. ಇನ್ನು ಮುಂದೆ ರೇಣುಕಾಚಾರಿ, ಹರತಾಳ, ಕೃಷ್ಣಯ್ಯ ಶೆಟ್ಟಿ, ಕಟ್ಟಾ ಅಂಥೋರೆ ಬರದು. ಅವುರಿಗ್ಯಲ್ಲ ಎಡೂರಪ್ಪನಂಥೋರು ಲೀಡ್ರಾಗಿರತರೆ. ಇನ್ನ ಸಾಯಿತ್ಯ ಲೋಕದಲ್ಲಿ ನಲ್ಲೂರ್ ಪ್ರಸಾದ್, ಚಿದಾನಂದ, ಭಟ್ಟ, ಸಿಂಹ, ಇಂಥೋರು ಬತ್ತರೆ."

"ಬರ್ಲಿ ಬುಡ್ಯ. ಹಿಂದೋದ ಕಾಲಕಿಂತ ಮುಂದ ಬರದು ವಳ್ಳೆ ಕಾಲ ಅಂತ ಅನುಭವಿಸಿದ್ರಾಯ್ತು" ಎಂದ ಕಾಳಮಾವ.

"ನಿನ್ನ ಕಾಲ ಆಯ್ತು. ನಮ್ಮದೇಳು ದ್ವಡಪ್ಪಾ?!"

"!?"

ಹೊಸ ವರ್ಷದ ಮೊದಲ ರಾತ್ರಿ

...ಳಿ ಎಷ್ಟು ಚೆನ್ನಾಗಿರುತ್ತೆ!' ಎಂದು ಬೆಚ್ಚಗೆ ಹೊದ್ದುಕೊಳ್ಳಲು ಮೆಚ್ಚಿನ ಪ್ರಿಯಕರನನ್ನು ಪಡೆದ ವೈಯಾರಿ ...ದ್ದರೆ ಬಡವಿಯಾದವಳು ಗುಡಿಸಿಲ ಮುಂಭಾಗದಲ್ಲಿ ಬಿಸಿಲು ಕಾಯಿಸುತ್ತಾ ಕೂತು ವಿರಹವೇದನೆ ...ವಿಸುವುದು... ಎಲ್ಲವೂ ಉಷ್ಣವಲಯದಲ್ಲಿ ಡಿಸೆಂಬರ್ ತೋರುವ ದೃಶ್ಯಗಳು. ಮಳೆಗಾಲದಲ್ಲಿ ಹೇಗೋ ...ಕಾಪಾಡಿಕೊಂಡ ಹಕ್ಕಿ ಚಳಿಗಾಲದ ನೀಲ ಆಕಾಶದಲ್ಲಿ ಹಾರಾಡುತ್ತದೆ; ವಸಂತಕಾಲದಲ್ಲಿ ಗರ್ಭಿಣಿಯಾಗಿ ...ಡೆದು ಬೇಸಿಗೆಯನ್ನು ಸ್ವಾಗತಿಸುವಷ್ಟರಲ್ಲಿ ಮಳೆ, ಮಿಂಚು, ಸಿಡಿಲು. ಇವನ್ನೆಲ್ಲ ಕಲ್ಪಿಸಿಕೊಂಡ ಅಥವಾ ನೇರ ...ವಿಸಿದ ಹುಡುಗನಿಗೆ ತನ್ನ ಪ್ರೇಯಸಿ ಮುಖಕ್ಕೆ ಕ್ರೀಮ್ ಹಚ್ಚಿಕೊಂಡು ಮಾಗಿಯ ಅವಾಂತರಕ್ಕೆ ರಕ್ಷಣೆ ...ಡುತ್ತಿರುವುದನ್ನು ನೋಡಿ ಅಚ್ಚರಿಯಾಗುತ್ತದೆ. ನಾನು ಮೊನ್ನೆ ಯಾರನ್ನೊ ಕೇಳಿದೆ: snow ಮತ್ತು iceಗೆ ...ನಿಯೂ ವ್ಯತ್ಯಾಸವಿದೆಯೇ? ಏನೇನೊ ಹೇಳಿದರು. ಗಾಳಿಯಲ್ಲೇ ಇರುವ ನೀರಿನ ಅಂಶ snow ಆಗಿಬೀಳುತ್ತದೆ; ...ಹೆಪ್ಪುಗಟ್ಟಿ ice ಆಗುತ್ತದೆ. ನಾನು ಕಣ್ಣಗಲಿಸಿ ಅಚ್ಚರಿಯಿಂದ ಕೇಳುತ್ತಿದ್ದೆ, ನನ್ನಂಥವರಿಗೆ ಈ snow, ice ...ನಿನ ಹೊಳೆ ಮುಂತಾದವೆಲ್ಲ ಅಪರಿಚಿತ. ನಿಜವಾದ ಚಳಿ ಕೂಡ ನಮಗೆ ಗೊತ್ತಿಲ್ಲ. ಸೆಪ್ಟೆಂಬರ್‌ನಿಂದ ...ರ್‌ವರೆಗೆ ಈ ಚಳಿಗಾಲಕ್ಕೆ ಕಾದವರಿಗೆ, ಗಾಢ ಚಳಿಗಾಲವನ್ನು ಡಿಸೆಂಬರ್, ಜನವರಿಯಲ್ಲಿ ಅನುಭವಿಸಿದವರಿಗೆ ...ಇದು ಗೊತ್ತು, ಮೊನ್ನೆ ಓದುತ್ತಿದ್ದಂತೆ ಅಚ್ಚರಿಯ ಸಂಗತಿಯೊಂದನ್ನು ಕಂಡೆ. ಶಾಲೆಮಕ್ಕಳೂ ಬಲ್ಲಂತೆ ...ತ್ತನೆ ಶತಮಾನದ ಕೊನೆಯವರೆಗೆ ಆಫ್ರಿಕಾದಲ್ಲಿ ಏನೇನಿದೆ ಎಂಬುದೂ ಗೊತ್ತಿರಲಿಲ್ಲ. ಉಷ್ಣವಲಯದಲ್ಲಿರುವ ...ದೇಶದ ಬೆಟ್ಟಗಳ ನೆತ್ತಿಯ ಮೇಲೆ ದಟ್ಟ ಮಂಜುಗಡ್ಡೆ ಇರುತ್ತದೆ. ಚಳಿಗಾಲದಲ್ಲಿ ಆ ಭಾಗಗಳು ಇಂಗ್ಲೆಂಡಿನ ...ದಲ್ಲಿ ಇದ್ದಂತೆ ಇರುತ್ತವೆ... ಎಂಬ ಮಾತುಗಳನ್ನು ಇಂಗ್ಲೆಂಡಿನ ಜನ ನಂಬುತ್ತಿರಲಿಲ್ಲ! "ತೀವ್ರ ಬಿಸಿಲಿನ ...ವಲ್ಲಿರುವ ಕೀನ್ಯಾ, ಟ್ಯಾಂಜಾನಿಯಾದಲ್ಲಿ ಮಂಜು ಇರಲು ಹೇಗೆ ಸಾಧ್ಯ?" ಎಂದು ಕೇಳುತ್ತಿದ್ದರು. ಮುಂದು ...ವ ಮುನ್ನ ಹೇಳುವುದಿದೆ. ಇಡೀ ಜಗತ್ತಿನಲ್ಲಿ ಅತ್ಯಂತ ಹೆಚ್ಚಾಗಿ ಲವಂಗ, ಏಲಕ್ಕಿ, ಮೆಣಸು ಬೆಳೆಯುವ ...ಯಾವುದು? ಅದೊಂದು ಟ್ಯಾಂಜಾನಿಯಾ ದ್ವೀಪ–ಜಾಂಜಿಬಾರ್! ಅಲ್ಲಿ ಬೆಳೆದಷ್ಟು ಲವಂಗ ...ಲ್ಲಿ ಬೆಳೆಯುವುದಿಲ್ಲ ಮತ್ತು ಲವಂಗ ಎಂಬುದು ಹಣ್ಣು, ಕಾಯಿ ಯಾವುದೂ ಅಲ್ಲ, ಅದು ... ಮೊಗ್ಗು! ಲವಂಗ ಹಿಡಿದು ನೋಡಿದರೆ ಚಿಕ್ಕ ಪಕಳೆಗಳು ಕಾಣುತ್ತವೆ.

...ಲಿ, ಈ ಚಳಿಗೆ ಬರೋಣ, ಚಳಿ ದೇಶದ ಜನ ಸ್ನಾನ ಮಾಡೋಲ್ಲ, ಅವರ ಬಟ್ಟೆ ಬೇಗ ...ಗೊಲ್ಲ, ಅವರು ಹೆಚ್ಚಾಗಿ ಬೆವರುವುದಿಲ್ಲವಾದ್ದರಿಂದ ಪ್ರೇಮಿಸಿದರೆ... ಬೇಡ, ಬೇರೆ ... ಮಾತಾಡೋಣ. ಚಳಿ ಕೆಲವು ದೇಶಗಳಲ್ಲಿ ಭೀಕರ ಅಸುಖದ ಕಾಲ. ಎತ್ತಿದ ಶೀಸೆ ...ತ ಕುಡಿಯುವ, ರಾತ್ರಿಯೆಲ್ಲ ರಂಜನೆಗಾಗಿ ಅಲೆಯುವಂತೆ ಮಾಡುವ, ದಿನ ಮತ್ತು ...ನ್ನು ಗಡಿಯಾರದಲ್ಲಿ ಮಾತ್ರ ನೋಡುವ, ನಿರಂತರ ಕತ್ತಲನ್ನು ತಾಳಲಾರದೆ ಆತ್ಮಹತ್ಯೆ ...ಳ್ಳುವ ಜನರಿರುವ ದೇಶಗಳಿವೆ. ಐಸ್‌ಲ್ಯಾಂಡ್, ಅಲಾಸ್ಕ, ನಾರ್ವೆ, ಸ್ವೀಡನ್, ಫಿನ್‌ಲ್ಯಾಂಡ್ ...ನ ದೇಶಗಳಲ್ಲಿ ಒಂದೂವರೆಯಿಂದ ನಾಲ್ಕು ತಿಂಗಳವರೆಗೆ ಸೂರ್ಯನ ದರ್ಶನವೇ ಇರುವುದಿಲ್ಲ. ...ಸುಗುವಿಗೆ ಈಗ ಎಷ್ಟು ವಯಸ್ಸು?' ಎಂದು ಯಾರಾದರೂ ನಿಮ್ಮನ್ನು ಕೇಳಿದರೆ 'ಐದು ...ಯಿತು', 'ಆರು ದಿನವಾಯಿತು' ಅನ್ನುತ್ತೀರಿ... ಆದರೆ ನಾರ್ವೆಯ ಚಳಿಗಾಲದಲ್ಲಿ 'ನನ್ನ ...ಗೆ ಐದು ರಾತ್ರಿ' ಅನ್ನುತ್ತಾರಂತೆ! ಸೂರ್ಯನೇ ಇಲ್ಲದಿದ್ದರೆ ದಿನ ಎಂದು ಹೇಳುವುದು ...

...ಗಟ್ಟುವ ಇರುವ ಚಳಿಗಾಲ ಮತ್ತು ದೀರ್ಘ ರಾತ್ರಿಗಳನ್ನು ಅವರು ಹೇಗೆ ಸಹಿಸುತ್ತಾರೆ? ಎಂದೂ ಒಟ್ಟಿಗೇ ಎರಡು ರಾತ್ರಿಗಳನ್ನು ಒಮ್ಮೆಗೆ ಅನುಭವಿಸದಿರುವ ನಮಗೆ ಇದು ಗೊತ್ತಾಗುವುದಿಲ್ಲ. ವರ್ಷದ ಎಂಟು ತಿಂಗಳು ಚಳಿಗಾಲಕ್ಕಾಗಿ ಸಿದ್ಧತೆ ನಡೆಸುವ ಐಸ್‌ಲ್ಯಾಂಡ್, ನಾರ್ವೆ, ಫಿನ್‌ಲ್ಯಾಂಡ್‌ನ ಜನ ರಾತ್ರಿಗಳನ್ನು ಹಗಲುಗಳನ್ನಾಗಿ ಮಾಡಲು ಸಾಕಷ್ಟು ವಿದ್ಯುಚ್ಛಕ್ತಿ ಉತ್ಪಾದಿಸುತ್ತಾರೆ. ಮನೆಗಳನ್ನು ಬೆಚ್ಚಗೆ ಕಾಯಿಸುತ್ತಾರೆ. ಅದೂ ಸಾಕಾಗದಿದ್ದರೆ ಸೂರ್ಯನಿರುವ ಜಾಗಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಅದು ಇಷ್ಟವಿಲ್ಲದಿದ್ದರೆ ಚಳಿಗಾಲವೆಲ್ಲ ಅವರನ್ನು ರಂಜಿಸುವ ನಾಟಕ, ಅಪೆರಾ, ಬ್ಯಾಲೆಗಳಿರುತ್ತವೆ; ಎಲ್ಲಕ್ಕಿಂತ ಹೆಚ್ಚಾಗಿ ಪುಸ್ತಕಗಳಿರುತ್ತವೆ, ಇಡೀ ಜಗತ್ತಿನಲ್ಲಿ ಪುಸ್ತಕಗಳನ್ನು ಬಹುವಾಗಿ ಪ್ರೀತಿಸುವ ಜನ ಐಸ್‌ಲ್ಯಾಂಡ್‌ನವರು. ಟಿವಿ, ವಿಡಿಯೋ ಮುಂತಾದವು ಕಣ್ಣಿಗೆ ಮಾತ್ರ. ಪುಸ್ತಕ ಹಾಗಲ್ಲ, ಅದು ನೇರವಾಗಿ ಮನಸ್ಸಿಗೆ ಹೋಗುತ್ತದೆ.

ಚಳಿ ದೇಶದ ರಂಗಭೂಮಿಗಳು, ಅಪೆರಾಭವನಗಳು, ಪುಸ್ತಕಭಂಡಾರಗಳು ಜನರನ್ನು ಹಿಡಿದು ನಿಲ್ಲಿಸಿ ಸಂತೋಷ ಕೊಡುತ್ತವೆ ಮತ್ತು ಚಳಿಗಾಲ ಇಸ್ಪೀಟ್ ಆಡುವವರಿಗೆ, ಚೆಸ್ ಬಲ್ಲವರಿಗೆ ಪ್ರೇಮ ಮಾಡಬಲ್ಲವರಿಗೆ, ಹರಟೆ ಕೊಚ್ಚುವವರಿಗೆ, ಕತೆ ಹೇಳಬಲ್ಲವರಿಗೆ ಹಬ್ಬ ಒದಗಿಸುತ್ತವೆ. ಹಾಗೆಯೇ ಹೊಸ ಹೊಸ ವಸ್ತುಗಳನ್ನು ಕಂಡುಹಿಡಿಯುವ ವಿಜ್ಞಾನಿಗಳಿಗೆ ಚಳಿ ದೇಶ ಸಾಕಷ್ಟು ವೇಳೆ ಒದಗಿಸುತ್ತದೆ. ಈಗ ಹೇಳಿ, ಇಡೀ ಜಗತ್ತಿನಲ್ಲಿ ಬೆಂಕಿಪೊಟ್ಟಣ ಮಾಡಿ ಅತ್ಯಂತ ಹಣ ಸಂಪಾದಿಸಿದ.

ದಾಖಲೆ ಸ್ಥಾಪಿಸಿದ ದೇಶ ಯಾವುದು?... ಸ್ವೀಡನ್. ಲೋಕವಿಖ್ಯಾತ ಕುರ್ಚಿ, ಮಂಚ, ಟೀಪಾಯ್ ಕಲ್ಪಿಸಿದವರು ಯಾರು? ನಾರ್ವೆ, ಸ್ವೀಡನ್ ಜನ. ಬೆಂಕಿಪೊಟ್ಟಣದಂಥ ಸಣ್ಣ ವಸ್ತುವನ್ನು ಕಂಡುಹಿಡಿದವನು ಮಹಾ ಶ್ರೀಮಂತನಾಗಿ, ಶ್ರೀಮಂತಿಕೆಯ ಮಂಕು ಕವಿದು ತೀರಿಕೊಂಡ. ಕಲ್ಲು ಸ್ಫೋಟಿಸುವಂಥ ಡೈನಾಮೆಟ್ ಕಂಡುಹಿಡಿದವನು ಜಗತ್ತಿನ ಮಹಾಯುದ್ಧದಲ್ಲಿ ಲಕ್ಷಾಂತರ ಯೋಧರ ಸಾವಿಗೆ ಕಾರಣನಾಗಿ ಪರಿತಪಿಸಿ ತನ್ನ ಹಣವನ್ನೆಲ್ಲ ಒಂದೆಡೆ ಇಟ್ಟು ಅದರ ಬಡ್ಡಿಯಲ್ಲಿ ನೊಬೆಲ್ ಬಹುಮಾನ ದೊರೆಯುವಂತೆ ಮಾಡಿದ. ಅವನ ಹೆಸರು ನೊಬೆಲ್.

ಕೆಲವರು ಹೇಳುವಂತೆ ಕೈಗಾರಿಕಾ ಕ್ರಾಂತಿಯಾದದ್ದು ಸ್ಕಾಟ್ಲೆಂಡಿನ ಚಳಿಯಿಂದಾಗಿ. ಇಂಗ್ಲೆಂಡಿಗೆ ಬಹು ಬುದ್ಧಿವಂತ ವಿಜ್ಞಾನಿಗಳು ಬಂದದ್ದು ಸ್ಕಾಟ್ಲೆಂಡ್‌ನಿಂದ. ಅವರು ಕಂಡುಹಿಡಿದ ವಸ್ತುಗಳು ಜಗತ್ತನ್ನೇ ಬದಲಿಸಿದವು.


ಚಳಿ... ಬೆಂಗಳೂರಿನ ಚಳಿ ಬಹಳ ತೀವ್ರ ಮತ್ತು ಮೊನಚು ಎಂದು ನಾನು ಜಂಬಕೊಚ್ಚಿಕೊಳ್ಳುತ್ತಿದ್ದಾಗ ರಾಯಚೂರಿನವರು ನಕ್ಕರು. 'ನೀವು ರಾಯಚೂರಿಗೆ ಬಂದು ನೋಡಿಬೇಕ್ರಿ–ಚಳಿ ಕೊರೆದುಹಾಕತ್ತೈತಿ!" ಅಂದನೊಬ್ಬ. ಆದರೆ ಮಡಿಕೇರಿ, ಬಿಳಿಗಿರಿರಂಗನ ಬೆಟ್ಟ, ಚಿಕ್ಕಮಗಳೂರು, ದಾಂಡೇಲಿಯ ಚಳಿ ಸುಂದರ ಕೂಡ. ಮಡಿಕೇರಿಯಲ್ಲಿ ಎನ್.ಟಿ.ರಾಮರಾಯರ ಪಾನನಿರೋಧ ನಡೆಯುವುದಿಲ್ಲ, ಮಲೆನಾಡಿನಲ್ಲಿ ಕೂಡ. ಮದ್ಯಪಾನ ಜನಕ್ಕೆ ಅಗತ್ಯ, ಮಡಿಕೇರಿಯಲ್ಲಿ ವಿಸ್ಕಿ ಕಂಬಳಿಯಂತೆ, ಬೆಚ್ಚನೆಯ ಮನೆಯಂತೆ, ಪ್ರೇಯಸಿಯಂತೆ. ಅದು ಬೇಡವೆನ್ನುವವನು ಕೆಟ್ಟವನಾಗಿ ಕಾಣುತ್ತಾನೆ.

ಇನ್ನೂ ಎಲೆ ಉದುರುತ್ತಿಲ್ಲ, ಮರಗಳು ಬೆತ್ತಲಾಗುತ್ತಿಲ್ಲ, ಚಿಗುರು ಬರುತ್ತಿಲ್ಲ, ಹೂಗಳು ಅರಳಿ ನಿಲ್ಲುತ್ತಿಲ್ಲ, ಆದರೆ ಅವುಗಳೆಲ್ಲವೂ ಕಲ್ಪನೆಯಲ್ಲಿ ವಿಜೃಂಭಿಸುತ್ತವೆ.

ಇಷ್ಟೆಲ್ಲ ಬರೆಯುವುದನ್ನು ನೋಡಿ 'ಈಗ ಹೇಗಿದ್ದೀರಿ? ಆರೋಗ್ಯ ಹೇಗಿದೆ?' ಎಂದು ನೀವು ಕೇಳಬಹುದು. ಮೊನ್ನೆ ಹೊಸವರ್ಷ ಸ್ವಾಗತಿಸಲು ಮೈಸೂರಿಗೆ ಹೋದೆ. ಅಲ್ಲಿ ನನ್ನ ಪರಿಚಿತರು ಸೇರಿದ್ದರು. ಒಬ್ಬರು ಹೇಳಿದರು. 'ಈಗ ತುಂಬ ಚೆನ್ನಾಗಿ ಕಾಣಿಸ್ತೀರಿ.'


'ಚಳಿಗಾಲದಲ್ಲಿ ಕಂಡದ್ದೆಲ್ಲ ಕಲ್ಪನೆಯೊಂದಿಗೆ ಬೆರೆತಿರುತ್ತೆ, ಆದರೆ ಪರವಾಗಿಲ್ಲ, ಅಷ್ಟೇನೂ ತೊಂದರೆ ಇಲ್ಲ, ಒಂದು ಕಣ್ಣು ಇನ್ನೂ ಏನೇನೂ ಕಾಣುತ್ತಿಲ್ಲ, ಇನ್ನೊಂದು ಕಣ್ಣು... ಸದ್ಯಕ್ಕೆ ಸರಿಯಾಗಿರುವ ಕಣ್ಣಿಗೆ ಕೃತಜ್ಞತೆ ಹೇಳುತ್ತಾ ನೋಡುತ್ತಿದ್ದೇನೆ. ನೋಡಿ ಚಳಿಯಲ್ಲಿ ಆ ಅವಿವೇಕಿ ಹುಡುಗಿ ತೆಳ್ಳನೆ ಲಂಗದಲ್ಲಿ ಓಡಾಡುತ್ತಿದ್ದಾಳೆ....'

ಜನವರಿ 11, 1995



ನಿತ್ಯಾನಂದನ ಡಿಂಗ್‌ಡಾಂಗ್ ಚಿಕಿತ್ಸೆ

ಎಚ್. ಎಲ್. ಕೇಶವಮೂರ್ತಿ



ಅಣಕ

ರಾಮಾಯಣ, ಮಹಾಭಾರತ ಮುಂತಾದ ಪುರಾಣ ಪುಣ್ಯಕತೆಗಳನ್ನು ಕೇಳಿರದ ಕನ್ನಡಿಗರು ಇದ್ದರೂ ಇರಬಹುದು. ನಿತ್ಯಾನಂದ ಪುರಾಣ ಕೇಳದವರೇ ಪಾಪಿಗಳು. ಇದನ್ನು ಕೇಳುತ್ತಿದ್ದಾಗ ಪುಂಡಲೀಕ .ಶೇಟ್ ಅವರು ಹೇಳುತ್ತಿದ್ದ 'ಡಿಂಗ್ ಡಾಂಗ್' ನೆನಪಾಯಿತು. ಅಲ್ಲಪಾ ಎಲ್ರುಗೂ ಗೊತ್ತಿರೋದ್ನ ನೀನೂ ಯಾಕೆ ಕೊರೀತೀಯಾ ಅಂದರೆ....

ನಾಗರಿಕ ಜನ ಅನ್ನೋದು ದ್ವಂದ್ವದಲ್ಲಿ ಬಿದ್ದು ನರಳ್ತಾ ಇದೆ. ಹಣ ಮಾಡಬೇಕು ಅನ್ನೊ ಆದಮ್ಯ ಆಸೆ. ಮಾರ್ಗ ಮುಖ್ಯ ಅಲ್ಲ ಅನ್ನುತ್ತೆ..... ಮಾಡ್ತಾರೆ. ಪಾಪಪ್ರಜ್ಞೆ ಕಾಡೋಕೆ ಪ್ರಾರಂಭ ಆಗುತ್ತೆ. ಕಾವಿಧಾರಿಗಳ ಪಾದ ಪದ್ಮಂಗಳಿಗೆ ಒಂದಷ್ಟು ಸುರಿದು ನೆಮ್ಮದಿ ಸಿಕ್ತು ಅಂದ್ಕೋತಾರೆ. ಇದು ಸುಖಾಸುಮ್ಮನೆ ಆಗುವ ಕೆಲಸ ಅಲ್ಲ, ಅದಕ್ಕೆ ನಂಬಿಕೆ ಬೇಕು. ಕಾವಿಧಾರಿಗಳೂ ಹಲವು ಮಾರ್ಗೋಪಾಯ ಕಂಡುಕೊಂಡಿದ್ದಾರೆ. ತರಹೇವಾರಿ 'ಚಿಕಿತ್ಸೆ' ನೀಡುತ್ತಾರೆ. ಒಬ್ಬೊಬ್ಬರದ್ದು ಒಂದೊಂದು ವಿಶಿಷ್ಟ ರೀತಿಯ ಚಿಕಿತ್ಸೆ. ಇದು ವಿಶಿಷ್ಟವಾದಷ್ಟೂ ರೋಗಿಭಕ್ತರ ಬರುವಿಕೆ ಹೆಚ್ಚಿರುತ್ತೆ. ನಮ್ಮ ಈ ನಿತ್ಯಾನಂದ ಸಾರು 'ಸ್ಪರ್ಶ ಚಿಕಿತ್ಸೆ' ನೀಡುತ್ತಾರಂತೆ. ದೈಹಿಕ, ಮಾನಸಿಕ ಕಾಯಿಲೆಗಳೆಲ್ಲ ಇದರಿಂದ ಮಾಯವಾಗಿ ಆಧ್ಯಾತ್ಮಿಕ ದೃಢತೆ ಸಿಗುತ್ತಂತೆ!

ಅದೆಂಗೆ ನಿನಗೆ ಗೊತ್ತಾಯ್ತು? ನೀನೋಗಿದ್ದ ಅಂದ್ರೆ ನಿತ್ಯಾನಂದ ಸ್ವಾಮಿಗಳೇ ಸುದ್ದಿಗೋಷ್ಠಿಯಲ್ಲಿ ಇದನ್ನು ಬಹಿರಂಗಗೊಳಿಸಿದ್ದಾರೆ. ಪಾಪ... ಅವರ ಮಾತುಗಳನ್ನು ನಂಬುವುದಾದರೆ.... ಎಂತಹ ಸನ್ನಡತೆ ಸ್ವಾಮೀಜಿ ಅವರು ಏನು ಕತೆ. ಲೋಕಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ನಿಷ್ಕಲ್ಮಷ, ಆಧ್ಯಾತ್ಮಿಕ ಸರ್ವಸಂಗ ಪರಿತ್ಯಾಗಿಗಳಾದ ಅವರ ಮೇಲೇ ಎಂತೆಂತಹ ಆರೋಪಗಳು ಬಂದವು ಏನು ಕತೆ. ಅದಕ್ಕೆಲ್ಲ ಅವರು ತಡವಾಗಿ ಉತ್ತರ ಕೊಟ್ಟಿದ್ದಾರೆ. ಅವರು ಅದ್ಯಾವುದೋ ಸಿನಿಮಾ ತಾರೆ ಸಂಗಡ 'ಡಿಂಗ್ ಡಾಂಗ್' ಮಾಡ್ತಿದ್ದನ್ನ ವಿಡಿಯೋ ಚಿತ್ರೀಕರಣ ಮಾಡಿ ನಿತ್ಯಾನಂದ ಪುರಾಣಕ್ಕೆ ನಾಂದಿ ಹಾಡಿದ್ರಲ್ಲಾ... ಅದೆಲ್ಲ ನಕಲಿ ಅಂತೆ ಕಣ್ರೀ.... ಇವರು 'ಡಿಂಗ್ ಡಾಂಗ್' ಮಾಡಿದ್ದೇ ನಕಲೀ ವೇಷದಲ್ಲಾ ಅಂದ್ರೆ ಅವರು ಮಾಡೇ ಇಲ್ವಂತೆ ಕಣ್ರಿ, ಅಂತೀನಿ. ಅದ್ಯಾರೋ ಪ್ರಭಾವಶಾಲಿ ವ್ಯಕ್ತಿಗಳು ಇದರ ಹಿಂದೆ ಇದ್ದಾರಂತೆ. ಅವ್ರು ಇವರಿಗೆ ಹಿಂಗೆ ಹೆದರಿಸಿ ದುಡ್ಡು ಕೀಳಬೇಕು ಅಂತ ಸಂಚು ರೂಪಿಸಿದ್ದರಂತೆ. ಅದ್ಕೆಲ್ಲ ಸ್ವಾಮಿಗಳು ಹೆದರ್ತಾರಾ.... ಕೊಡೋಕೆ ಸಾಧ್ಯ ಇಲ್ಲ ಅಂದರಂತೆ. ಪ್ರಭಾವೀ ವ್ಯಕ್ತಿಗಳು ಯಾರು ಅಂತ ಕೇಳಿದ್ಕಕ್ಕೆ 'ಸೂಕ್ತ ಸಮಯದಲ್ಲಿ ಬಹಿರಂಗಪಡಿಸುತ್ತೇನೆ' ಅಂದವ್ರೆ. ರಾಜಕಾರಣಿಗಳ ಮಾತಿನಂತೆ ಕಾಣ್ತದೆಯಲ್ಲ ಅಂದುಕೋ ಬೇಡಿ, ಸದ್ಯ, ಕ್ಯಾಸೆಟ್ಟಿನಲ್ಲಿರೋದು ಅವರು ಅಲ್ಲವೇ ಅಲ್ಲವಂತೆ. ಹೆಂಗಸಿತ್ತಲ್ಲ ರಂಜಿತಾನೋ ಪಂಜಿತಾನೋ ಅದು ಅದೇನಾ ಅನ್ನೊ ಸುದ್ದೀಗೆ ಹೋಗಿಲ್ಲ, ಯಾಕೆ ಹೋಗಿಲ್ಲ ಅಂದ್ರೆ ಆಕೇನೆ ಅದರಲ್ಲಿರೋದು ನಾನಲ್ಲ ಅಂದಿದ್ಲಲ್ಲ ಅದ್ಕೇ. ಒಟ್ಟಿನಲ್ಲಿ ಅದರಲ್ಲಿ ಕಾಣಿಸ್ತೋ ಇಬ್ಬರೂ 'ನಾನಲ್ಲ' ಅಂದಮೇಲೆ ಶಿಶುನಾಳರ ಮಾತುಗಳಲ್ಲೇ ಹೇಳುವುದಾದರೆ 'ನಾನೆಂಬೋದು ನಾನಲ್ಲ' ಎಂಬ ಮಾತಿನಂತೆ ಈ ಈರ್ವರೂ 'ಆಧ್ಯಾತ್ಮಿಕ ಶಿಖರ' ಏರಿದ್ದಾರೆ ಎಂದಾಯಿತು! ಇರಲಿ. ಹೈದರಾಬಾದಿನ ಪ್ರಯೋಗಶಾಲೆ ಈ ಸಿಡಿಗಳು ನಕಲಿ ಅಲ್ಲ ಅಸಲೀನೆ ಎಂದು ಹೇಳಿದೆಯಲ್ಲಾ ಅಂದರೆ ಅವರು ನೀಡಿರುವ ವರದಿಯೇ ತಪ್ಪಂತೆ! ಇನ್ನೆಂಗಪ್ಪ ತಿಳಿಯೋದು ಈ ಕ್ಯಾಸೆಟ್ಟುಗಳು ಅಸಲಿಯೋ ನಕಲಿಯೋ ಅಂತಾವ ಅಂದರೆ.... ಇವರು ಇಂಟರ್‌ನ್ಯಾಷನಲ್ ಸ್ವಾಮಿ ಅಲ್ವಾ.... ಅದ್ಕೇ ಅವ ಅಮೆರಿಕಾದ ಪ್ರಯೋಗಶಾಲೆಗೆ ಕಳ್ಸವ್ರಂತೆ. ಫಾರಿನ್‌ದೂ ಅಂದ್ಮೇಲೆ ಅಸಲೀನೆ ಇರುತ್ತೆ ಅಲ್ವಾ.... ಅದು 'ಇವು ನಕಲಿ ಸಿಡಿ' ಅಂತ ವರದಿ ನೀಡುತ್ತವೆ! ಆನಂತರ ಆ ವರದಿಯನ್ನು ಬಹಿರಂಗಗೊಳಿಸುತ್ತಾರಂತೆ!

ಇಂತಹ ಈ ಮಹಾನುಭಾವರ ಮೇಲೆ ಇದೊಂದೇ ಆಪಾದನೇನ ಇರೋದು. ಛೀ ಹೇಳಕ್ಕೇ ಹೇಸಿಗೆಯಾಗುತ್ತೆ. ಮಾಧ್ಯಮಗಳು 'ಇವನು ಪುರುಷನೇ ಅಲ್ಲ, ನಪುಂಸಕ' ಅಂತೆಲ್ಲ ಮಾನ ಹರಾಜು ಮಾಡವೆ. ಈ ಆಪಾದನೆಯಲ್ಲಿ ಹುರುಳಿದ್ದಲ್ಲಿ 'ಸ್ತ್ರೀಲೋಲ', 'ರಾಸಕ್ರೀಡೆ' ಮುಂತಾದ ಆಪಾದನೆಯಿಂದ ಮುಕ್ತನಾದಂತಾಗುವುದಲ್ಲ ಎನ್ನಬಹುದು. ಆದರೆ ಸ್ವಾಮಿಗಳಿಗೆ ಮುಖ್ಯ ಆಗಿರೋದು ಇಂತಹ ಆಪಾದನೆಯಿಂದ ಮುಕ್ತನಾಗುವುದಕ್ಕಿಂತ ಮಿಗಿಲಾಗಿ ಅವರ ಪುರುಷತ್ವವನ್ನೇ ಶಂಕಿಸಿರುವುದು! ಎಂದೇ 'ನಾನು ನಪುಂಸಕ ಅಲ್ಲ, ಸದೃಢವಾಗಿದ್ದೇನೆ' ಎಂದು ಘಂಟಾಘೋಷವಾಗಿ ಪತ್ರಿಕಾಗೋಷ್ಠಿಯಲ್ಲಿ ಸಾರಿದ್ದಾರೆ. ಪ್ರಯೋಗ ಮಾಡಿ ತೋರಿಸಿ ಎಂದು ಯಾರಾದರೂ ಕೇಳಿದ್ದರೆ ಪೂಜ್ಯರು ತಮ್ಮ ಪುರುಷ ಸಂಕೇತ ಕಾರ್ಯಪ್ರವೃತ್ತವಾಗುವುದನ್ನು ಪ್ರಾಕ್ಟಿಕಲ್ ಪ್ರಯೋಗದ ಮೂಲಕ ನಿರೂಪಿಸುತ್ತಿದ್ದರೋ ಏನೋ! ಆದರೆ ಯಾರೂ ಅಂತಹ ಪ್ರಶ್ನೆಯನ್ನು ಕೇಳಲಿಲ್ಲವಾಗಿ ಸಂಶಯ ಪರಿಹಾರಾರ್ಥ ಇದ್ದ ಒಂದು ಅವಕಾಶದಿಂದಲೂ ಮಹಾಜನತೆ ವಂಚಿತವಾಯಿತು!

ಈ ಪ್ರಶ್ನೆಗೆ ಉತ್ತರಿಸುತ್ತಿರುವಾಗಲೇ 'ಸ್ಪರ್ಶ ಚಿಕಿತ್ಸೆ' ವಿಷಯ ಪ್ರಸ್ತಾಪಿಸಿದರು. ಆ ಪೂಜ್ಯರು ಮಹಿಳಾಮಣಿಗಳ ಶಿರ ಹಾಗೂ ಮುಖ ಕಮಲವನ್ನು ತಮ್ಮ ಎರಡೂ ಹಸ್ತದಿಂದ ಹಿಡಿದಾಗ.... ಗುರುಗಳ ಪುಣ್ಯ ವಿಶೇಷದ ವಿದ್ಯುತ್ ಸಂಚಾರ ಮಾತ್ರವಲ್ಲ ಇನ್ನೂ ಅದೇನೇನೋ ಸಂಚಾರ ಆಗಿ ಎಲ್ಲ ಕಾಯಿಲೆಗಳೂ ಮಂಗಮಾಯ ಆಗುತ್ತವಂತೆ! ಇದಕ್ಕೂ ಜಗ್ಗದ ಜಗಮೊಂಡ ವೈರಾಣುಗಳೇನಾದರೂ ಇದ್ದಲ್ಲಿ ಹಸ್ತ ಸ್ಪರ್ಶ ಚಿಕಿತ್ಸೆ ಸಾಲದಾಗಿ... 'ದೇಹ ಸ್ಪರ್ಶ ಚಿಕಿತ್ಸೆ'ಯನ್ನೇ ಬಯಸಬಹುದು. ಭಕ್ತೆಯರ ಶ್ರೇಯಸ್ಸಿಗಾಗಿ ಅದನ್ನೂ ನೀಡಬೇಕಾಗಬಹುದು! ಯಾಕೆಂದರೆ **when one's skin touches other's skin there is no sin.....** ಎಲ್ಲಾ ಭಕ್ತರ ಒಳಿತಿಗಾಗಿ!

ಡಾಕ್ಟರೇಟ್ ಕೋಮುವಾದಿ!

'ಬುಡಿ ಸಾ... ಈ ಸಾಹಿತಿಗಳೆಲ್ಲ ತರ್ಲೆ ಬಡ್ಡೆತ್ತವು' ಎಂದು ವ್ಯಾಖ್ಯಾನಿಸುವ ಮೂಲಕ ಸಾಹಿತಿ ಗಣವನ್ನೇ ಸಾರಾಸಗಟಾಗಿ ಜಾಲಾಡಿದ್ದ ಕ್ಯಾತ.

ಸಾಹಿತಿಗಳು ಅಂದ್ರೆ ದೈವಾಂಶಸಂಭೂತರು ಅಂತಾರೆ. ಈ ತಿರುಕೆ ಬಡ್ಡೆತ್ತುದು ನೋಡಿದ್ರೆ ಹಿಂಗಂತಾ ಅದೆ. ಒಸಿ ಸದರ ಕೊಟ್ಟರೆ ದೇವರನ್ನೂ ಅದೇ ಕ್ಯಾಟಗರಿಗೆ ಸೇರಿಸಿಬುಡ್ತಾನೋ ಏನೋ!

'ಯಾಕ್ಲಾ ಹಂಗಂತಿ' ಅಂದೆ.

'ಇನ್ನೇನ್ಲಾ ಅದ್ಯಾರಿಗೋ ಡಾಕ್ಟರೇಟ್ ಕೊಡಬ್ಯಾಡಿ ಅಂದದ್ನೂ ಏನೋ ಘನಂಧಾರಿ ವಿಷಯ ಅನ್ನೊ ಹಂಗೆ ನಿರ್ಣಯ ಮಾಡವ್ರೆ' ಕೆರಳಿ ಕೆಂಡ ಆದ.

'ಅವರು ಯಾರೋ ಅಲ್ಲಪ್ಪ, ಡಾಕ್ಟರ್ ಚಿದಾನಂದ ಮೂರ್ತಿಯವರು ಅಂತ. ಅವರು ಘನವಾದ ವಿದ್ವಾಂಸರು, ಉತ್ಕೃಷ್ಟ ಸಂಶೋಧಕರು' ಅಂದೆ.

'ಅದು ಗೊತ್ತು ಸಾ. ಇನ್ನೂ ಒಂದು ಗೊತ್ತು, ಹಿಂದೂಗಳು ಬಿಟ್ಟರೆ ಬ್ಯಾರೆಯೋರು ಬದ್ಕಕ್ಕೇ ಅನರ್ಹರು ಅಂತ ಹೇಳ್ತಾರೆ ಅಂತಾನೂ ಗೊತ್ತು' ಅಂದ.


ಅವನ ಕೋಪಕ್ಕೆ ಕಾರಣ ಮೆಲುಕು ಹಾಕಿದೆ.

ಕಾವ್ಯ ವಾಚನ-ಗಾಯನಗೋಷ್ಠಿ.

ಅಧ್ಯಕ್ಷತೆ: ಯು.ಆರ್. ಅನಂತಮೂರ್ತಿ

ಕಾವ್ಯವಾಚನಕ್ಕೆ ಮುನ್ನವೇ ಅಧ್ಯಕ್ಷರ ಭಾಷಣ!

ಹೊಸ ಸಂಪ್ರದಾಯಕ್ಕೆ ತಳಹದಿ ಅವರಿಂದ.



ಯಾಕೆ ಹೀಗೆ ಮಾಡಿದರು?

ಅನಾರೋಗ್ಯ ನಿಮಿತ್ತ!

ಮನೆಯಲ್ಲೇ ವಿಶ್ರಾಂತಿ ತೆಗೆದುಕೊಳ್ಳಬಾರದಿತ್ತೆ?

ತೆಗೆದುಕೊಳ್ಳಬಹುದಿತ್ತು, ಆದರೆ ಒಂದು ಕರ್ತವ್ಯ ತುಡಿತ ಅವರು ಬರುವಂತೆ ಮಾಡಿತು. ಅದೆಂದರೆ ಚಿದಾನಂದ ಮೂರ್ತಿಯವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಲು ನಿರ್ಧರಿಸಿತ್ತು, ರಾಜ್ಯಪಾಲರು ಅದಕ್ಕೆ ತಡೆ ಒಡ್ಡಿದ್ದರು. ಇದರ ವಿರುದ್ಧ 'ಕೆಂಡ ಕಾರಲು' ವೇದಿಕೆಗೆ ಬಂದಿದ್ದರಂತೆ! ಕಾರಿಯೂಬಿಟ್ಟರು!

ವಿದ್ವಾಂಸರೊಬ್ಬರಿಗೆ ಆದ ಅಪಮಾನ, ಅಗೌರವದಿಂದ ಅವರ ಮನಸ್ಸು ನೊಂದಿರಬಹುದು. ಇದರ ಪರಿವೆ ಇಲ್ಲದ ಹಲವರಿಗೆ ರಾಜ್ಯಪಾಲರ ವಿರುದ್ಧ ಪ್ರತಿಭಟಿಸಲು ಅವಕಾಶ ಒದಗಿಸಿದ್ದಂತೂ ಸತ್ಯ. ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಯಾವತ್ತೂ ರಾಜ್ಯದ ನೆಲ, ಜಲದ ಲೂಟಿಯ ಬಗ್ಗೆ ದನಿ ಎತ್ತದಿದ್ದರೂ 'ಕನ್ನಡದ ಸುದ್ದಿಗೆ ಬಂದರೆ ಹುಷಾರ್' ಎಂದು ಗಂಡಸ್ತನ ಮೆರೆದರು! ಮುಖ್ಯಮಂತ್ರಿಗಳಿಗಂತೂ ರಾಜ್ಯಪಾಲರ ಈ ನಡೆ 'ಕನ್ನಡ ಜನತೆಗೆ ಆದ ಅಪಮಾನ'ವಾಗಿ ತೋರಿತು!

ಇದೆಲ್ಲವನ್ನೂ ಕ್ಯಾತನಿಗೆ ವಿವರಿಸಿದೆ.

ಸಾಹಿತಿ ಆದವನು ಏನು ಬರೆಯುತ್ತಾನೊ ಅದರಂತೆ ನಡೆಯಬೇಕು. ರಾಜಕಾರಣಿ ತರಹ ವೇದಾಂತ ಹೇಳೋದು ಬದನೆಕಾಯಿ ತಿನ್ನೋಕೆ ಆಗಬಾರದು. ಹೀಗಲ್ಲವಾದರೆ 'ಅವನ ವಿದ್ವಾಂಸಕನಾವ ಬಗೀರಿ ಅತ್ಲಾಗಿ' ಎನ್ನುವುದು ಅವನ ಸಿದ್ಧಾಂತ.

ನುಡಿದಂತೆ ನಡೆಯಬೇಕು ನಿಜ. ಆದರೆ ಅದು ಸಾಧ್ಯನಾ ಅಂತ ಯೋಚಿಸುತ್ತಿದ್ದೆ, ಕ್ಯಾತನೇ ಮುಂದುವರೆಸಿದ.

'ಅಲ್ಲ ಸಾ ಈಗ ಡಾಕ್ಟರೇಟ್ ಕೊಡ್ತಾ ಅವ್ರಲ್ಲ ಅದು ಕೋಮುವಾದಿ ಚಮೂಗೊ? ವಿಧ್ವಾಂಸ ಚಮುಗೊ?'

ಯಾವ ಯಾವುದೋ ವಿಷಯವೆಲ್ಲ ತಲೆ ಒಳ ಬಂದು ಗೊಂದಲದ ಗೂಡಾಯಿತು. ಇವನ ವಾದ ಸರಣಿಯೇ ಮುಂದಾದರೆ ಯಾವ ವಿಶ್ವವಿದ್ಯಾನಿಲಯವೂ ಯಾರಿಗೂ ಗೌರವ ಡಾಕ್ಟರೇಟ್ ಪದವೀನೇ ನೀಡಲ ಸಾಧ್ಯವಾಗುವುದಿಲ್ಲವೋ ಏನೋ.... ಈ ಪ್ರಶಸ್ತಿ ಪಡೆ ಘನವಿದ್ವಾಂಸರ ಹಿನ್ನೆಲೆ ಕೆದಕಿದರೆ ಗೌ॰ 'ವ ಡಾಕ್ಟರೇಟ್ ಪದವಿ ನೀಡುವುದನ್ನೇ ನಿಷೇಧಿಸಬೇಕಾಗುತ್ತೇನೋ! ಅದ ಅವನಿಗೆ ತಿಳಿಸಿದೆ.

'ಆ ಕಾಲಾನೂ ದೂರ ಇಲ್ಲ ಸಾ' ಅಂದ ಅವ!

ಲಿಂಗಾಯತರು ಹಿಂದೂಗಳಲ್ಲ ಎಂಬುದು ಸರಿ



ಗೌರಿ ಲಂಕೇಶರು ಫೆ. 9, 2011ರ ಸಂಚಿಕೆಯಲ್ಲಿ ಬರೆದ 'ಯದ್ದಿ ಧರಿಸಿದ ಲಿಂಗ ದಿಟವಲ್ಲ ಪ್ರಭುವೆ!' ಲೇಖನ ನಮಗೆ ಸಂತೋಷದ ಜೊತೆಗೆ ಬತ್ತಿದ ಭರವಸೆಗೆ ಚೈತನ್ಯ ತುಂಬಿತು. ಅದಕ್ಕಾಗಿ ಗೌರಿ ಲಂಕೇಶರಿಗೆ ಹೃದಯಪೂರ್ವಕ ಅಭಿನಂದನೆಗಳು.

ಲಿಂಗಾಯತ ಧರ್ಮದ ಪೂರ್ಣತೆ ಹಾಗೂ ಪಾವಿತ್ರತೆಯನ್ನು ಈ ಲೇಖನ ಪರಿಚಯಿಸಿತು. ಸ್ತ್ರೀಸಮಾನತೆಯನ್ನೊಳಗೊಂಡಂತೆ ಮೂರುನೂರ ಅರವತ್ತು ಜನ ವಚನಕಾರರು-ಅವರಲ್ಲಿ ಅರವತ್ತು ಜನ ಶರಣೆಯರು - ಹಾಗೂ ಏಳುನೂರ ಎಪ್ಪತ್ತು ಜನ ಅಮರಗಣಂಗಳು ಅಂದರೆ ಮುಕ್ತಾತ್ಮರನ್ನೊಳಗೊಂಡಂತಹ ಧರ್ಮ ಲಿಂಗಾಯತ ಧರ್ಮ. ಬಸವಾದಿ ಶರಣರನಂತರವೂ ಎಡಿಯೂರು ಸಿದ್ಧಲಿಂಗೇಶ್ವರರು, ಮಲಯ ಮಾದೇಶ್ವರರು, ನಿಜಗುಣ ಶಿವಯೋಗಿಗಳು, ಗುಬ್ಬಿ ಚನ್ನಬಸವೇಶ್ವರರು, ಸರ್ಪಭೂಷಣ ಶಿವಯೋಗಿಗಳು, ಷಣ್ಮುಖ ಶಿವಯೋಗಿಗಳು ಸೇರಿದಂತೆ ಅನೇಕ ಯೋಗಿಗಳು, ಮಹಾತ್ಮರು ಈ ಧರ್ಮವನ್ನು ಬೆಳೆಸಿದರು. ಆದರೆ ಇವತ್ತು ಈ ಪವಿತ್ರ ಧರ್ಮವೇ ನಾಚಿಕೆ ಪಟ್ಟುಕೊಳ್ಳುವಂತೆ ಸನ್ಮಾನ್ಯ ಯಡಿಯೂರಪ್ಪನವರು ವರ್ತಿಸುತ್ತಿದ್ದಾರೆ.

ತಾವು ತಿಳಿಸಿದ ಹಾಗೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರಿಂದಾಗಿ ಲಿಂಗಾಯತ ಸಮುದಾಯಕ್ಕೆ (ಧರ್ಮಕ್ಕೆ) ಲಾಭಕ್ಕಿಂತ ನೂರುಪಟ್ಟು ನಷ್ಟ ಉಂಟಾಗಿದೆ. ಲಿಂಗಾಯತ ಮಠಗಳ ನಿಜವಾದ ಆಸ್ತಿ ಬಸವತತ್ವ. ಆದರೆ ಈ ಮಠಗಳು ಕೋಟಿ ರೂಪಾಯಿಗಳಿಗೆ ತಮ್ಮ ಈ ಪವಿತ್ರ ಆಸ್ತಿಯನ್ನೇ ಯಡಿಯೂರಪ್ಪನ ಸರ್ಕಾರಕ್ಕೆ ಮಾರಿಕೊಂಡಿದ್ದಾರೆ. ಸಾರ್ವಜನಿಕರ ಹಣವನ್ನು ಯಡಿಯೂರಪ್ಪನ ಮೂಲಕ ತೆಗೆದುಕೊಂಡ ಮಠಾಧಿಪತಿಗಳಿಗೆ ಕಿಂಚಿತ್ತಾದರೂ ಸ್ವಾಭಿಮಾನ, ಸಮಾಜದ ಕಳಕಳಿಯಿಲ್ಲ ಎಂದೇ ಹೇಳಬೇಕು.

ಗೌರಿ ತಾಯಿಯವರೇ ತಮ್ಮ ತಂದೆಯವರ ಕಾಲದ ಲಂಕೇಶ್ ಪತ್ರಿಕೆಯನ್ನು ಓದಿದ್ದ ನಾನು ಇದುವರೆಗೂ ನಿಮ್ಮ ಪತ್ರಿಕೆಯನ್ನು ಹೆಚ್ಚಾಗಿ ಓದಿರಲಿಲ್ಲ. ಅಧಿಕಾರಿಗಳು, ರಾಜಕಾರಣಿಗಳು, ಮಠಾಧೀಶರು - ಇವರೆಲ್ಲರಲ್ಲೂ ಸಮಾಜ ನಂಬಿಕೆ ಕಳೆದುಕೊಂಡಿದೆ. ಇದಕ್ಕೆ ಪತ್ರಿಕೆಗಳು ಹೊರತಾಗಿಲ್ಲ. ಇಂಥಾ ಸ್ಥಿತಿಯಲ್ಲಿ ತಮಗಿರುವ ಸಮಾಜದ ಕಳಕಳಿಯ ನಿಷ್ಠೆ ನಮಗೆ ಸಂತಸ ತಂದಿದೆ. ನಿಮ್ಮ ಹೋರಾಟ ಸತ್ಯದ ಹಾದಿಯಲ್ಲಿದ್ದರೆ ದೇವರು ಎಂದೂ ನಿಮಗೆ ಸೋಲನ್ನುಂಟು ಮಾಡುವುದಿಲ್ಲ.

- ವೀರೇಶ್, ಈಮೇಲ್ ಮೂಲಕ

ಫೆಬ್ರವರಿ 2ರ ಸಂಚಿಕೆಯ ತಮ್ಮ 'ಕಂಡಹಾಗೆ' ಅಂಕಣದಲ್ಲಿ 'ದಲಿತರ ಜೀವಕ್ಕೆ ಬೆಲೆಯಿಲ್ಲವೇ?' ಓದಿದೆ. ತುಂಬಾ ಚೆನ್ನಾಗಿದೆ. ಈಗಿನ ಮಾಧ್ಯಮಗಳು ಪತ್ರಕರ್ತರು ರಾಜಕೀಯದವರಂತೆ ಪಕ್ಷಪಾತಿಗಳಾಗಿ ವರ್ತಿಸುತ್ತಿರುವುದು ದುರ್ದೈವದ ಸಂಗತಿ. 'ಚಾರ್ವಾಕ'ದಲ್ಲಿ ಬಲಿಪಶುವಾದ ಜನತೆ ಬಗ್ಗೆ ತುಂಬಾ ವಿವರವಾಗಿ ಬರೆದಿದ್ದಾರೆ. ಪತ್ರಿಕೆ ತುಂಬಾ ವಿಚಾರಪೂರ್ಣವಾಗಿ ಮೂಡಿಬಂದಿದೆ. ಕೆ.ವಿ.ಅಕ್ಷರ ಅವರ ಸೋಗಲಾಡಿತನ ಬಯಲಿಗೆಳೆದದ್ದು ಸಮಂಜಸವಾಗಿದೆ.

ತಾವು ಜನಪರ ಕಾಳಜಿಯೊಂದಿಗೆ ಪತ್ರಿಕೆ ತರುತ್ತಿರುವುದಲ್ಲದೇ, ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ನಿಮ್ಮ ತಂದೆಗಿಂತಲೂ ಒಂದು ಹೆಜ್ಜೆ ಮುಂದಿರುವಿರಿ, ಶುಭಾಷಯಗಳು.

-ಬಶೀರ್ ಅಹ್ಮದ್ ಹೊಸಮನಿ, ಬಾಗಲಕೋಟೆ

ಕಲ್ಕುಳಿ ವಿಠಲ್ ಹೆಗ್ಡೆಯವರು ಬರೆಯುತ್ತಿರುವ 'ಮಂಗನ ಬ್ಯಾಟೆ' ತುಂಬಾ ಕುತೂಹಲಕಾರಿಯಾಗಿದೆ. ಇದು ಸಾಮಾಜಿಕ ವಿಡಂಬನೆಯಾದರೂ ಅದರೊಳಗಿರುವ ಸೂಕ್ಷ್ಮತೆ ಮತ್ತು ಸಾಹಿತ್ಯಕ ನಿರೂಪಣೆಯಿಂದಾಗಿ ವಿಶಿಷ್ಟ ಸ್ಪರ್ಶ ಪಡೆದಿದೆ.

'ಲಂಕೇಶ್' ವಾರಪತ್ರಿಕೆಯು ತುಂಬಾ ಗಂಭೀರವಾಗಿಯೂ ಲವಲವಿಕೆಯಿಂದಲೂ ಮೂಡಿಬರುತ್ತಿದೆ. ಧನ್ಯವಾದಗಳು.

- ಪ್ರೇಮಲೀಲಾ, ಕಲ್ಬುರ್ಗಿ

ಕ್ಯಾಪ್ಟನ್ ಗೌರಿ ಲಂಕೇಶ್ ನೇತೃತ್ವದ ನಮ್ಮ ತಂಡಕ್ಕೆ 'ಸಂದೇಶ' ಪ್ರಶಸ್ತಿ ಲಭಿಸಿರುವುದು ನಮ್ಮ ಸಾವಿರಾರು ಮಿತ್ರರನ್ನು ಸಂತೋಷಗೊಳಿಸಿದೆ. ಅವರೆಲ್ಲರೂ ಫೋನ್, ಈ-ಮೇಲ್ ಮತ್ತು ಪತ್ರಗಳ ಮೂಲಕ ಶುಭಾಷಯಗಳನ್ನು ಹೇಳಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು.

-ಲಂಕೇಶ್ ಬಳಗ



ಬಿಟ್ಟಿ ದರ್ಶನ!

'ಸ್ವಾರ್ಥಿ', 'ವ್ಯವಹಾರಿಕ ಬುದ್ಧಿಯುವವನು', 'ದಯೆ-ದಾಕ್ಷಿಣ್ಯ ತೋರದವನು'.... ಛಾಲೆಂಜಿಂಗ್ ಸ್ಟಾರ್ ದರ್ಶನ್ ವಿರುದ್ಧ ಇಂತಹ ಸಾಕಷ್ಟು ಆರೋಪಗಳಿವೆ. ಇದಕ್ಕೆ ತಕ್ಕಂತೆ ಕಳೆದ ವಾರ ಕಲಾಸಾಮ್ರಾಟ ಎಸ್.ನಾರಾಯಣ್ ಕೂಡ "ದರ್ಶನ್‌ಗೆ ದುರಹಂಕಾರ. ನನ್ನ ಮನೆ ಮುಂದೆ ಲೈಟು ಕಂಬಕ್ಕೆ ಒರಗಿ ನಿಲ್ಲುತ್ತಿದ್ದವನು ಇವತ್ತು ನನ್ನಿಂದಲೇ ಗೌರವ ಬಯಸುತ್ತಿದ್ದಾನೆ" ಎಂದೆಲ್ಲ ಕಿಡಿಕಾರಿದ್ದಾರೆ.


ಇಂತಹ ದರ್ಶನ್ ಈಗ ಎಲ್ಲರೂ ಅಚ್ಚರಿಪಡುವಂತೆ ತನ್ನ ಆಪ್ತರಿಗೆ ಪುಕ್ಕಟೆಯಾಗಿ ಕಾಲ್‌ಶೀಟ್ ಕೊಡಲು ತೀರ್ಮಾನಿಸಿದ್ದಾರೆ. ಅವರ ಸಹೋದರ-ನಿರ್ದೇಶಕ ದಿನಕರ ತೂಗುದೀಪ್, ಸಂಗೀತ ನಿರ್ದೇಶಕ ವಿ. ಹರಿಕೃಷ್ಣ ನಿರ್ದೇಶಕ ಎಂ.ಡಿ. ಶ್ರೀಧರ್, ಛಾಯಾಗ್ರಾಹಕ ಕೃಷ್ಣಕುಮಾರ್ ಮತ್ತು ಗೀತ ರಚನೆಕಾರ ಕವಿರಾಜ್ ಜೊತೆಗೂಡಿ ನಿರ್ಮಿಸುತ್ತಿರುವ ಚಿತ್ರಕ್ಕೆ ದರ್ಶನ್ ಉಚಿತವಾಗಿ ಕಾಲ್‌ಶೀಟ್ ನೀಡಿದ್ದಾರಂತೆ.

ತೆಲುಗಿನಲ್ಲಿ ಸೂಪರ್ ಹಿಟ್ ಆಗಿದ್ದ 'ಡಾರ್ಲಿಂಗ್' ಚಿತ್ರವನ್ನೇ ಕನ್ನಡದಲ್ಲಿ ಭಟ್ಟಿ ಇಳಿಸಲಾಗುತ್ತಿದೆ. ಈ ಜೆರಾಕ್ಸ್ ಮಾಡುವ ಜವಾಬ್ದಾರಿಯನ್ನು ರಿಮೇಕ್ ಎಕ್ಸ್‌ಪರ್ಟ್ ಎಂ.ಡಿ. ಶ್ರೀಧರ್ ವಹಿಸಿಕೊಂಡಿದ್ದಾರೆ. ಇನ್ನು ಚಿತ್ರದ ತಂತ್ರಜ್ಞರೇ ನಿರ್ಮಾಪಕರಾಗಿರುವುದರಿಂದ ಚಿತ್ರ ಅತಿ ಕಡಿಮೆ ವೆಚ್ಚದಲ್ಲಿ ನಿರ್ಮಾಣವಾಗುವುದು ಗ್ಯಾರಂಟಿ.

ಆದರೆ ನಿಜವಾಗಲೂ ದರ್ಶನ್ ಈ ಚಿತ್ರಕ್ಕೆ ನಯಾಪೈಸೆ ಸಂಭಾವನೆ ಪಡೆಯುತ್ತಿಲ್ಲವೆ ಎಂದು ಯಾರೂ ತಪ್ಪಾಗಿ ತರ್ಕಿಸಬೇಕಿಲ್ಲ. ಯಾಕೆಂದರೆ ಈ ಚಿತ್ರದ ಟಿವಿ ಹಕ್ಕಿನಿಂದ ಬರುವ ಹಣ ಸಂಪೂರ್ಣವಾಗಿ ದರ್ಶನ್ ಕೈ ಸೇರಲಿದೆಯಂತೆ. ಎಲ್ಲರಿಗೂ ಗೊತ್ತಿರುವಂತೆ ದರ್ಶನ್ ನಟಿಸಿರುವ ಚಿತ್ರದ ಟಿವಿ ಹಕ್ಕಿಗೆ ಕನಿಷ್ಟ ಒಂದು ಕೋಟಿ ರೂಪಾಯಿ ಸಿಕ್ಕೇಸಿಗುತ್ತದೆ. ಅಂದಹಾಗೆ, ಸದ್ಯ ದರ್ಶನ್ ಈಗ ಒಂದು ಚಿತ್ರದಲ್ಲಿ ನಟಿಸಲು ಪಡೆಯುವ ಸಂಭಾವನೆಯೂ ಒಂದು ಕೋಟಿ ರೂಪಾಯಿಗಳು!

ಅಂದರೆ, ದರ್ಶನ್ ಉಚಿತವಾಗಿ ನೀಡಿದ್ದು ಏನನ್ನು?!

ಚೇತನಾ ಗಂಧರ್ವ ಗಾನ...



ಚೇತನ್ ಎಂಬ ಯುವ ನಟ ಈಗ ನಿರ್ದೇಶಕ ಕೂಡ ಆಗಿದ್ದಾನೆ.

'ಆ ದಿನಗಳು' ಎಂಬ ಚಿತ್ರದ ಮುಖಾಂತರ ಚೇತನ್ ಕನ್ನಡ ಚಿತ್ರರಂಗಕ್ಕೆ ನಾಯಕನಾಗಿ ಕಾಲಿಟ್ಟ ಆರಂಭದ ದಿನಗಳಲ್ಲೇ ಈತನಿಗೆ ಎಲ್ಲಿಲ್ಲದ ಬೇಡಿಕೆ ಬಂತು. ಅಷ್ಟೇ ಅಲ್ಲ, ಸುಂದರಾಂಗನಾದ ಈತನ ಜೊತೆ ನಟಿಸುವ ಆಸೆಯನ್ನು ನಂಬರ್ ಒನ್ ತಾರೆ ರಮ್ಯಾ ಮಾತ್ರವಲ್ಲದೆ ಚಿತ್ರರಂಗದ ಬಹುತೇಕ ನಟಿಯರು ವ್ಯಕ್ತಪಡಿಸಿದ್ದರು.

ಆದರೆ ಚೇತನನ ಧೋರಣೆ ಮತ್ತು ಧಿಮಾಕು ಸರಿಯಾಗಿರಲಿಲ್ಲ. ತಾನು ಮಾಮೂಲಿ ಸಿನಿಮಾಗಳಲ್ಲಿ ನಟಿಸುವುದಿಲ್ಲ, ಒಳ್ಳೆಯ ಕತೆಗಾಗಿ ಕಾಯುತ್ತೇನೆ ಎಂದೆಲ್ಲ ಹೇಳಿದ ಚೇತನ್ ಸುಮಾರು 70 ಚಿತ್ರಗಳನ್ನು ತಿರಸ್ಕರಿಸಿದ ನಂತರ ಒಪ್ಪಿಕೊಂಡಿದ್ದು 'ಬಿರುಗಾಳಿ' ಎಂಬ ಅಂದಕಾಲತ್ತಿಲ್ ಕತೆಯನ್ನು ಹೊಂದಿದ್ದ ಸಿನಿಮಾವನ್ನು.

ಡ್ಯಾನ್ಸ್ ಡೈರೆಕ್ಟರ್ ಹರ್ಷ ನಿರ್ದೇಶಿಸಿದ್ದ 'ಬಿರುಗಾಳಿ' ಬಾಕ್ಸ್ ಆಫೀಸ್‌ನಲ್ಲಿ ತರಗೆಲೆಯಂತೆ ಉರುಳಿತು. ಆ ಚಿತ್ರದ ನಿರ್ಮಾಪಕರು "ಸಿನಿಮಾದಿಂದ ದುಡ್ಡು ಬರಲಿಲ್ಲ, ಮಾತ್ರವಲ್ಲ, ಅದರ ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಲು ಉಪಯೋಗಿಸಿದ್ದ ಗೋಂದಿಗೆ ವೆಚ್ಚವಾದ ಹಣ ಕೂಡ ಬಾಕ್ಸ್ ಆಫೀಸಿನಲ್ಲಿ ಗಿಟ್ಟಲಿಲ್ಲ" ಎಂದು ಕಣ್ಣೀರಿಟ್ಟಿದ್ದರು.

ಈ ಸೋಲಿನ ನಂತರ ಚೇತನ್ ಮತ್ತೆ ಕೈಜೋಡಿಸಿದ್ದು 'ಆ ದಿನಗಳು' ಚಿತ್ರದ ಯುವ ನಿರ್ದೇಶಕ ಚೈತನ್ಯನೊಂದಿಗೆ. ಚೈತನ್ಯ ನಿರ್ದೇಶಿಸಿದ್ದ, ಚೇತನ್ ನಟಿಸಿದ್ದ 'ಸೂರ್ಯಕಾಂತಿ' ಹಿಟ್ ಆಗಬಹುದೆಂದು ಗಾಂಧಿನಗರಿಗಳು ಭಾವಿಸಿದ್ದರು. ಆ ಚಿತ್ರದಲ್ಲಿ ಚೇತನ್ ಪ್ರದರ್ಶಿಸಿದ್ದ ತನ್ನ ದೇಹದ ಹಲವಾರು ಫೋಟೋಗಳೂ ಪತ್ರಿಕೆಗಳಲ್ಲಿ ಪ್ರಕಟಗೊಂಡು ಚಿತ್ರಕ್ಕೆ ಪುಕ್ಕಟೆ ಪ್ರಚಾರವನ್ನೂ ನೀಡಿದ್ದವು. ಆದರೆ 'ಸೂರ್ಯಕಾಂತಿ' ಕೂಡ ಮುಗ್ಗರಿಸಿ ಚೇತನ್‌ನ ವೃತ್ತಿಜೀವನಕ್ಕೆ ಯಾವ ಕಾಂತಿಯನ್ನೂ ತರಲಿಲ್ಲ.

ಹೀಗೆ ಒಂದು ಗೆಲುವಿನ ನಂತರ ಎರಡು ಸೋಲುಗಳನ್ನು ಚೇತನ್ ಕಂಡಿದ್ದಾನೆ. ಈ ಮಧ್ಯೆ ಆತ ಇನ್ನೂ 60-70 ಆಫರ್‌ಗಳನ್ನು ತಿರಸ್ಕರಿಸಿದ್ದಾನಂತೆ. ಈ ಹಿಂದೆ ಗಾಂಧೀನಗರದ ಕೆಲ ದೊಡ್ಡ ನಿರ್ಮಾಪಕರಿಗೂ ಕಾಲ್‌ಶೀಟ್ ನೀಡಲು ಒಪ್ಪದಿದ್ದ ಚೇತನ್ ಈಗ ತಾನೇ ಒಂದು ಸಿನಿಮಾ ನಿರ್ದೇಶಿಸಲು ಮುಂದಾಗಿದ್ದಾನೆ.

ಕಾನ್‌ಫಿಡೆಂಟ್ ಗ್ರೂಪ್ ನಿರ್ಮಿಸುತ್ತಿರುವ 'ಗಂಧರ್ವ' ಚಿತ್ರದಲ್ಲಿ ಚೇತನನೇ ನಾಯಕ ನಟ ಮತ್ತು ನಿರ್ದೇಶಕನಾಗಿದ್ದು ಅದರ ಮುಹೂರ್ತ ಸದ್ಯದಲ್ಲೇ ನಡೆಯಲಿದೆಯಂತೆ.

ಕನ್ನಡ ಚಿತ್ರರಂಗದಲ್ಲಿ ಚೇತನ್ ಮೂರಕ್ಕೇರದಿದ್ದರೂ ಕೇವಲ ಮೂರು ಚಿತ್ರಗಳಲ್ಲಿ ನಟಿಸಿ ನಿರ್ದೇಶಕನ ಹುದ್ದೆಗೆ ಬಡ್ತಿ ಪಡೆಯುತ್ತಿರುವುದು ಅಚ್ಚರಿ ಹುಟ್ಟಿಸುತ್ತದೆ.

...ಗೂ ಒಬ್ಬ ...ಯ ಬೇಕು....!



...'ಗಿನ ಮನಸು' ಚಿತ್ರದಲ್ಲಿ ...ಪಂಡಿತ್ 'ನನಗೂ ಒಬ್ಬ ...ಬೇಕು....!' ಎಂಬ ...ಕುಣಿದಿದ್ದಳು. ಈಗ ...ಅದೇ ಹಾಡನ್ನು ...ಲೈಫ಼ಲ್ಲಿ ...ದ್ದಾಳಂತೆ!

... ...ಯರು ...ಗಸಗೀ

...ನ ಬಗ್ಗೆ ಬಾಯ್ಬಿಟ್ಟಿ ...ಡುವುದು ವಿರಳ. ...ಟೋಲ್ ಎನಿಸಿಕೊಂಡ ...ದರೂ ವೈಯುಕ್ತಿಕ ವಿಚಾರ ...ಮಗುಮ್ಮಾಗಿಬಿಡುತ್ತಾರೆ. ಆದರೆ ...ಮುಸ್ಥೆಯಂತೆ ಕಾಣುವ ರಾಧಿಕಾ ...ತನ್ನ ಕನಸಿನ ಹುಡುಗನಿಂದ ...ಹನಿಮೂನ್ ಹೇಗಿರಬೇಕು ... ತನಕ ಮೊನ್ನೆ ...ಬಿದ್ದಾಳೆ.

... ಚಿತ್ರರಂಗದ ಸದ್ಯದ ...ಹ್ರಾಟ್ ರಣಬೀರ್ ... ಲುಕ್ಸು ಮತ್ತು ಸುಂದರಾಂಗ ...ರೋಷನ್‌ನ ಮೈಕಟ್ಟು ರಾಧಿಕಾಗೆ ಬಲು ... ಆದ್ದರಿಂದ ಆಕೆಯ ಹುಡುಗ ... ಮೈಕಟ್ಟು ಹೊಂದಿದ್ದರೂ ... ಚಾಕೊಲೇಟ್ ಬಾಯ್ ಥರ ... ಮದುವೆಯ ನಂತರದ ...ಗೆ ಸುತ್ತಲೂ ನೀರಿರುವ ದ್ವೀಪ ...ವಾವುದಾದರೂ ಸುಂದರ ಕಡಲತೀರಕ್ಕೆ ...ಬೇಕಂತೆ!

... ಬೋಲ್ಡಾ ಬೋಲ್ಡಾಗಿ ಮಾತಾಡುವ ... 'ಅಂಜಾನಿ' ಅರ್ಜುನನ ಬಗ್ಗೆ ...ಮಾತ್ರ ನಾಚಿ ನೀರಾಗಿ ಉಗುಳು

ಜಾಕಿ ಹೈಲೈಟ್




ಇತ್ತೀಚೆಗೆ ಸೂರಿ ನಿರ್ದೇಶನದ, ಪುನೀತ್ ರಾಜ್‌ಕುಮಾರ್ ಅಭಿನಯದ 'ಜಾಕಿ' ಚಿತ್ರದ ಶತದಿನೋತ್ಸವ ಸಮಾರಂಭ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆಯಿತು. ವಜ್ರೇಶ್ವರಿ ಸಂಸ್ಥೆಯ ಸಂಪ್ರದಾಯದ ಪ್ರಕಾರ ಅತ್ಯಂತ ಸರಳವಾಗಿ ಆದರೆ ಅಷ್ಟೇ ಅರ್ಥಪೂರ್ಣವಾಗಿ ಈ ಸಮಾರಂಭವನ್ನು ರಾಘವೇಂದ್ರ ರಾಜ್‌ಕುಮಾರ್ ಏರ್ಪಡಿಸಿದ್ದರು. ಅಂದು ಜಾಕಿ ತಂಡದವರಿಗೆ ದುನಿಯಾ ವಿಜಯ್, ಜಗ್ಗೇಶ್, ಶ್ರೀನಗರ ಕಿಟ್ಟಿ, ಬರಗೂರು ರಾಮಚಂದ್ರಪ್ಪ, ಶ್ರೀನಾಥ್, ಬಸಂತಕುಮಾರ್ ಪಾಟೀಲ್, ಜಯಂತಿ, ಯೋಗೇಶ್... ಇನ್ನೂ ಅನೇಕ ಕಲಾವಿದರು ಪ್ರಶಸ್ತಿಗಳನ್ನು ನೀಡಿದರು.

ಆ ಸಮಾರಂಭದ ಒಂದು ವಿಶೇಷತೆಯೆಂದರೆ ಡಾ. ರಾಜ್‌ಕುಮಾರ್ ಅವರ ಬಹುತೇಕ ಎಲ್ಲಾ ಮೊಮ್ಮಕ್ಕಳು ವೇದಿಕೆಗೆ ಬಂದು ಪ್ರಶಸ್ತಿಯನ್ನು ನೀಡಿದ ಚಿತ್ರರಂಗದ ಕಲಾವಿದರನ್ನು ಸತ್ಕರಿಸಿದರು. ಒಂದು ರೀತಿಯಲ್ಲಿ ಡಾ. ರಾಜ್‌ಕುಮಾರ್ ಅವರ ಮೊಮ್ಮಕ್ಕಳನ್ನು ಪರೋಕ್ಷವಾಗಿ ಚಿತ್ರರಂಗಕ್ಕೆ ಪರಿಚಯಿಸಿದಂತಿತ್ತು. ಹೀಗಾಗಿ ಅಂದಿನ ಸಮಾರಂಭದಲ್ಲಿ ಬೇರೆ ನಟ-ನಟಿಯರಿಗಿಂತ ಅಣ್ಣಾವ್ರ ಮೊಮ್ಮಕ್ಕಳನ್ನು ನೋಡಿ ಜನ ಖುಷಿಪಟ್ಟರು. ಬಹುಶಃ ಇನ್ನೆರಡು ವರ್ಷಗಳಲ್ಲಿ ರಾಜ್‌ರ ಒಂದಿಬ್ಬರು ಮೊಮ್ಮಕ್ಕಳು ನಾಯಕ ನಟರಾಗಿ ಚಿತ್ರರಂಗಕ್ಕೆ ಕಾಲಿಟ್ಟರೂ ಆಶ್ಚರ್ಯಪಡಬೇಕಾಗಿಲ್ಲ. ಇದೇ 'ಜಾಕಿ' ಸಮಾರಂಭದ ಹೈಲೈಟ್!

ಕೆಂಪೇಗೌಡನ ಅಬ್ಬರ ಶುರು!


ಸುದೀಪ್ ನಾಯಕನಟನಾಗಿ ನಟಿಸುತ್ತಿರುವ 'ಕೆಂಪೇಗೌಡ' ಚಿತ್ರ ಬಹುತೇಕ ಸಂಪೂರ್ಣಗೊಂಡಿದೆ. ಮೊನ್ನೆ ಈ ಚಿತ್ರದ ಹಾಡುಗಳ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮ ಪಂಚತಾರಾ ಹೋಟೇಲ್ ಅಶೋಕದಲ್ಲಿ ವಿಜೃಂಭಣೆಯಿಂದ ನಡೆಯಿತು. ಸುದೀಪ್ ಈ ಚಿತ್ರದ ನಿರ್ದೇಶಕರೂ ಆಗಿರುವುದರಿಂದ ಅವರೇ ಆ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದರು. ಮುಖ್ಯ ಅತಿಥಿಯಾಗಿದ್ದ ಗೃಹ ಸಚಿವ ಆರ್. ಅಶೋಕ್, ನೈಸ್ ಕಂಪನಿಯ ಅಶೋಕ್ ಖೇಣಿ ಮತ್ತು ಕಾರ್ಮಿಕ ನಾಯಕ ಅಶೋಕ್... ಹೀಗೆ ಮೂವರು 'ಅಶೋಕ'ರು ಅಂದು ಸುದೀಪನನ್ನು ಯದ್ವಾತದ್ವಾ ಹೊಗಳಿದರು.



ಕ್ಯಾಸೆಟ್‌ಅನ್ನು ಬಿಡುಗಡೆ ಮಾಡಿದ ಶಿವರಾಜ್‌ಕುಮಾರ್ ಕೂಡ ಸುದೀಪ್ ಪ್ರತಿಭೆಯನ್ನು ಮನಸಾರೆ ಹೊಗಳಿದರು. ಈ ಚಿತ್ರದ ಹಾಡೊಂದರಲ್ಲಿ ಚಿತ್ರರಂಗದ ಅನೇಕ ಯುವ ನಾಯಕ ನಟರು ಸುದೀಪ್ ಮೇಲಿನ ಪ್ರೀತಿಗಾಗಿ ನಟಿಸಿದ್ದಾರೆ. ಆ ಯುವ ನಾಯಕರೆಲ್ಲ ಅಂದಿನ ಪಾರ್ಟಿಯಲ್ಲಿ ಹಾಜರಿದುದ್ದರಿಂದ ಪಾರ್ಟಿ ರಂಗೇರಿತು.

ಈ ಚಿತ್ರದ ಒಂದು ಹಾಡನ್ನು ಕ್ರೇಜಿಸ್ಟಾರ್ ರವಿಚಂದ್ರನ್ ಅವರು ನಿರ್ದೇಶಿಸಬೇಕೆಂಬುದು ಸುದೀಪ್ ಬಯಕೆಯಾಗಿತ್ತು. ಆ ಬಗ್ಗೆ ಇಬ್ಬರ ನಡುವೆ ಮಾತುಕತೆಯೂ ಮುಗಿದಿತ್ತು. ಆದರೆ ಇತ್ತೀಚೆಗೆ ರವಿಚಂದ್ರನ್ ಸಖತ್ ಬಿಜಿ ಆಗಿರುವುದರಿಂದ ಈ ಹಾಡನ್ನು ಅವರು ನಿರ್ದೇಶಿಸಲಾಗಲಿಲ್ಲವಂತೆ. ರವಿಚಂದ್ರನ್‌ಗಾಗಿ 'ಕೆಂಪೇಗೌಡ' ಕಾದುಕೂರಲು ಸಾಧ್ಯವಿರಲಿಲ್ಲವಾದ್ದರಿಂದ ನೃತ್ಯ ನಿರ್ದೇಶಕ ಹರ್ಷ ಈ ಹಾಡನ್ನು ನಿರ್ದೇಶಿಸಲಿದ್ದಾರಂತೆ. 'ವೀರಮದಕರಿ' ಚಿತ್ರದಲ್ಲಿ ಪ್ರೇಕ್ಷಕರನ್ನು ರಂಜಿಸಿದ ಸುದೀಪ್-ರಾಗಿಣಿ ಜೋಡಿ 'ಕೆಂಪೇಗೌಡ'ದಲ್ಲಿ ಮತ್ತೊಮ್ಮೆ ಮೆರೆಯಬಹುದು ಎಂಬುದು ಬಾಜಿದಾರರ ಲೆಕ್ಕಾಚಾರ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 23-2-2011



ರಂಗಪ್ಪ ಬಂದ್‌ಬಿಟ್ನಾ?

ರಮೇಶ್ ಅರವಿಂದ್ ನಟಿಸಿರುವ 'ರಂಗಪ್ಪ ಹೋಗ್ಬಿಟ್ನಾ' ಚಿತ್ರ ಈ ವಾರ ಬಿಡುಗಡೆಗೊಳ್ಳುತ್ತಿದೆ.

ಈ ಹಿಂದೆ ರಮೇಶ್ ನಟಿಸಿದ ಚಿತ್ರಗಳೆಂದರೆ ಪಟ್ಟಣ ಪ್ರದೇಶಗಳಲ್ಲಿ ಅವು ಉತ್ತಮ ಪ್ರದರ್ಶನ ಕಾಣುತ್ತವೆ ಎಂಬ ಮಾತು ಚಾಲ್ತಿಯಲ್ಲಿತ್ತು, ಆದರೆ ಇತ್ತೀಚೆಗೆ ರಮೇಶ್ ಸಿನಿಮಾ ಎಂದರೆ 'ಒಂದು ವಾರಕ್ಕಷ್ಟೆ' ಎಂಬಂತಾಗಿಹೋಗಿದೆ.



ರಮೇಶ್ ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ಕುಗ್ಗುತ್ತಾ ಹೋಗುತ್ತಿದೆ. ಇದಕ್ಕೆ ಕಾರಣ ಚಿತ್ರಗಳ ಆಯ್ಕೆಯಲ್ಲಿ ರಮೇಶ್ ಎಚ್ಚರ ತಪ್ಪಿದ್ದು ಮತ್ತು ಬೋರ್ಡಿಗಿಲ್ಲದ ಡೈರೆಕ್ಟರುಗಳ ಸಿನಿಮಾಗಳಲ್ಲಿ ನಟಿಸಿದ್ದು ಎಂಬುದು ಹಲವರ ಲೆಕ್ಕಾಚಾರ.

ಈಗ ರಮೇಶ್ 'ರಂಗಪ್ಪ ಹೋಗ್ಬಿಟ್ನಾ?' ಚಿತ್ರದ ಮುಖಾಂತರ ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ನಿರ್ದೇಶಕ ಎಂ.ಎಲ್. ಪ್ರಸನ್ನ. ಈ ಪ್ರಸನ್ನ ಈ ಹಿಂದೆ 'ಹಾಯ್ ಬೆಂಗಳೂರ್'ನಲ್ಲಿ ವರದಿಗಾರರಾಗಿದ್ದರು. ನಂತರ ಸಿನಿಮಾ ವ್ಯಾಮೋಹ ಹೆಚ್ಚಿಸಿಕೊಂಡು ಒಂದಷ್ಟು ದಿನ ಹಂಸಲೇಖಾ ಗರಡಿಯಲ್ಲಿ ಕೆಲಸ ಮಾಡಿ ಆನಂತರ ಎಸ್. ಮಹೇಂದರ್‌ರೊಂದಿಗೆ ಸಹ ನಿರ್ದೇಶಕರಾಗಿದ್ದರು.

ಶಶಾಂಕ್ ನಿರ್ದೇಶನದ 'ಸಿಕ್ಸರ್', 'ಮೊಗ್ಗಿನ ಮನಸು', 'ಕೃಷ್ಣನ್ ಲವ್ ಸ್ಟೋರಿ' ಚಿತ್ರಗಳಿಗೆ ಸಂಭಾಷಣೆ ಬರೆದಿದ್ದ ಪ್ರಸನ್ನ ದಯಾಳ್ ನಿರ್ದೇಶನದ 'ಶ್ರೀಹರಿಕಥೆ' ಚಿತ್ರಕ್ಕೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನೂ ಬರೆದಿದ್ದರು. ಸಾಹಿತ್ಯದ ಅಭಿರುಚಿಗಳೇ ಇಲ್ಲದ ಗಾಂಧಿನಗರದವರ ಮಧ್ಯೆ ಪ್ರಸನ್ನ ಈಗಾಗಲೇ ಕ್ರಿಯಾಶೀಲರೆನಿಸಿಕೊಂಡಿದ್ದಾರೆ.

ಪ್ರಸನ್ನರ ಚಿತ್ರ 'ರಂಗಪ್ಪ ಹೋಗ್‌ಬಿಟ್ನಾ' ರಮೇಶ್ ಅರವಿಂದ್ ಪಾಲಿಗೆ ಹೋಗ್‌ಬಿಟ್ಟಿರುವ ಜನಪ್ರಿಯತೆಯನ್ನು ಮತ್ತೆ ಮರಳಿಸಲಿ...

'ಸೂಸೈಡ್'ಗಾಗಿ 14 ವರ್ಷ ಕಾದವರು!



ಹದಿನಾಲ್ಕು ವರ್ಷಗಳ ಹಿಂದೆ ಆ ಯುವಕನಲ್ಲಿ ಸಿನಿಮಾವೊಂದನ್ನು ನಿರ್ದೇಶಿಸುವ ಉತ್ಕಟ ಬಯಕೆ ಉದ್ಭವಿಸಿತ್ತು. ಹೇಗಾದರೂ ಆ ಸಿನಿಮಾವನ್ನು ನಿರ್ದೇಶಿಸಿ ಅದನ್ನು ಪಿ.ಲಂಕೇಶರಿಗೆ ತೋರಿಸಬೇಕು ಎಂಬುದು ಆತನ ಗುರಿಯಾಗಿತ್ತು. ಆದರೆ ಆಗ ಆತನ ಜೇಬಿನಲ್ಲಿ 14 ರೂಪಾಯಿಗಳೂ ಇರಲಿಲ್ಲ.

ಕಷ್ಟಪಟ್ಟು ಹಣ ಸಂಪಾದಿಸಿ ಆ ಚಿತ್ರವನ್ನು ಮಾಡಲೇ ಬೇಕು ಎಂಬ ಗುರಿಯಿಂದಲೇ 14 ಸಾವಿರ ರೂಪಾಯಿ ಸಾಲ ಮಾಡಿ ಎಫ್‌ಎಂ 10 ಎಂ ನೆಗೆಟೀವ್ ಕ್ಯಾಮೆರಾ ಕೊಂಡು ಮೈಸೂರಿನಲ್ಲಿ ಸ್ಟುಡಿಯೋವೊಂದನ್ನು ತೆರೆದರು. ಈ 14 ವರ್ಷಗಳಲ್ಲಿ ದುಡಿದು ಕೂಡಿಟ್ಟ ಅಷ್ಟೂ ಹಣವನ್ನು ಸೇರಿಸಿ ಈಗ ಒಂದು ಚಿತ್ರವನ್ನು ನಿರ್ಮಿಸಿ ಸ್ವತಃ ಅವರೇ ಅದನ್ನು ನಿರ್ದೇಶಿಸಿದ್ದಾರೆ.

ಆ ಯುವಕನ ಹೆಸರು ಪ್ರಸಾದ್ ಗುರು. ಅವರು ತಯಾರಿಸಿರುವ ಚಿತ್ರದ ಹೆಸರು 'ಸೂಸೈಡ್'!

'ಸೂಸೈಡ್' ಇದೇ ವಾರ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಆದರೆ ಅದನ್ನು ನೋಡಲು "ಲಂಕೇಶರೇ ಇಲ್ಲ" ಎನ್ನುವುದು ಪ್ರಸಾದ್ ಗುರು ಅವರ ಕೊರಗು.

ಲಂಕೇಶ್ ಮತ್ತು ಪತ್ರಿಕೆಯ ದೊಡ್ಡ ಆರಾಧಕ ಪ್ರಸಾದ್. 'ಲಂಕೇಶ್'ನ ಯಾವುದೇ ಸಮಾರಂಭವಾದರೂ ಅಲ್ಲಿಗೆ ಹಾಜರಾಗಿ ಕಡೇ ಸಾಲಿನಲ್ಲಿ ಸದ್ದಿಲ್ಲದೆ ಕೂರುವುದು ಪ್ರಸಾದ್ ಗುರು ಅವರ ಶೈಲಿ. ಅವರು ಮೈಸೂರಿನಲ್ಲಿ 'ನೆನಪು' ಎಂಬ ಫೋಟೋ ಸ್ಟುಡಿಯೋ ನಡೆಸುತ್ತಿದ್ದಾರೆ.

'ಸೂಸೈಡ್' ಚಿತ್ರದ ಶೀರ್ಷಿಕೆ ನೆಗೆಟೀವ್ ಆಗಿದ್ದರೂ ಪ್ರಸಾದ್ ಗುರು ಪ್ರಕಾರ ಇಡೀ ಚಿತ್ರ ನೋಡುಗರಲ್ಲಿ ಪಾಸಿಟೀವ್ ಆಟಿಟ್ಯೂಡ್‌ಅನ್ನು ಮೋಟಿವೇಟ್ ಮಾಡುತ್ತದಂತೆ. ಕಲಾತ್ಮಕ ಚಿತ್ರಗಳನ್ನು ಇಷ್ಟಪಡುವ ಪ್ರೇಕ್ಷಕರಿಂದ ಹಿಡಿದು ಗ್ಯಾರೇಜ್ ಮೆಕಾನಿಕ್‌ಗಳ ತನಕ ಎಲ್ಲ ಬಗೆಯ ಪ್ರೇಕ್ಷಕರೂ ಈ ಚಿತ್ರವನ್ನು ನೋಡಬಹುದು ಎಂಬುದು ಪ್ರಸಾದ್ ಗುರು ನಂಬಿಕೆ.

ಪ್ರಸಾದ್ ಗುರು ಅವರ 14 ವರ್ಷದ ತಪಸ್ಸು ಫಲ ನೀಡುವಂತಾಗಲಿ.



ಹರಿ ಹರಿ ರೋಟರಿ!



ಕಳೆದ ನಾಲ್ಕು ವರ್ಷಗಳಿಂದ, ರೋಟರಿ ಕ್ಲಬ್‌ನವರು ಅತ್ಯುತ್ತಮ ನಾಯಕ-ನಾಯಕಿ ಪ್ರಶಸ್ತಿ ನೀಡುತ್ತಾ ಚಿತ್ರರಂಗದಲ್ಲೂ ಒಂದು ಕಾಲಿಟ್ಟಿದ್ದಾರೆ. ನಿರ್ಮಾಪಕ ಮುರಳೀಧರ ಹ್ಯಾಲಪ್ಪನವರು ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷರಾಗಿರುವುದೇ ಅದಕ್ಕೆ ಕಾರಣ.

ಮೊನ್ನೆ ಪ್ರಸಕ್ತ ಸಾಲಿನ 'ರೋಟರಿ ಅವಾರ್ಡ್' ನಟ ಯಶ್ ಮತ್ತು ನಟಿ ಹರಿಪ್ರಿಯಾ ಕೈಸೇರಿತು. ಅಸಲಿಗೆ ಈ ಎರಡೂ ಅವಾರ್ಡುಗಳು ಬೇರಿಬ್ಬರ ಪಾಲಾಗಬೇಕಿತ್ತು.

ಮೊದಲಿಗೆ ಈ ವರ್ಷದ ನಾಯಕನಾಗಿ ದಿಗಂತ್ ಸೆಲೆಕ್ಟ್ ಆಗಿದ್ದ. ಈ ವಿಚಾರವನ್ನು ದಿಗಂತನಿಗೆ ತಿಳಿಸಲು ಎಷ್ಟೇ ಪ್ರಯತ್ನಿಸಿದರೂ ದೂದ್ ಪೇಡಾ ರೋಟರಿ ಕ್ಲಬ್‌ನವರ ಕರೆಯನ್ನೇ ಸ್ವೀಕರಿಸಲಿಲ್ಲವಂತೆ. ಹೀಗಾಗಿ ದಿಗಂತ್ ಬದಲಾಗಿ ಯಶ್‌ನನ್ನು ಆಯ್ಕೆಮಾಡಿಕೊಂಡರಂತೆ.

ಹಾಗೆಯೇ ಈ ವರ್ಷದ ನಾಯಕಿಯಾಗಿ ಮೊದಲು ರಾಧಿಕಾ ಪಂಡಿತ್ ಆಯ್ಕೆಯಾಗಿದ್ದಳಂತೆ. ಆದರೆ ಪ್ರಶಸ್ತಿ ಆಯ್ಕೆ ಕಮಿಟಿಯಲ್ಲಿದ್ದ ಕಡುಬು ತಿನ್ನುವ ಗಣಪವೊಂದು 'ಅವಾರ್ಡ್ ಹರಿಪ್ರಿಯಾಗೇ ಕೊಡಬೇಕು' ಎಂದು ಸೊಂಡಿಲು ನೆಲಕ್ಕೆ ಬಡಿಯುತ್ತಾ ರಚ್ಚೆ ಹಿಡಿದು ಕುಳಿತುಬಿಟ್ಟಿತ್ತಂತೆ. ಹೀಗಾಗಿ ರಾಧಿಕಾಳನ್ನು ಕ್ಯಾನ್ಸಲ್ ಮಾಡಿ ಹರಿಪ್ರಿಯಾಗೆ ಅವಾರ್ಡ್ ಕೊಟ್ಟಿದ್ದಾರೆ.

ಈಗ ಪ್ರಶಸ್ತಿ ಪಡೆದಿರುವ ಹರಿಪ್ರಿಯಾ ಕೂಡ ನಮ್ಮ ಕನ್ನಡದ ಹುಡುಗಿಯೇ ಎನ್ನುವುದು ಸಮಾಧಾನದ ವಿಷಯ. ಈ ಪ್ರಶಸ್ತಿ ವಿಚಾರದಲ್ಲಿ ಲಾಬಿ ನಡೆದಿರುವುದು ಸತ್ಯವಾದರೂ ಹರಿಪ್ರಿಯಾ ಈ ಪುರಸ್ಕಾರಕ್ಕೆ ಅನರ್ಹಳೇನೂ ಅಲ್ಲ. ನಮ್ಮ ಕನ್ನಡದ ಕೆಲವೇ ನಾಯಕಿಯರಲ್ಲಿ ಹರಿಪ್ರಿಯಾ ಅತ್ಯಂತ ಮೋಹಕ ಸುಂದರಿ ಎನ್ನುವುದು ನಿಜ.

'ಹೀಗೆ ನಮ್ಮ ಕನ್ನಡದ ನಾಯಕಿಯರನ್ನು ಹುಡುಕಿ ಪ್ರಶಸ್ತಿ ಕೊಟ್ಟರೆ ಇನ್ನೂ ಹೆಚ್ಚಿನ ಸ್ಫೂರ್ತಿ ಸಿಗುತ್ತದೆ' ಎಂದು ಹರಿಪ್ರಿಯಾ ಹೇಳಿದ್ದಾಳೆ. ಆಕೆಯ ಬದುಕಿನಲ್ಲಿ ಇಂಥ ಸ್ಫೂರ್ತಿಗಳು ಮತ್ತಷ್ಟು ಚಿಮ್ಮುತ್ತಲಿರಲಿ...!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...